ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು

ಭಾನುವಾರ, 1 ಮಾರ್ಚ್ 2026

ಸಂಪುಟ 33, ಸಂಚಿಕೆ 121, ಪುಟಗಳು 14+4

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

RNI: 58231/94

REG No.KA/BG GPO/2532/2021-23

▸hosadigantha.com

▸epaper.hosadigantha.com

▸Hosadigantha Digital



ಕೋಲ್ಕತ್ತಾದಲ್ಲಿ ಇಂದು ವಿಂಡೀಸ್–ಭಾರತ ಕ್ವಾರ್ಟರ್

ಭಾರತಕ್ಕೆ ಮಾಡು ಇಲ್ಲವೇ ಮಡಿ ಪಂದ್ಯ, ಸೋತವರು ಹೊರಕ್ಕೆ

ಪಂದ್ಯ ಆರಂಭ: ಸಂಜೆ 7 ಗಂಟೆ

೧೩

ಮುಸ್ಲಿಂ ಲೀಗ್ ಹಾದಿ ತುಳಿದ ಕಾಂಗ್ರೆಸ್: ಮೋದಿ

೦೫

ಇರಾನ್ ಮೇಲೆ ಅಮೆರಿಕ–ಇಸ್ರೇಲ್ ದಾಳಿ | ಟೆಹ್ರಾನ್‌ನಿಂದ ಗಲ್ಫ್ ರಾಜಧಾನಿವರೆಗೆ ಕ್ಷಿಪಣಿ ಮಳೆ

ಖಮೇನಿ ನಿವಾಸ ಗುರಿ; ರಕ್ಷಣಾ ಸಚಿವ, ಕಮಾಂಡರ್ ಸಾವು | ಅಮೆರಿಕ ನೆಲೆಗಳ ಮೇಲೆ ಪ್ರತಿದಾಳಿ

ಮಧ್ಯಪ್ರಾಚ್ಯ ಸಮರಾಂಗಣ



• ಹೊಸದಿಲ್ಲಿ/ಟೆಹ್ರಾನ್/ವಾಷಿಂಗ್ಟನ್: ಮಧ್ಯಪ್ರಾಚ್ಯದಲ್ಲಿ ವರ್ಷಗಳಲ್ಲೇ ಅತ್ಯಂತ ಗಂಭೀರ ಉಲ್ಬಣ ಸನ್ನಿವೇಶ ನಿರ್ಮಾಣವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ನೇತೃತ್ವದಲ್ಲಿ ಶನಿವಾರ ಇರಾನ್ ವಿರುದ್ಧ ಜಂಟಿ ಸೈನಿಕ ಕಾರ್ಯಾಚರಣೆ ಆರಂಭಗೊಂಡಿದೆ. ಟೆಹ್ರಾನ್ ಡೌನ್‌ಟೌನ್ ಪ್ರದೇಶದಲ್ಲಿ ಭಾರೀ ಸ್ಫೋಟಗಳು ಸಂಭವಿಸಿದ್ದು, ಹೊಗೆಯ ಮೋಡಗಳ ದೃಶ್ಯಗಳು ವರದಿಯಾಗಿವೆ. ಇರಾನ್‌ನ ಶಾಲೆಯೊಂದರ ಮೇಲೆ ಅಮೆರಿಕ–ಇಸ್ರೇಲ್ ಪಡೆಗಳು ನಡೆಸಿದ ದಾಳಿಯಲ್ಲಿ ಕನಿಷ್ಠ 51 ಮಕ್ಕಳು ಮೃತಪಟ್ಟಿದ್ದಾರೆ.

ಇಸ್ರೇಲ್ ಸೈನ್ಯವು ತಿಂಗಳುಗಳ ನಿಕಟ ಮತ್ತು ಜಂಟಿ ಯೋಜನೆ ನಂತರ ಈ ದಾಳಿ ನಡೆದಿರುವುದಾಗಿ ತಿಳಿಸಿದೆ. ಪೆಂಟಗನ್ ಕಾರ್ಯಾಚರಣೆಗೆ 'ಆಪರೇಷನ್ ಎಪಿಕ್ ಫ್ಯೂರಿ' ಎಂದು ಹೆಸರಿಟ್ಟಿದ್ದು, ಇಸ್ರೇಲ್ ಇದನ್ನು 'ರೋರಿಂಗ್ ಲಯನ್' ಅಭಿಯಾನವೆಂದು ವಿವರಿಸಿದೆ.

ಖಮೇನಿ ನಿವಾಸ ಗುರಿ: ದಾಳಿಯ ಮೊದಲ ಅಲೆಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಟೆಹ್ರಾನ್ ನಿವಾಸದ ಸಮೀಪದ ಪ್ರದೇಶ ಗುರಿಯಾಗಿತ್ತು. ಅವರು ಆ ವೇಳೆಯಲ್ಲಿ ಅಲ್ಲಿದ್ದರೇ ಎಂಬುದು ಸ್ಪಷ್ಟವಾಗಿಲ್ಲ. ಮಾಧ್ಯಮ ವರದಿಗಳ ಪ್ರಕಾರ ಅಧ್ಯಕ್ಷ ಮಸೂದ್ ಪೆಜೆಷ್ಕಿಯನ್ ಮತ್ತು ಭದ್ರತಾ ವ್ಯವಸ್ಥೆಯ ಹಿರಿಯ ಅಧಿಕಾರಿಗಳ ಸಭೆ ನಡೆಯುತ್ತಿದ್ದ ಸ್ಥಳಗಳನ್ನೂ ಗುರಿಯಾಗಿಸಲಾಗಿದೆ.

ಕೆಲವು ಮಾಧ್ಯಮಗಳು ವರದಿ ಮಾಡಿರುವ ಪ್ರಕಾರ, ಅಯತೊಲ್ಲಾ ಅಲಿ ಖಮೇನಿ ಅವರು ಮೃತಪಟ್ಟಿದ್ದಾರೆ ಎನ್ನಲಾಗುತ್ತಿದೆ. ➡ಪುಟ 9

ಅಮೆರಿಕ, ಇಸ್ರೇಲ್ ದಾಳಿ

- ಇರಾನ್ ಸುಪ್ರೀಂ ಲೀಡರ್ ಖಮೇನಿ ಕಚೇರಿ ಸುತ್ತಮುತ್ತ ಪ್ರದೇಶ ಗುರಿಯಾಗಿಸಿ ದಾಳಿ
- ಇರಾನ್‌ನ ವಿವಿಧ ನಗರಗಳಲ್ಲಿ ಭಾರೀ ಸ್ಫೋಟ, ಪಶ್ಚಿಮ ಇರಾನ್ ಸೈನಿಕ ತಾಣಗಳು
- ದಕ್ಷಿಣ ಇರಾನ್‌ನ ಬಾಲಕಿಯರ ಶಾಲೆಯಲ್ಲಿ 57 ಜನ ಸಾವು

ಇರಾನ್ ಪ್ರತಿದಾಳಿ

- ಇಸ್ರೇಲ್ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ
- ಅಮೆರಿಕ ಸೇನಾ ನೆಲೆಗಳಾದ ಬಹ್ರೇನ್, ಕುವೈತ್ ಮತ್ತು ಕತಾರ್ ಸೇರಿ ವಿವಿಧೆಡೆ ದಾಳಿ

ಏನೆಲ್ಲಾ ಪರಿಣಾಮ?

- ಮಧ್ಯಪ್ರಾಚ್ಯದಲ್ಲಿ ವಿಮಾನ ಹಾರಾಟ ವ್ಯತ್ಯಯ
- ತಮ್ಮ ವಾಯುಪ್ರದೇಶ ತಾತ್ಕಾಲಿಕ ಮುಚ್ಚಿದ ಯುಎಇ ಮತ್ತು ಇರಾಕ್
- ಹೋರ್ಮುಜ್ ಜಲಸಂಧಿ ಪ್ರದೇಶದಲ್ಲಿ ಅಸ್ಥಿರತೆ ಉಂಟಾದರೆ ಜಾಗತಿಕ ತೈಲ ಮಾರುಕಟ್ಟೆಗೆ ಪೆಟ್ಟು



ಇರಾನ್ ರಾಜಧಾನಿ ಟೆಹರಾನ್ ಮೇಲೆ ಇಸ್ರೇಲ್ ಕ್ಷಿಪಣಿ ದಾಳಿ.



ಇಸ್ರೇಲ್, ಬಹ್ರೇನ್, ಕತಾರ್, ಯುಎಇ, ಸೌದಿ ಮೇಲೆ ಇರಾನ್ ದಾಳಿ

ಉದ್ವಿಗ್ನತೆಗೆ ಕಾರಣ?

- ಇತ್ತೀಚಿನ ಅಣು ಮಾತುಕತೆ ವಿಫಲವಾದದ್ದು ದಾಳಿಗೆ ಪ್ರಮುಖ ಕಾರಣ
- ಇರಾನ್ ಅಣು ಕಾರ್ಯಕ್ರಮ ಮತ್ತು ಕ್ಷಿಪಣಿ ಅಭಿವೃದ್ಧಿ ಕುರಿತು ಅಮೆರಿಕ ಆತಂಕ
- ಕಳೆದ ವರ್ಷ ನಡೆದ 12 ದಿನಗಳ ಯುದ್ಧದ ನಂತರವೂ ಮುಂದುವರಿದ ಉದ್ವಿಗ್ನತೆ

ಅಮೆರಿಕದ ಸೇನಾ ನೆಲೆಗಳೇ ಟಾರ್ಗೆಟ್

• ಪುಟ ೫

ಖಮೇನಿ ನಾಪತ್ತೆ

ಆಯತೊಲ್ಲಾ ಅಲಿ ಖಮೇನಿ ದಾಳಿಗೂ ಮೊದಲು ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ ಮತ್ತು ದಾಳಿಯ ನಂತರವೂ ಕಾಣಿಸಿಲ್ಲ. ಜೂನ್‌ನ 12 ದಿನಗಳ ಯುದ್ಧದ ವೇಳೆ ಅವರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ ಎಂದು ನಂಬಲಾಗಿತ್ತು.

ಬಂಕರ್‌ನಲ್ಲಿ ಭಾರತೀಯರು

ಇಸ್ರೇಲ್ ನಗರಗಳಲ್ಲಿ ಸೈರನ್ ಮೊಳಗುತ್ತಿದ್ದಂತೆ ಭಾರತೀಯ ಕಾರ್ಮಿಕರು ಮತ್ತು ಕುಟುಂಬಗಳು ಭೂಗತ ಬಂಕರ್‌ಗಳಲ್ಲಿ ಆಶ್ರಯ ಪಡೆದಿದ್ದಾರೆ. ಗುಜರಾತಿ ಸಮುದಾಯಕ್ಕೆ ಈವರೆಗೆ ಹಾನಿ ವರದಿಯಾಗಿಲ್ಲ. ಭಾರತ ಗಲ್ಫ್ ಪ್ರದೇಶದ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ ಸಂಯಮಕ್ಕೆ ಕರೆ ನೀಡಿದೆ.

ಇಂಧನ ಬೆಲೆ ಏರಿಕೆ ಆತಂಕ

ಕ್ರೈಸಿಸ್ ಗ್ರೂಪ್‌ನ ಇರಾನ್ ಪ್ರಾಜೆಕ್ಟ್ ನಿರ್ದೇಶಕ ಅಲಿ ವೈಜ್, ಯುದ್ಧ ವಿಸ್ತರಿಸಬಹುದೆಂದು ಎಚ್ಚರಿಸಿದ್ದಾರೆ. ಹೋರ್ಮುಜ್ ಜಲಸಂಧಿ ಮೂಲಕ ಜಗತ್ತಿನ ತೈಲ ಸರಬರಾಜಿನ ಸುಮಾರು ಐದನೇ ಭಾಗ ಸಾಗುತ್ತದೆ. ಅಲ್ಪ ಅಡಚಣೆ ಕೂಡ ಇಂಧನ ಬೆಲೆ ಏರಿಕೆಗೆ ಕಾರಣವಾಗಬಹುದು ಎಂದು ತಿಳಿಸಿದ್ದಾರೆ.

ಸುರಕ್ಷಿತವಾಗಿರಲು ಸೂಚನೆ

ಅಮೆರಿಕ ದಾಳಿಯ ನಂತರ ಇರಾನ್ ಮತ್ತು ಇಸ್ರೇಲ್‌ನಲ್ಲಿರುವ ಭಾರತೀಯರು ಅತ್ಯಂತ ಎಚ್ಚರಿಕೆಯಿಂದ ಇರಬೇಕು ಎಂದು ಕೇಂದ್ರ ಸರ್ಕಾರ ಸಲಹೆ ನೀಡಿದೆ.

ತಕ್ಷಣ ಉದ್ವಿಗ್ನತೆ ತಿಳಿಗೊಳಿಸಿ: ಭಾರತ

• ಪುಟ 9

ವಿಮಾನ ಹಾರಾಟ ವ್ಯತ್ಯಯ

• ಪುಟ 9

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಪುಷ್ಯ

ದಿನದ ಮಾತು

ಉತ್ತಮರ ನಡವಳಿಕೆ ವಿಚಿತ್ರ! ಅವರು ಸಂಪತ್ತನ್ನು ಹುಲ್ಲಿನಂತೆ ಹಗುರವಾಗಿ ಕಾಣುತ್ತಾರೆ. ಸಂಪತ್ತು ಬಂದಾಗ ಅದರ ಭಾರದಿಂದ ಬಾಗುತ್ತಾರೆ.

▲ ಚಾಣಕ್ಯ ನೀತಿ

ಹಾ.ತ.ಸಂ.ನ ವಿಷಯ ನಿಷೇಧ ಪಟ್ಟಿ

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ

ರಾಗಾ ಜೈಲಲ್ಲಿ ಕೂರಲು ತಯಾರಾ?: ಕೇಜ್ರಿ ಪ್ರಶ್ನೆ

• ಪುಟ ೫

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಜನ ಸಾವು

• ಪುಟ ೫

ಪ.ಬಂಗಾಳದ ಮತ ಪಟ್ಟಿ: 63 ಲಕ್ಷ ಹೆಸರು ಡಿಲೀಟ್

• ಪುಟ ೫

ಈ ಬಾರಿ ಸೂರ್ಯ ಮತ್ತಷ್ಟು ಪ್ರಖರ: ಐಎಂಡಿ

• ಪುಟ ೫

ಶಿಕ್ಷಣ ಕ್ಷೇತ್ರದಲ್ಲಿ ಆಗಿಲ್ಲ ನಿರೀಕ್ಷಿತ ಬದಲಾವಣೆ



• ಬೆಂಗಳೂರು: ಶಿಕ್ಷಣಕ್ಷೇತ್ರವನ್ನು ಅವಲೋಕಿಸಿದಾಗ ಗುಣಮಟ್ಟದ, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಶಿಕ್ಷಣ ದೊರಕುತ್ತಿದೆಯೇ ಎಂದು ಯೋಚಿಸಬೇಕಿದೆ. ಇದು ಶಿಕ್ಷಕರ ತಪ್ಪಲ್ಲ. ವ್ಯವಸ್ಥೆಯ ಪರಿಣಾಮವಾಗಿ ಜಾತಿ ವ್ಯವಸ್ಥೆ ಸಮಾಜದಲ್ಲಿ ಭದ್ರವಾಗಿ ನೆಲೆಯೂರಿರುವುದರಿಂದ ಶಿಕ್ಷಣದಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆ ಮಾಡಲು ಸಾಧ್ಯವಾಗಿಲ್ಲ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು. ಶನಿವಾರ ಅರಮನೆ ಮೈದಾನ ತ್ರಿಪುರವಾಸಿನಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವತಿಯಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ➡ಪುಟ 9

ಶೈಕ್ಷಣಿಕ ಮಹಾ ಸಮ್ಮೇಳನದಲ್ಲಿ ಸಿಎಂ



ಕರುಳು ಕಲಕುವ ಕೇರಳ ಸ್ಟೋರಿ

▸ ವಿನಾಯಕ ಭಟ್ಟ ಮೂರೂರು

ಲವ್ ಜಿಹಾದ್‌ಗೆ ಸಿಲುಕಿದ ಹಿಂದು ಹೆಣ್ಣುಮಕ್ಕಳ ಸ್ಥಿತಿ ಯಾರಿಗೂ ಬೇಡ. ಇತ್ತ ಮನೆಯಲ್ಲೂ ನಂಬಿಕೆ ಕಳೆದುಕೊಂಡು, ಅತ್ತ ಕಟ್ಟಿಕೊಂಡವನೂ ನಂಬಿಕೆ ಉಳಿಸಿಕೊಳ್ಳದೆ, ಅಲ್ಲೂ ಸಲ್ಲಲಾಗದೆ, ಇಲ್ಲೂ ಸಲ್ಲದ ತ್ರಿಶಂಕು ಸ್ಥಿತಿ.

ಆ ಹಿಂಸೆ ಯಾರಿಗೂ ಬೇಡ. ಕೆಲವರು ಅನಿವಾರ್ಯವಾಗಿ ಒಗ್ಗಿಕೊಂಡರೆ ಇನ್ನು ಕೆಲವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಅದಿಲ್ಲವಾದರೆ ಕೊಲೆಯಾಗುತ್ತಾರೆ. ಇದ್ಯಾವುದನ್ನೂ ಮಾಡಿಕೊಳ್ಳಲಾಗದವರು ಮಕ್ಕಳನ್ನು ಹೆರುವ ಯಂತ್ರವಾಗುತ್ತಾರೆ. ಲವ್ ಜಿಹಾದ್‌ಗೊಳಗಾದ ಹಿಂದು ಹೆಣ್ಣುಮಕ್ಕಳ ಇಂತಹ ಗೊಂದಲದ ಕರುಣಾಜನಕ ಸ್ಥಿತಿಯನ್ನು ಕೇರಳ ಸ್ಟೋರಿ 2 ಸಿನಿಮಾ ಕಟ್ಟಿಕೊಡುತ್ತದೆ. ಕೇರಳ ಸ್ಟೋರಿ ಸಿನಿಮಾ ಕೇರಳವನ್ನೆ ಗಮನದಲ್ಲಿರಿಸಿಕೊಂಡು, ಲವ್ ಜಿಹಾದ್ ನಡೆಯುವ ಬಗೆಯನ್ನು ತೋರಿಸಿತ್ತು. ಕೇರಳ ಸ್ಟೋರಿ 2 ಸಿನಿಮಾ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಕೇರಳದಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿ ಸಿನಿಮಾ ಕತೆ ರೂಪುಗೊಂಡಿದೆ. ಒಬ್ಬ ಮುಸ್ಲಿಂ ಹುಡುಗ ತನ್ನ ಹೆಸರು–ಧರ್ಮವನ್ನು ಸಂಪೂರ್ಣ ಮರೆಮಾಚಿ ಹಿಂದು ಹುಡುಗಿಯನ್ನು ಪ್ರೀತಿಸುತ್ತಾನೆ. ➡ಪುಟ 9

ವಿದ್ಯಾರ್ಥಿನಿ ಮೇಲೆ ಅತ್ಯಾಚಾರ: ಆರೋಪಿ ಧನಂಜಯ ಬಂಧನ

• **ದೇವನಹಳ್ಳಿ:** ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿಯ ಖಾಸಗಿ ಎಸ್‌ಎಲ್‌ಎಸ್ ವಸತಿ ಶಾಲೆ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಎಸಗಿ, ಮತ್ತೊಬ್ಬ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಯತ್ನ ನಡೆಸಿರುವ ಆರೋಪದಲ್ಲಿ ಶಾಲೆಯ ಮಾಲೀಕ, ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಈತನ ಪತ್ನಿಯನ್ನು ಇಲ್ಲಿನ ಪೊಲೀಸರು ಬಂಧಿಸಿದಾರೆ.

ವಸತಿ ಶಾಲಾ ಮಾಲೀಕ ಡಿ.ಎಸ್.ಧನಂಜಯ ಹಾಗೂ ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದ ಆರೋಪದಲ್ಲಿ ಆರೋಪಿ ಪತ್ನಿ ಶಾಲೆಯ ಪ್ರಾಂಶುಪಾಲೆ ಶೈಲಜಾ ಬಂಧಿತರು. ಇವರ ವಿರುದ್ಧ ದೇವನಹಳ್ಳಿ ಠಾಣೆಯಲ್ಲಿ ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ ಕಾಯ್ದೆ, 2012 ಪೋಕ್ಸೋ ಪ್ರಕರಣ ದಾಖಲಾಗಿದೆ. ಇಬ್ಬರನ್ನೂ ಬಂಧಿಸಲಾಗಿದೆ.

ಫೆ.9 ರಂದು ಪ್ರಕರಣ: ಬೆಂಗಳೂರು ಮೂಲದ ಅಕ್ಕ ತಂಗಿಯಾಗಿರುವ ಇಬ್ಬರು ವಿದ್ಯಾರ್ಥಿನಿಯರು ವಸತಿ ಶಾಲೆಯಲ್ಲಿ ಏಳು ಮತ್ತು ಎಂಟನೇ ತರಗತಿಯಲ್ಲಿ ಓದುತ್ತಿದ್ದರು. ಫೆ.9ರಂದು ಆರೋಪಿ ಪುಸಲಾಯಿಸಿ ಅದೇ ಶಾಲೆಯ ಕೊಠಡಿಯೊಂದರಲ್ಲಿ ಅಕ್ಕನ ಮೇಲೆ ಎರಡು ಬಾರಿ ಅತ್ಯಾಚಾರ ಎಸಗಿದ್ದಾನೆ. ನಂತರದಲ್ಲಿ ತಂಗಿ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆಂದು ದೂರಲಾಗಿದೆ. ಈ ವೇಳೆ ವಿದ್ಯಾರ್ಥಿನಿ ತಪ್ಪಿಸಿಕೊಂಡು ಬಾತ್ ರೂಂನಲ್ಲಿ ಅವಿತುಕೊಂಡಿದ್ದರಿಂದ ಈತನ ಪೈಶಾಚಿಕ ಕೃತ್ಯದಿಂದ ಬಚಾವಾಗಿದ್ದಾಳೆ. ನಂತರ ಮತ್ತೆ ಮೇಲೆ ಅತ್ಯಾಚಾರ ನಡೆಸಿದ್ದಾನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡ ಬಳಿಕ ಎಸಿಪಿ ಶ್ರೀಹರ್ಷ, ಪಿಐ ಉಮೇಶ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಬೈಲಾಂಜನೇಯ ಇದ್ದರು.

ರಾಮಬಾಣ



ಸಂಕೇತ್ ಕುಟುಂಬಕ್ಕೆ ಉದ್ಯೋಗ ನೀಡಿ: ಬಿವೈವಿ



• **ಶಿವಮೊಗ್ಗ:** ಹತ್ಯೆಯಾದ ಎಸ್‌ಎಸ್‌ಎಲ್ ವಿದ್ಯಾರ್ಥಿ ಊರುಗಡೂರಿನ ಸಂಕೇತ್ ಕುಟುಂಬಕ್ಕೆ ಹೆಚ್ಚಿನ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ಸರ್ಕಾರಿ ನೌಕರಿ ನೀಡುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರೊಂದಿಗೆ ಚರ್ಚಿಸುವುದಾಗಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಶನಿವಾರ ಊರುಗಡೂರಿನ ಸಂಕೇತ್ ಮನೆಗೆ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಹೆಚ್ಚಿನ ಪರಿಹಾರ ಹಾಗೂ ಸರ್ಕಾರಿ ನೌಕರಿಗೆ ಕುಟುಂಬ ಬೇಡಿಕೆ ಇಟ್ಟಿದೆ. ಅದನ್ನು ಸಿಎಂ ಗಮನಕ್ಕೆ ತರಲಾಗುತ್ತದೆ ಎಂದರು.

ಮಂಗಳೂರಿನಲ್ಲಿ ಅನ್ಯಕೋಮಿನವರು ಹತ್ಯೆ ಯಾದಾಗ 25ರಿಂದ 50 ಲಕ್ಷ ರೂ.ವರೆಗೆ ಸರ್ಕಾರ ಪರಿಹಾರ ನೀಡಿದೆ. ಆದರೆ ಯಲ್ಲಾಪುರದಲ್ಲಿ ನಡೆದ ಘಟನೆಯಲ್ಲೂ ಹೆಚ್ಚಿನ ಪರಿಹಾರ ನೀಡಿಲ್ಲ. ಇಲ್ಲಿ ಹತ್ಯೆಯಾದ ಸಂಕೇತ್ ಕುಟುಂಬಕ್ಕೆ ಸೂಕ್ತ ಪರಿಹಾರ ಸಿಕ್ಕಿಲ್ಲ ಎಂದರು. ವಿದ್ಯಾರ್ಥಿಗಳ ಮನಸ್ಥಿತಿ ಹತ್ಯೆ ಮಾಡುವ ಹಂತಕ್ಕೆ ತಲುಪಿರುವುದು ಆತಂಕಕಾರಿಯಾಗಿದೆ. ಈ ಬಗ್ಗೆ ಸಮಾಜ, ಪಾಲಕರು, ಶಿಕ್ಷಕರು ಚಿಂತಿಸುವ ಅಗತ್ಯವಿದೆ. ಇಂತಹ ಮನಸ್ಥಿತಿಗೆ ಸೂಕ್ತ ಕಾರಣ ತಿಳಿದು ಪರಿಹಾರ ಕಂಡುಕೊಳ್ಳಬೇಕಿದೆ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ಅಹಿತಕರ ಘಟನೆಗಳಿಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂಬಂತೆ ಗೃಹಸಚಿವರಿದ್ದಾರೆ. ಕೊಡಗಿನಲ್ಲಿ ಅನ್ಯ ಕೋಮಿನವರಿಂದ ಹಿಂದೂ ಯುವಕನ ಮೇಲೆ ಹಲ್ಲೆ ನಡೆದಿದೆ. ಬಾಗಲಕೋಟೆ ಯಲ್ಲೂ ಗಲಾಟೆ ಆಗಿದೆ. ಆದರೂ ಗೃಹ ಸಚಿವರು ಗಟ್ಟಿ ನಿರ್ಧಾರ ಕೈಗೊಂಡಿಲ್ಲ ಎಂದರು.

ಹತ್ಯೆಯಾದ ವಿದ್ಯಾರ್ಥಿ ಮನೆಗೆ ಜಿಲ್ಲಾ ಉಸ್ತುವಾರಿ ಸಚಿವರು ಇಂದಿಗೂ ಬಂದಿಲ್ಲ. ಸಾಂತ್ವನ ಹೇಳುವ ಮನಸ್ಥಿತಿಯೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ಮನುಷ್ಯತ್ವ ಇರುವ ಯಾವುದೇ ಸರ್ಕಾರ ಹೀಗೆ ನಡೆದುಕೊಳ್ಳುವುದಿಲ್ಲ. ಪರಿಹಾರ ನೀಡುವುದು ದೂರದ ಮಾತು. ಕೊನೆ ಪಕ್ಷ ಸಾಂತ್ವನವಾದರೂ ಹೇಳಬೇಕಿತ್ತು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕಿನೇಜಿ

◆ ಭಾರತ ಎಂದೊಡನೆ ನೆನಪಾಗುವುದು ಧಾರ್ಮಿಕತೆಯೇ ಹೊರತು ಯುದ್ಧ, ಅರಾಜಕತೆ ಅಲ್ಲ. - ಪಿ. ಎಸ್. ಪ್ರಕಾಶ್

- ರಷ್ಯಾ ಎಂದೊಡನೆ ಕಮ್ಯೂನಿಸಂ, ಇಂಡೋನೇಷ್ಯಾ ಎಂದೊಡನೆ ರಾಮಾಯಣ, ಸ್ವಿಜರ್ಲೆಂಡ್ ಎಂದೊಡನೆ ಸ್ವಿಸ್ ಬ್ಯಾಂಕ್ ನೆನಪಾಗುತ್ತೆ ಮತ್ತು ಪಾಕಿಸ್ತಾನ ಎಂದೊಡನೆ ನೆನಪಾಗುವುದು ಭಯೋತ್ಪಾದನೆಯೇ ಹೊರತು ಶಾಂತಿ ಸೌಹಾರ್ದತೆ ಅಲ್ಲ, ನಿಜ ತಾನೇ?

ದಿನ ಭವಿಷ್ಯ

ಮೇಷ
ಇತರರ ಜತೆ ವ್ಯವಹಾರಗಳಲ್ಲಿ ಸಫಲತೆ ಕಾಣುವಿರಿ. ಕೌಟುಂಬಿಕ ಸಂಬಂಧ ಕೆಡದಂತೆ ನೋಡಿಕೊಳ್ಳಿ. ಅಲ್ಪ ಅನಾರೋಗ್ಯ ಬಾಧಿಸೀತು.

ವೃಷಭ
ಸಂಬಂಧದಲ್ಲಿ ನಿಮ್ಮ ತಾಳ್ಮೆ ಪರೀಕ್ಷಿಸುವ ಬೆಳವಣಿಗೆ. ಕ್ಷುಲ್ಲಕ ವಿಷಯವೊಂದು ಕಡೆಗಣನೆ ಬೇಡ. ಸಂಘರ್ಷಕ್ಕೆ ಇಳಿಯಬೇಡಿ.

ಮಿಥುನ
ವೈಯಕ್ತಿಕ ಗುರಿ ಸಾಧಿಸಲು ಹೆಚ್ಚು ಶ್ರಮ ಹಾಕುವಿರಿ. ಸ್ವಲ್ಪ ಮಟ್ಟಿನ ಹತಾಶೆ, ಅಸಹನೆ ಉಂಟಾದೀತು. ಹಣದ ಕೊರತೆ ಕಾಡಬಹುದು.

ಕಟಕ
ಸಾಧನೆಯ ದಿನ. ಕೆಲಸದಲ್ಲಿ ಪರಿಪೂರ್ಣತೆ. ಒತ್ತಡ ನಿವಾರಣೆ. ಯೋಚಿಸಿದ ಕಾರ್ಯದಲ್ಲಿ ಸಫಲತೆ. ಕೌಟುಂಬಿಕ ಇಷ್ಟಾರ್ಥ ಪೂರೈಸಲಿದೆ.

ಸಿಂಹ
ಸಂತೋಷದ ದಿನ. ಖಾಸಗಿ ಬದುಕಿನಲ್ಲಿ ಪ್ರೀತಿ, ಸಾಮರಸ್ಯ. ವೃತ್ತಿ ವ್ಯವಹಾರ ಸುಲಲಿತ. ಕೇಳಿದವರಿಗೆ ಸಾಲ ಕೊಡಲು ಹೋಗಬೇಡಿ.

ಕನ್ಯಾ
ಕ್ಲಿಷ್ಟಕರ ಪರಿಸ್ಥಿತಿ ಉದ್ಭವಿಸಿದರೂ ಬಳಿಕ ಶಮನವಾಗಲಿದೆ. ಕೆಲಸದಲ್ಲಿ ನಿಮ್ಮ ಕೌಶಲ್ಯ ಅನಾವರಣ. ಶ್ಲಾಘನೆ ಪಡೆಯುವಿರಿ. ಪ್ರೀತಿಯಲ್ಲಿ ಯಶಸ್ಸು.

ತುಲಾ
ದಿನವಿಡೀ ಕೆಲಸದ ಒತ್ತಡ. ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ಸಣ್ಣ ಲೋಪ ಗಂಭೀರ ಪರಿಣಾಮ ಬೀರೀತು. ಕೌಟುಂಬಿಕ ಒತ್ತಡ.

ವೃಶ್ಚಿಕ
ಖಾಸಗಿ ಬದುಕಲ್ಲಿ ಒತ್ತಡ ನಿವಾರಣೆ. ಯಾವುದೇ ಸಮಸ್ಯೆ ತಾತ್ಕಾಲಿಕ ಎಂಬುದು ಅರಿವಿರಲಿ. ಮುಖದಲ್ಲಿ ಸದಾ ನಗುವಿರಲಿ.

ಧನು
ಕೆಲಸ ಸುಗಮವಾಗಿ ಸಾಗದು. ಅಡ್ಡಿಗಳು, ಮಾನಸಿಕ ಒತ್ತಡ, ಅಸಹನೆ ಕಾಡುವುದು. ಹಣದ ವಿಷಯದಲ್ಲಿ ಪ್ರಮುಖ ನಿರ್ಧಾರ ತಾಳದಿರಿ.

ಮಕರ
ಕೆಲಸದ ಪ್ರಗತಿ ಬಗ್ಗೆ ಕೆಲವು ಚಿಂತೆ ಕಾಡುವುದು. ಬೆಂಬಲದ ಕೊರತೆ. ಅನ್ಯರ ಮೇಲಿನ ದ್ವೇಷ ಬಿಡಿ, ಸಹಕಾರಕ್ಕೆ ಮನ ಮಾಡಿ. ಕೌಟುಂಬಿಕ ಉದ್ವಿಗ್ನತೆ.

ಕುಂಭ
ನಿರಾಳ ಮನಸ್ಸು. ಹೊಸ ಯೋಜನೆಗೆ ಕೈಹಚ್ಚಲು ಕಾಲ ಸೂಕ್ತ. ಕೆಲಸದಲ್ಲಿ ಬಡ್ತಿ ಸಂಭವ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ.

ಮೀನ
ಗುಣಾತ್ಮಕ ಬೆಳವಣಿಗೆಯ ದಿನ. ಖಾಸಗಿ ಬದುಕಲ್ಲಿ ನೀವು ಇಚ್ಛಿಸಿದ ಕಾರ್ಯ ಸಿದ್ಧಿ. ವೃತ್ತಿಯಲ್ಲೂ ಸಫಲತೆ. ಇಷ್ಟ ವಸ್ತು ಖರೀದಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ 0,3,7,2

ಮಂಗಳೂರಿನಿಂದ ನೇರ ಸಂಚಾರ ಬಂದ್ | ದುಬೈಗೆ ಹೊರಟಿದ್ದ ಐಎಕ್ಸ್ 831 ವಿಮಾನ ವಾಪಸ್

ಗಲ್ಫ್ ರಾಷ್ಟ್ರಗಳಿಗೆ ವಿಮಾನ ಹಾರಾಟ ವ್ಯತ್ಯಯ



• **ಮಂಗಳೂರು:** ಇಸ್ರೇಲ್- ಇರಾನ್ ನಡುವಿನ ಯುದ್ಧದ ಬಿಸಿ ವಿಮಾನ ಪ್ರಯಾಣಿಕರಿಗೂ ತಟ್ಟಿದೆ. ಮಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳಿಗೆ ತೆರಳುವ ವಿಮಾನಗಳು ತಮ್ಮ ಹಾರಾಟ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ತೀವ್ರ ಬವಣೆಪಟ್ಟರು.

ಮಧ್ಯಪ್ರಾಚ್ಯ ಕಡೆಗೆ ಹೋಗುವ ವಿಮಾನಗಳಿಗೆ ಮಂಗಳೂರಿನಿಂದ ನೇರ ಮಾರ್ಗವಿಲ್ಲ. ಆದ ಕಾರಣ ಗಲ್ಫ್ ರಾಷ್ಟ್ರಗಳಿಗೆ ತೆರಳಿ ನಂತರ ಸಂಚಾರ ಮುಂದುವರಿಸಬೇಕಿತ್ತು. ಹೀಗಾಗಿ ಮಂಗಳೂರು ವಿಮಾನ ನಿಲ್ದಾಣದಿಂದ ಗಲ್ಫ್ ರಾಷ್ಟ್ರಗಳತ್ತ ಹೊರಟ ಕೆಲವು ವಿಮಾನಗಳನ್ನು ಬೇರೆ ವಿಮಾನ ನಿಲ್ದಾಣಗಳಲ್ಲಿ ಇಳಿಸಲಾಗಿದ್ದರೆ, ಇನ್ನೂ ಕೆಲವು ವಿಮಾನಗಳು ಮಂಗಳೂರಿಗೆ ಮರಳಿವೆ. ಅದೇ ರೀತಿ ಗಲ್ಫ್ ರಾಷ್ಟ್ರಗಳಿಂದ ಮಂಗಳೂರಿಗೆ ಆಗಮಿಸಬೇಕಿದ್ದ ಕೆಲವು ವಿಮಾನಗಳ ಸಂಚಾರವನ್ನೂ ರದ್ದು ಮಾಡಲಾಗಿದೆ.

ಯಾವೆಲ್ಲಾ ವಿಮಾನ ರದ್ದು? ಮಂಗಳೂರಿನಿಂದ ದುಬೈಗೆ ಹೊರಟಿದ್ದ ಐಎಕ್ಸ್ 831 ವಿಮಾನ ಟೇಕಾಫ್ ಆದ ಕೆಲ ಹೊತ್ತಿನಲ್ಲಿ ವಿಮಾನ ನಿಲ್ದಾಣಕ್ಕೆ ವಾಪಸಾಗಿದೆ. ಮಂಗಳೂರು- ದೋಹಾ ನಡುವಿನ ಐಎಕ್ಸ್ 821 ವಿಮಾನವನ್ನು ಮುಂಬೈ ಏರ್‌ಪೋರ್ಟ್‌ನಲ್ಲಿ ಇಳಿಸಲಾಯಿತು. ರಾತ್ರಿ 8.45ಕ್ಕೆ ಮಂಗಳೂರಿಗೆ ಆಗಮಿಸಬೇಕಿದ್ದ ದೋಹಾ- ಮಂಗಳೂರು ನಡುವಿನ ಐಎಕ್ಸ್ 822 ಸಂಖ್ಯೆಯ ವಿಮಾನ, ದುಬೈನಿಂದ 10.10ಕ್ಕೆ ಮಂಗಳೂರಿಗೆ ಆಗಮಿಸಬೇಕಿದ್ದ ಐಎಕ್ಸ್ 832 ಸಂಖ್ಯೆಯ ವಿಮಾನ ಸಂಚಾರ ರದ್ದಾಗಿತ್ತು.

ಮಂಗಳೂರಿನಿಂದ ಹೊರಡದೇ ನಿಂತ ವಿಮಾನಗಳು! ಮಂಗಳೂರು ವಿಮಾನ ನಿಲ್ದಾಣದಿಂದ 1.20ಕ್ಕೆ ಹೊರಡಬೇಕಿದ್ದ ಐಎಕ್ಸ್ 831 ಮಂಗಳೂರು- ದುಬೈ ವಿಮಾನ, 11.10ಕ್ಕೆ ಹೊರಡಬೇಕಿದ್ದ ಐಎಕ್ಸ್ 847 ಮಂಗಳೂರು- ದಮ್ಮಾಮ್ ವಿಮಾನ, 8.15ಕ್ಕೆ ಹೊರಡಬೇಕಿದ್ದ ಐಎಕ್ಸ್ 813 ಮಂಗಳೂರು- ದುಬೈ ವಿಮಾನ, 2.05ಕ್ಕೆ ಹೊರಡಬೇಕಿದ್ದ ಐಎಕ್ಸ್ 851 ಮಂಗಳೂರು- ಕುವೈಟ್ ವಿಮಾನ, 1.20ಕ್ಕೆ ಹೊರಡಬೇಕಿದ್ದ ಐಎಕ್ಸ್ 815 ಮಂಗಳೂರು- ಅಬುಧಾಬಿ ವಿಮಾನ, 7.15ಕ್ಕೆ ಹೊರಡಬೇಕಿದ್ದ 6ಇ 1467 ಮಂಗಳೂರು- ದುಬೈ ವಿಮಾನ ಸಂಚಾರವನ್ನು ರದ್ದು ಮಾಡಲಾಗಿದೆ.

ಕೆಂಪೇಗೌಡ ವಿಮಾನ ಸಂಚಾರ ರದ್ದು

• **ಬೆಂಗಳೂರು:** ಅಮೆರಿಕ ಮತ್ತು ಇಸ್ರೇಲ್ ಸೇರಿಕೊಂಡು ಇರಾನ್ ಮೇಲೆ ದಾಳಿ ಮಾಡಲು ಆರಂಭಿಸಿದ್ದು, ಈ ಹಿನ್ನೆಲೆ ಮುಂಜಾಗ್ರತಾ ಕ್ರಮವಾಗಿ ವಿಮಾನಗಳ ಹಾರಾಟವನ್ನು ರದ್ದು ಮಾಡಲಾಗಿದೆ. ಕೆಂಪೇಗೌಡ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ ವಿಮಾನಗಳು ಸೇರಿದಂತೆ ವಿದೇಶದಿಂದ ಬೆಂಗಳೂರಿಗೆ ಬರಬೇಕಿದ್ದ ಕೆಲ ವಿಮಾನಗಳನ್ನು ರದ್ದಾಗಿದೆ. ಅದರಲ್ಲೂ ಪ್ರಮುಖವಾಗಿ ದುಬೈ, ಜೋರ್ಡಾನ್, ದೋಹಾ, ದಮ್ಮಮ್, ಬಹ್ರೈನ್, ಶಾರ್ಜಾ, ಕುವೈತ್, ರಾಸ್ ಅಲ್-ಖೈಮಾ ದೇಶಗಳಿಗೆ ವಿಮಾನ ಹಾರಾಟ ಸೇವೆ ರದ್ದಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡ ಇಂಡಿಗೋ, ಇರಾನ್ ಮತ್ತು ಮಧ್ಯಪ್ರಾಚ್ಯದಲ್ಲಿನ ವಾಯು ಪ್ರದೇಶ ನಿರ್ಬಂಧ ದೃಷ್ಟಿಯನ್ನು ಗಮನದಲ್ಲಿರಿಸಿಕೊಂಡು ಮಧ್ಯಪ್ರಾಚ್ಯಕ್ಕೆ ಪ್ರಯಾಣ ನಡೆಸುವ ಎಲ್ಲಾ ವಿಮಾನಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುವುದು. ಪ್ರಯಾಣಿಕರು ಮತ್ತು ಸಿಬ್ಬಂದಿಗಳ ಭದ್ರತೆ ಮತ್ತು ಸುರಕ್ಷತೆಯು ಪ್ರಮುಖವಾಗಿದ್ದು, ಈ ಹಿನ್ನೆಲೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ತಮ್ಮ ತಂಡವು ಅಲ್ಲಿನ ಪರಿಸ್ಥಿತಿಗಳ ಸೂಕ್ಷ್ಮ ಅವಲೋಕನ ನಡೆಸಿದೆ. ವಿಮಾನ ಹಾರಾಟದಲ್ಲಿ ಅಡ್ಡಿಯುಂಟಾಗಲಿದೆ ಎಂದಿದೆ. ಈ ಕುರಿತು ಮಾಹಿತಿ ಹಂಚಿಕೊಂಡ ಏರ್ ಇಂಡಿಯಾ, ಮಧ್ಯಪ್ರದೇಶದ ಹಲವು ಭಾಗದಲ್ಲಿ ಉಂಟಾಗುತ್ತಿರುವ ಬೆಳವಣಿಗೆ ಹಿನ್ನೆಲೆ ಮಧ್ಯಪ್ರಾಚ್ಯದ ಎಲ್ಲಾ ಪ್ರದೇಶಗಳ ಎಲ್ಲಾ ಏರ್ ಇಂಡಿಯಾ ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ಪ್ರಯಾಣಿಕರ ಸುರಕ್ಷತೆಗಾಗಿ ಎಲ್ಲಾ ಅಗತ್ಯ ಕ್ರಮ ನಿರ್ವಹಣೆಗೆ ನಾವು ಬದ್ಧರಾಗಿರುವುದಾಗಿ ತಿಳಿಸಿದೆ.

ಮಧ್ಯಪ್ರಾಚ್ಯ ಸಮರಾಂಗಣ

ಪುಟ 1➡ ಆದರೆ, ಇರಾನ್ ಮಾಧ್ಯಮಗಳು ಇದನ್ನು ನಿರಾಕರಿಸಿವೆ.

ಇರಾನ್ ರಕ್ಷಣಾ ಸಚಿವ ಸಾವು: ಇರಾನ್ ರಕ್ಷಣಾ ಸಚಿವ ಅಮೀರ್ ನಾಸಿರ್ ಜಾದೆಹ್ ದಾಳಿಯಲ್ಲಿ ಮೃತರಾಗಿರುವುದಾಗಿ ವರದಿಯಾಗಿದೆ. ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಕಮಾಂಡರ್ ಮೊಹಮ್ಮದ್ ಪಕ್ಪೋರ್ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಕ್ಷಿಪಣಿ ಪ್ರತೀಕಾರ- ಇಸ್ರೇಲ್, ಗಲ್ಫ್ ರಾಜಧಾನಿಗಳು ನಡುಗು: ದಾಳಿಯ ಕೆಲವೇ ಗಂಟೆಗಳಲ್ಲಿ ಇರಾನ್ ಇಸ್ರೇಲ್ ಕಡೆಗೆ 'ಕ್ಷಿಪಣಿಗಳ ಬ್ಯಾರೇಜ್' ಉಡಾಯಿಸಿದೆ. ಜೆರುಸಲೇಮ್ ಹಾಗೂ ಟೆಲ್ ಅವೀವ್‌ನಲ್ಲಿ ಸೈರನ್ ಮೊಳಗಿದವು. ಕೆಲವು ನಾಗರಿಕರು ಸುರಕ್ಷಿತ ತಾಣಗಳಿಗೆ ತೆರಳಿದ್ದಾರೆ. ಬಳಿಕ ಗಲ್ಫ್ ಪ್ರದೇಶದ ಅಮೆರಿಕ ಸೈನಿಕ ನೆಲೆಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ಮತ್ತು ಡ್ರೋನ್ ಮೂಲಕ ಇರಾನ್ ದಾಳಿ ನಡೆಸಿತು. ಅಬುಧಾಬಿಯಲ್ಲಿ ಕ್ಷಿಪಣಿ ಅವಶೇಷ ಬಿದ್ದು ಏಷ್ಯನ್ ನಾಗರಿಕನೊಬ್ಬ ಸಾವನ್ನಪ್ಪಿರುವುದಾಗಿ ಯುಎಇ ರಕ್ಷಣಾ ಸಚಿವಾಲಯ ತಿಳಿಸಿದೆ.

ಇರಾನ್ ಕಿಡಿ: ಇರಾನ್ ವಿದೇಶಾಂಗ ಸಚಿವ ಸಯೀದ್ ಅಬ್ಬಾಸ್ ಅರಘ್ಚಿ, ದಾಳಿಯನ್ನು 'ಕ್ರಿಮಿನಲ್ ಮಿಲಿಟರಿ ಆಕ್ರಮಣ' ಎಂದು ಖಂಡಿಸಿದರು. ಟ್ರಂಪ್ ಅವರು ಅಮೆರಿಕ ಫಸ್ಟ್ ಅನ್ನು ಇಸ್ರೇಲ್ ಫಸ್ಟ್ ಆಗಿ ಪರಿವರ್ತಿಸಿದ್ದಾರೆ. ಅದೇ ಅಮೆರಿಕ ಕೊನೆಯದು ಎಂದರ್ಥ. ಏಕೆಂದರೆ ನಮ್ಮ ಸಶಸ್ತ್ರ ಪಡೆಗಳು ಸಜ್ಜಾಗಿವೆ ಎಂದು ಹೇಳಿದರು. ಇರಾನ್ ಮಾತುಕತೆಗೂ ಸಿದ್ಧವಿದ್ದರೂ ರಕ್ಷಣೆಗೆ ಇನ್ನಷ್ಟು ಸಜ್ಜಾಗಿದೆ ಎಂದು ಸಚಿವಾಲಯ ಹೇಳಿದೆ. ವಿಶ್ವಸಂಸ್ಥೆ ಹಾಗೂ ಅಂತಾರಾಷ್ಟ್ರೀಯ ಸಮುದಾಯ ತುರ್ತು ಕ್ರಮ ಕೈಗೊಳ್ಳಬೇಕೆಂದು ಟೆಹ್ರಾನ್ ಮನವಿ ಮಾಡಿದೆ.

ಟ್ರಂಪ್-ನೆತನ್ಯಾಹು ಹೇಳಿಕೆ: ಇದರ ಮಧ್ಯೆ, ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 1979ರಿಂದ ದೇಶವನ್ನು ಆಡಳಿತ ನಡೆಸುತ್ತಿರುವ ಇಸ್ಲಾಮಿಕ್ ನಾಯಕತ್ವದ ವಿರುದ್ಧ ಎದ್ದು ನಿಲ್ಲುವಂತೆ ಇರಾನ್ ಜನತೆಗೆ ಕರೆ ನೀಡಿದ್ದಾರೆ. ಈ ಮೂಲಕ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ ಎಂದಿದ್ದಾರೆ. ನಾವು ಕಾರ್ಯಾಚರಣೆ ಮುಗಿಸಿದ ನಂತರ ನಿಮ್ಮ ಸರ್ಕಾರವನ್ನು ನೀವು ಮಾಡಿಕೊಳ್ಳಿ. ಇದು ಪೀಳಿಗೆಗಳ ಮಟ್ಟಿಗೆ ನಿಮ್ಮ ಏಕೈಕ ಅವಕಾಶವಾಗಿರಬಹುದು. ಅನೇಕ ವರ್ಷಗಳಿಂದ ನೀವು ಅಮೆರಿಕದ ನೆರವಿಗಾಗಿ ಕೇಳಿದ್ದೀರಿ, ಆದರೆ ಅದು ಸಿಗಲಿಲ್ಲ ಎಂದು ಪ್ರಮುಖ ಯುದ್ಧ ಕಾರ್ಯಾಚರಣೆಗಳು ಆರಂಭವಾಗಿವೆ ಎಂದು ಘೋಷಿಸಿದ ವಿಡಿಯೋ ಸಂದೇಶದಲ್ಲಿ ಟ್ರಂಪ್ ಹೇಳಿದರು. ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಕೂಡ ಇದೇ ಗುರಿಯನ್ನು ಪ್ರತಿಧ್ವನಿಸಿದರು. ನಮ್ಮ ಜಂಟಿ ಕಾರ್ಯಾಚರಣೆ ಧೈರ್ಯಶಾಲಿ ಇರಾನ್ ಜನತೆಗೆ ತಮ್ಮ ಭವಿಷ್ಯವನ್ನು ತಮ್ಮ ಕೈಗೆತ್ತಿಕೊಳ್ಳಲು ಅಗತ್ಯ ಪರಿಸ್ಥಿತಿಗಳನ್ನು ಸೃಷ್ಟಿಸಲಿದೆ ಎಂದು ಅವರು ಹೇಳಿದರು.

ಬುರ್ಜ್ ಖಲೀಫಾದಿಂದ ಸ್ಥಳಾಂತರ: ಯುಎಇ, ಅಬುಧಾಬಿ, ದುಬೈ, ಕತಾರ್‌ನ ದೋಹಾ ಮತ್ತು ಸೌದಿ ಅರೇಬಿಯಾದ ರಿಯಾದ್ ಸ್ಥಳಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿರುವುದರಿಂದ ದುಬೈನ ಬುರ್ಜ್ ಖಲೀಫಾದಿಂದ ಜನರನ್ನು ಸ್ಥಳಾಂತರಿಸಲಾಗಿದೆ. ಸ್ಥಳೀಯರ ಪ್ರಕಾರ, ಅಲ್ಲಲ್ಲಿ ಸ್ಫೋಟಗಳಾಗುತ್ತಿರುವುದು ಗೊತ್ತಾಗುತ್ತಿದೆ.

ರಾಜಕೀಯ ಹಿನ್ನೆಲೆ

- ಟ್ರಂಪ್ ಆಡಳಿತವು ಕಳೆದ 8 ತಿಂಗಳಲ್ಲಿ 2ನೇ ಬಾರಿ ಇರಾನ್ ವಿರುದ್ಧ ಸೇನಾ ಕ್ರಮ
- ಇರಾನ್ ನೌಕಾಪಡೆಯನ್ನು ನಾಶಮಾಡುತ್ತೇವೆ ಎಂಬ ಟ್ರಂಪ್ ಎಚ್ಚರಿಕೆ
- ಶರಣಾದರೆ ರಕ್ಷಣೆ ನೀಡುತ್ತೇವೆ ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ ಸದಸ್ಯರಿಗೆ ಕರೆ

ಎಲ್ಲೆಲ್ಲಿ ದಾಳಿ?

ಬಹ್ರೇನ್: ಮನಾಮಾದಲ್ಲಿರುವ ಯುಎಸ್ ಐದನೇ ಫ್ಲೀಟ್ ಸಂಪರ್ಕಿತ ಸೌಲಭ್ಯ ಗುರಿ.
ಕತಾರ್: ಅಲ್ ಉದೈದ್ ವಾಯುನೆಲೆ ಬಳಿ ಸ್ಫೋಟ; ವಾಯು ರಕ್ಷಣಾ ವ್ಯವಸ್ಥೆ ಸಕ್ರಿಯ.
ಯುಎಇ: ಅಬುಧಾಬಿ, ದುಬೈನಲ್ಲಿ ಭಾರೀ ಸ್ಫೋಟಗಳ ಶಬ್ದ; ಬುರ್ಜ್ ಖಲೀಫಾ ಸ್ಥಳಾಂತರ.
ಸೌದಿ ಅರೇಬಿಯಾ: ರಿಯಾದ್‌ನಲ್ಲಿ ಸ್ಫೋಟಗಳ ವರದಿ; ಪ್ರಿನ್ಸ್ ಸುಲ್ತಾನ್ ವಾಯುನೆಲೆಯಲ್ಲಿ ರಕ್ಷಣಾ ವ್ಯವಸ್ಥೆ ಸಕ್ರಿಯ.
ಕುವೈತ್: ವಾಯುಪ್ರದೇಶ ಮುಚ್ಚುವಿಕೆ ಘೋಷಣೆ.
ಇರಾಕ್: ಜುರ್ಫ್ ಅಲ್-ಸಖರ್ ನೆಲೆಯ ಮೇಲೆ ಬಾಂಬ್ ದಾಳಿ; ಕತೇಬ್ ಹಿಜ್ಬುಲ್ಲಾ 47ನೇ ಬ್ರಿಗೇಡ್ ಗುರಿ.
ಜೋರ್ಡಾನ್: ಸೌದಿ ಗುರಿಯಾಗಿದ್ದ ಎರಡು ಬ್ಯಾಲಿಸ್ಟಿಕ್ ಕ್ಷಿಪಣಿಗಳನ್ನು ಹೊಡೆದುರುಳಿಸಿತು.

ಗಲ್ಫ್ ಪ್ರದೇಶದ ಅಮೆರಿಕ ನೆಲೆ

- ಅಲ್ ಉದೈದ್ (ಕತಾರ್) ಯುಎಸ್ ಸೆಂಟ್ಕಾಮ್ ಪ್ರಧಾನ ಕಚೇರಿ
- ಐದನೇ ಫ್ಲೀಟ್ (ಬಹ್ರೇನ್)
- ಅಲ್ ದಫ್ರಾ (ಯುಎಇ)
- ಪ್ರಿನ್ಸ್ ಸುಲ್ತಾನ್ ವಾಯುನೆಲೆ (ಸೌದಿ)
- ಕ್ಯಾಂಪ್ ಅರಿಫ್ಜಾನ್, ಅಲಿ ಅಲ್ ಸಲೇಮ್ (ಕುವೈತ್)
- ಐನ್ ಅಲ್-ಅಸಾದ್ (ಇರಾಕ್)

ಸ್ವಾಯತ್ತತೆ, ಪ್ರಾದೇಶಿಕ ಅಖಂಡತೆ ಗೌರವಿಸಿ: ಭಾರತ

• **ಹೊಸದಿಲ್ಲಿ:** ಅಮೆರಿಕ- ಇಸ್ರೇಲ್ ಜಂಟಿ ದಾಳಿಯಿಂದ ಇರಾನ್‌ನಲ್ಲಿ ಉದ್ಭವಿಸಿದ ಭಾರೀ ಸೈನಿಕ ಸಂಘರ್ಷದ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿ ಉಂಟಾಗಿರುವ ತೀವ್ರ ಸಂಘರ್ಷವನ್ನು ತಿಳಿಗೊಳಿಸುವಂತೆ ಭಾರತ ವಿದೇಶಾಂಗ ಇಲಾಖೆ ಕರೆ ನೀಡಿದೆ. ಜತೆಗೆ ಎಲ್ಲ ದೇಶಗಳ ಸ್ವಾಯತ್ತತೆ ಹಾಗೂ ಪ್ರಾದೇಶಿಕ ಅಖಂಡತೆಯನ್ನು ಗೌರವಿಸಬೇಕು ಎಂದು ಸ್ಪಷ್ಟ ಸಂದೇಶ ರವಾನಿಸಿದೆ. ಈ ಬೆಳವಣಿಗೆಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯ(ಎಂಇಎ), ಎಲ್ಲರೂ ತಾಳ್ಮೆ ವಹಿಸಿ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸದಂತೆ ನೋಡಿಕೊಳ್ಳಬೇಕೆಂದು ಮನವಿ ಮಾಡಿದೆ. ಅಮೆರಿಕ ಹಾಗೂ ಇಸ್ರೇಲ್ ನಡೆಸಿದ ದಾಳಿಗೆ ಪ್ರತಿಯಾಗಿ ಇರಾನ್ ಮಧ್ಯಪ್ರಾಚ್ಯದ ಹಲವು ಅಮೆರಿಕನ್ ಸೈನಿಕ ನೆಲೆಗಳ ಮೇಲೆ ಪ್ರತಿದಾಳಿ ನಡೆಸಿದೆ. ಕತಾರ್, ಕುವೈತ್ ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) ಪ್ರದೇಶಗಳಲ್ಲಿನ ತಾಣಗಳು ಗುರಿಯಾಗಿದುವುದಾಗಿ ವರದಿಯಾಗಿದೆ. ಇದರಿಂದ ಪ್ರದೇಶದಲ್ಲಿ ಯುದ್ಧದ ಆತಂಕ ಮತ್ತಷ್ಟು ಗಾಢವಾಗಿದೆ. ಎಂದು ಎಂಇಎ ಪ್ರಕಟಣೆಯಲ್ಲಿ ತಿಳಿಸಿದೆ.

ರಸ್ತೆ ಅಪಘಾತ: ಮೂವರು ಸಾವು

• **ರಾಯಚೂರು:** ನಗರದಲ್ಲಿ ಶನಿವಾರ ಬೆಳಗ್ಗೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೂರು ಯುವಕರು ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಮೃತರನ್ನು ನಗರದ ಸುಕಾಣಿ ಕಾಲೋನಿಯ ಮೊಹಮ್ಮದ್ ಅಲಿ ಪಾಷಾ (24), ನೂರ್ ಮಹಮ್ಮದ್ (19) ಹಾಗೂ ಫಯಾಜ್ (26) ಎಂದು ಗುರುತಿಸಲಾಗಿದೆ. ರಾತ್ರಿ 1/15 ನಿಮಿಷದ ಸಮಯದಲ್ಲಿ ನಗರದ ಬಸವೇಶ್ವರ ವೃತ್ತದಲ್ಲಿ ಲಿಂಗಸುಗೂರು ರಸ್ತೆಯಲ್ಲಿ ಅಸ್ಕಿಹಾಳ ಕಡೆಯಿಂದ ಎಸ್.ಎನ್.ಟಿ ರಸ್ತೆ ಕಡೆಗೆ ಫಯಾಜ್ ಮೋಟಾರ ಸೈಕಲ್ ದಲ್ಲಿ ತನ್ನ ಸ್ನೇಹಿತರಾದ ಮೊಹಮ್ಮದ್ ಅಲಿ ಪಾಷ ಮತ್ತು ನೂರ ಮಹಮ್ಮದ್ ನನ್ನು ಕೂಡಿಸಿಕೊಂಡು ಹೋಗುತ್ತಿದ್ದ ಸಂದರ್ಭದಲ್ಲಿ ಈ ಅಪಘಾತ ಸಂಭವಿಸಿದೆ.

ವೃತ್ತದ ಕೋರ್ಟ್ ಮಾರ್ಗವಾಗಿ ಅಶೋಕ ಲೈಲಂಡ್ ಗೂಡ್ಸ್ ಗಾಡಿ ಬೈಕ್ ಗೆ ಡಿಕ್ಕಿ ಹೊಡೆದ ಪರಿಣಾಮ ಈ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗೂಡ್ಸ್ ಗಾಡಿ ಅಹಮದಾಬಾದ್ ನಿಂದ ಚೆನ್ನೈಗೆ ತೆರಳುತ್ತಿತ್ತು. ಟ್ರಕ್ ಮತ್ತು ಚಾಲಕನನ್ನು ವಶಕ್ಕೆ ಪಡೆದಿದ್ದು ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.


ದುಬೈನಲ್ಲಿ ಸಿಲುಕಿದ ಎಂಎಲ್ಸಿ ಭೋಜೇಗೌಡ

• **ಬೆಂಗಳೂರು:** ವಿಧಾನ ಪರಿಷತ್ ಸದಸ್ಯ ಭೋಜೇಗೌಡ ಅವರು ದುಬೈ ವಿಮಾನ ನಿಲ್ದಾಣದಲ್ಲಿ ಸಿಲುಕಿಕೊಂಡಿದ್ದು, ಬೆಂಗಳೂರಿಗೆ ಆಗಮಿಸಲು ವಿಮಾನ ಇಲ್ಲದೇ ಪರದಾಡುವಂತಾಗಿದೆ. ಇರಾನ್ ಮೇಲೆ ಇಸ್ರೇಲ್ ಮತ್ತು ಅಮೆರಿಕ ಪಡೆಗಳು ದಾಳಿ ನಡೆಸುತ್ತಿರುವ ಸಂದರ್ಭದಲ್ಲಿ ದುಬೈಯಿಂದ ಬೆಂಗಳೂರಿಗೆ ಪ್ರಯಾಣಿಸಲು ವಿಮಾನ ಇಲ್ಲದ ಕಾರಣ ದುಬೈನಲ್ಲೇ ಉಳಿದುಕೊಂಡಿದ್ದಾರೆ. ದಕ್ಷಿಣ ಆಫ್ರಿಕಾಗೆ ತೆರಳಿದ್ದ ಭೋಜೇಗೌಡ ಅವರು ದುಬೈನ ವಿಮಾನ ನಿಲ್ದಾಣದಲ್ಲಿ ಇರುವ ವೀಡಿಯೊ ಹಂಚಿಕೊಂಡಿದ್ದಾರೆ.

ಮಂಡಳಿ ಅಧ್ಯಕ್ಷರ ಅವಧಿ ಮುಂದುವರಿಕೆ

• **ಬೆಂಗಳೂರು:** ಸರ್ಕಾರದ ವಿವಿಧ ಇಲಾಖೆಗಳ ಅಧೀನದಲ್ಲಿ ಬರುವ ನಿಗಮ, ಮಂಡಳಿ ಹಾಗೂ ಪ್ರಾಧಿಕಾರಗಳ ನಾಮನಿರ್ದೇಶನಗೊಂಡ ಅಧ್ಯಕ್ಷರ ಮುಕ್ತಾಯಗೊಂಡ, ಮುಕ್ತಾಯಗೊಳ್ಳಲಿರುವ ಅವಧಿಯನ್ನು ಮುಂದಿನ ಆದೇಶದವರೆಗೆ ಮುಂದುವರೆಸಿ ಆದೇಶಿಸಲಾಗಿದೆ. ಕೆಲವು ಕಾಡಾ ಅಭಿವೃದ್ಧಿ ಪ್ರಾಧಿಕಾರ ಹಾಗೂ ಯೋಜನಾ ಪ್ರಾಧಿಕಾರದ ಅಧ್ಯಕ್ಷರ ಅವಧಿಯನ್ನು ಮುಂದುವರೆಸಿ ಆದೇಶ ಹೊರಡಿಸುವಂತೆ ಕೋರಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಪತ್ರ ಬರೆದಿದ್ದರು. ಈ ಪತ್ರವನ್ನು ಆಧರಿಸಿ ಮುಖ್ಯಮಂತ್ರಿಗಳ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲಾ ಅಧ್ಯಕ್ಷರ ಅವಧಿಯನ್ನು ವಿಸ್ತರಿಸಲಾಗಿದೆ. ಆಡಳಿತ ಇಲಾಖೆಯ ಸಂಬಂಧಿಸಿದ ಅಧಿನಿಯಮ, ನಿಯಮಗಳ ರೀತ್ಯಾ ತಕ್ಷಣದಿಂದ ಅಧ್ಯಕ್ಷರು ಕಾರ್ಯನಿರ್ವಹಿಸಲು ಸೂಕ್ತ ಅಧಿಸೂಚನೆ ಹೊರಡಿಸುವಂತೆ ಆಡಳಿತ ಇಲಾಖೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸೂಚನೆ ನೀಡಿದೆ.

ಪಿಯುಸಿ ಪರೀಕ್ಷೆ: 15,953 ವಿದ್ಯಾರ್ಥಿಗಳು ಗೈರು



• **ಬೆಂಗಳೂರು:** ರಾಜ್ಯದಲ್ಲಿ ದ್ವಿತೀಯ ಪಿಯು ಪರೀಕ್ಷೆ-1 ಶನಿವಾರದಿಂದ ಆರಂಭವಾಗಿದ್ದು, ಪರೀಕ್ಷೆಯ ಮೊದಲ ದಿನದ ಕನ್ನಡ ಮತ್ತು ಅರೇಬಿಕ್ ಭಾಷಾ ಪರೀಕ್ಷೆಗೆ 15,953 ವಿದ್ಯಾರ್ಥಿಗಳು ಗೈರಾಗಿದ್ದಾರೆ. ಈ ಪರೀಕ್ಷೆಗೆ ಒಟ್ಟು 5,09,085 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು. ಇವರಲ್ಲಿ 9,93,132 (ಶೇ.96.87) ಪರೀಕ್ಷೆಗೆ ಹಾಜರಾಗಿದ್ದಾರೆ. ವಿಜಯಪುರದಲ್ಲಿ ಗರಿಷ್ಠ 2,370 ವಿದ್ಯಾರ್ಥಿಗಳು ಗೈರಾಗಿದ್ದು, ರಾಯಚೂರು - 1,139, ಬೀದರ್ -1,087, ಕಲಬುರಗಿ - 1,071 ವಿದ್ಯಾರ್ಥಿಗಳು ಗೈರಾಗಿದ್ದಾರೆ.

ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಹೃದಯಘಾತದಿಂದ ಸಾವು: ಚಿಕ್ಕೋಡಿಯ ಸಿಎಸ್‌ಎಸ್‌ಪಿಯು ಕಾಲೇಜಿನ ಕಲಾ ವಿಭಾಗದ ದ್ವಿತೀಯ ವರ್ಷದ ವಿದ್ಯಾರ್ಥಿನಿ ಭೂಮಿಕಾ ಕರೆಪ್ಪ ಮೂಳಿಂಗೆ (17) ಹೃದಯಘಾತದಿಂದ ಮೃತ ಘಟನೆ ಶನಿವಾರ ನಡೆದಿದೆ. ತಾಲೂಕಿನ ಬಂಬಲವಾಡ ಗ್ರಾಮದ ನಿವಾಸಿ ಭೂಮಿಕಾ ಅಭ್ಯಾಸ ಮೂರ್ಣಗೊಳಿಸಿ ಸ್ನಾನ ಮಾಡುವ ಸಂದರ್ಭದಲ್ಲಿ ಹೃದಯಾಘಾತಕ್ಕೆ ಒಳಗಾಗಿದ್ದಾರೆ. ದ್ವಿತೀಯ ಪಿಯುಸಿ ಪರೀಕ್ಷೆ ತೆರಳುವ ಮುನ್ನ ಸಾವನ್ನಪ್ಪಿದ್ದು, ಚಿಕ್ಕೋಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಆಗಿಲ್ಲ ನಿರೀಕ್ಷಿತ ಬದಲಾವಣೆ

ಪುಟ 1➡ ಸಂವಿಧಾನವು ಒಬ್ಬ ವ್ಯಕ್ತಿ ಜವಾಬ್ದಾರಿಯುತವಾಗಿ ವಿಕಾಸವಾಗಲು ವೈಜ್ಞಾನಿಕ, ವೈಚಾರಿಕ ಶಿಕ್ಷಣ ದೊರೆಯಬೇಕೆಂದು ಸ್ಪಷ್ಟವಾಗಿ ಹೇಳುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿ, ಮೌಢ್ಯ, ಕಂದಾಚಾರಗಳಿಂದ ಸಮಾಜ ಕೂಡಿದ್ದು, ಇವುಗಳನ್ನು ದೂರ ಮಾಡುವ ಶಿಕ್ಷಣ ಪಡೆಯುವುದು ಅತ್ಯಂತ ಅಗತ್ಯ ಎಂದರು.

ಶಿಕ್ಷಕರು ಸಂವಿಧಾನಬದ್ಧ ಕರ್ತವ್ಯವನ್ನು ನಿರ್ವಹಿಸಬೇಕು. ವಿಷಯಗಳನ್ನು ತರ್ಕ, ಪ್ರಶ್ನೆ ಮಾಡಿ ಒಪ್ಪಿಕೊಳ್ಳಬೇಕು. ಮಕ್ಕಳಿಗೂ ಅದನ್ನೇ ಕಲಿಸಬೇಕು. ಶಿಕ್ಷಕರಿಗೆ ಸಾಮಾನ್ಯರನ್ನು ಅಸಾಮಾನ್ಯರನ್ನಾಗಿ ಮಾಡುವ ಶಕ್ತಿ ಇದೆ. ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯ ಎಲ್ಲರಿಗೂ ದೊರೆಯಬೇಕು. ವೈಚಾರಿಕತೆ ಮತ್ತು ವೈಜ್ಞಾನಿಕ ಶಿಕ್ಷಣ ಶಿಕ್ಷರಿಂದ ಮಾತ್ರ ನೀಡಲು ಸಾಧ್ಯ ಎಂದು ತಿಳಿಸಿದರು. ಶಿಕ್ಷಕ ನಡವಳಿಕೆ ಉತ್ತಮವಾಗಿರಬೇಕು. ಎಲ್ಲ ಮಕ್ಕಳಿಗೂ ವೈಚಾರಿಕತೆ, ವೈಜ್ಞಾನಿಕತೆಯುಳ್ಳ ಶಿಕ್ಷಣ ನೀಡಿದರೆ ಸುಭದ್ರ, ಸುಂದರ ಸಮಾಜ ಕಟ್ಟಬಹುದು. ಭವಿಷ್ಯ ರೂಪಿಸುವಂತಹ ಮಕ್ಕಳನ್ನು ತಯಾರು ಮಾಡಿ ಎಂದು ಶಿಕ್ಷಕರಿಗೆ ಮುಖ್ಯಮಂತ್ರಿಗಳು ಕರೆ ನೀಡಿದರು.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶಿಕ್ಷಣ ರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಂಘಮಿತ್ರ, ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರಿಗೆ ಶಿಕ್ಷಕ ಸೈನಿಕ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಗುರುಕುಲ ಬಿರುದನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ, ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, ವಿಧಾನ ಪರಿಷತ್ ಸದಸ್ಯ ರಾಮೋಜಿಗೌಡ, ಎಐಪಿಟಿಎಫ್ ರಾಷ್ಟ್ರಾಧ್ಯಕ್ಷ ಬಸವರಾಜ ಗುರಿಕಾರ, ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ ನುಗ್ಗಲಿ ಸೇರಿದಂತೆ ಇತರರಿದ್ದರು.

ಬೇಡಿಕೆಗಳ ಈಡೇರಿಸಲು ಪ್ರಯತ್ನ



ಶಿಕ್ಷಕರ ಹಲವಾರು ಬೇಡಿಕೆಗಳನ್ನು ಹಂತ-ಹಂತವಾಗಿ ಈಡೇರಿಸಲಾಗುವುದು. 6 ಮತ್ತು 7ನೇ ವೇತನ ಆಯೋಗವನ್ನು ಜಾರಿ ಮಾಡಿದ್ದು, ಬೇಡಿಕೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತಿದೆ. ಒಪಿಎಸ್ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡಿ ತೀರ್ಮಾನಕ್ಕೆ ಬರುತ್ತೇವೆ. ವೇತನ ಬಡ್ತಿ ನೀಡಲು ಪ್ರಯತ್ನ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಭರವಸೆ ನೀಡಿದರು.



ಈ ನಾಡಿನ ಮಕ್ಕಳ ಭವಿಷ್ಯ ರೂಪಿಸುವ ಜವಾಬ್ದಾರಿಯನ್ನು ಶಿಕ್ಷಕರಿಗೆ ನೀಡಲಾಗಿದೆ. ಅವರನ್ನು ಓಡುವ ಕುದುರೆಗಳಂತೆ ತಯಾರು ಮಾಡಬೇಕು. ಬೆಂಗಳೂರಿನಲ್ಲಿ ಸಿಗುವ ಗುಣಮಟ್ಟದ ಶಿಕ್ಷಣ ಪ್ರತಿಯೊಂದು ಶಾಲೆಯಲ್ಲೂ ದೊರೆಯುವಂತೆ ಶಿಕ್ಷಕರು ಶ್ರಮಿಸಬೇಕು.

■ **ಡಿ.ಕೆ. ಶಿವಕುಮಾರ್**, ಡಿಸಿಎಂ

ಕರುಳು ಕಲಕುವ ಕೇರಳ ಸ್ಟೋರಿ

ಪುಟ 1➡ ಹಿಂದು ಪದ್ಧತಿಯಂತೆ ಮದುವೆಯನ್ನೂ ಆಗುತ್ತಾನೆ. ಆದಾದ ನಂತರ ನಿಧಾನವಾಗಿ ತನ್ನ ನಿಜ ಹೆಸರು, ಸ್ವರೂಪ ಪ್ರಕಟಿಸುತ್ತಾನೆ. ನಂತರ ಆತನ ಮನೆಯವರು ಆಕೆಯನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಾರೆ. ನಂತರ ಆಕೆಯೇ ಹೇಗೋ ತಪ್ಪಿಸಿಕೊಂಡುಬಂದು ಪೊಲೀಸರಿಗೆ ದೂರು ನೀಡುತ್ತಾಳೆ.

ಇದರಜತೆಗೇ ಇನ್ನೆರಡು ಹುಡುಗಿಯರ ಕತೆಗಳೂ ಸಾಗುತ್ತವೆ. ಇದರಲ್ಲಿ ಒಬ್ಬಳು ಹುಡುಗಿ ಮನೆಯವರು ತನಗೆ ಬೇಕಾದ ಹಾಗೆ ರೀಲ್ಸ್ ಮಾಡಲು ಬಿಡುತ್ತಿಲ್ಲ ಎಂಬ ಕಾರಣಕ್ಕೆ ಬೇಸರಗೊಂಡಿದ್ದಳು. ಅದನ್ನು ದಾಳವಾಗಿ ಬಳಸಿಕೊಂಡ ಮುಸ್ಲಿಂ ಯುವಕ, ನಾವು ಮದುವೆಯಾದರೆ ನೀನು ಇಷ್ಟ ಬಂದ ಹಾಗೆ ರೀಲ್ಸ್ ಮಾಡಿ ಪ್ರಸಿದ್ಧಿಗಳಿಸಬಹುದು ಎಂದು ಆಕೆಯನ್ನು ಪುಸಲಾಯಿಸಿ ಮದುವೆಯಾಗಿ, ನಂತರ ಅವಳಿಗೆ ಬುರ್ಖಾ ಹಾಕಿಸುತ್ತಾನೆ. ರೀಲ್ಸ್ ಮಾಡುವುದು ನಮ್ಮ ಧರ್ಮದಲ್ಲಿ ಹರಾಮ್ (ಕೆಟ್ಟದ್ದು) ಅನ್ನುತ್ತಾನೆ.

ಇನ್ನೊಂದು ಹುಡುಗಿಯ ಕತೆ ಇನ್ನೂ ಭೀಕರ. ಆಕೆಯನ್ನು ಪ್ರೀತಿಸಿದ ಹುಡುಗ ಸಲೀಂ ಭಾರೀ ಪ್ರಗತಿಪರನಂತೆ ಆಕೆಯ ಬಳಿ ಮಾತನಾಡುತ್ತಾನೆ. ಆಕೆ ಯಾವ ಕಾರಣಕ್ಕೂ ಮತಾಂತರ ಆಗುವುದಿಲ್ಲ ಎಂದು ಹುಡುಗಿ ಸ್ಪಷ್ಟಪಡಿಸಿರುತ್ತಾಳೆ. ಮೊದಲು ಒಪ್ಪಿ ಆಕೆಯೊಂದಿಗೆ ಲಿವ್‌ಇನ್‌ನಲ್ಲಿರುವ ಆತ, ನಿಧಾನವಾಗಿ ಒಂದೊಂದೇ ಕಾರಣಗಳನ್ನು ಮುಂದಿಟ್ಟು ಈಕೆಯನ್ನು ಹಿಂಸಿಸಲಾರಂಭಿಸುತ್ತಾನೆ. ಹೀಗೆ ಲವ್ ಜಿಹಾದ್‌ನ ವಿವಿಧ ಸ್ವರೂಪಗಳನ್ನು ಸಿನಿಮಾ ತೆರೆದಿಡುತ್ತ ಸಾಗುತ್ತದೆ.

ಮುಸ್ಲಿಮರನ್ನು ಮದುವೆಯಾಗುತ್ತಿದ್ದಂತೆ ಮನೆಯವರು ಅವರನ್ನು ದೂರ ಮಾಡುತ್ತಾರೆ. ಅತ್ತ ಮದುವೆಯಾದವನೂ ಮೋಸಮಾಡುತ್ತಾನೆ. ಇದನ್ನು ಮನೆಯವರ ಬಳಿಯೂ ಹೇಳಿಕೊಳ್ಳಲಾಗದೆ, ಅನುಭವಿಸಲೂ ಆಗದೆ ತೊಳಲಾಡುವ ಸ್ಥಿತಿಯನ್ನು ಸಿನಿಮಾ ನೋಡುಗರ ಕರುಳು ಕಿವುಚುವಂತೆ ಮಾಡುತ್ತದೆ. ಆಮೇಲೆ ಈ ಹೆಣ್ಣುಮಕ್ಕಳು ಏನಾದರು? ಸಮಾಜ, ಸರ್ಕಾರ ಹೇಗೆ ಪ್ರತಿಕ್ರಿಯಿಸಿತು ಎಂಬುದನ್ನು ಸಿನಿಮಾ ನೋಡಿಯೆ ತಿಳಿದುಕೊಳ್ಳಿ.

ಲವ್ ಜಿಹಾದ್ ಹೇಗೆ ಹಿಂದು ಹೆಣ್ಣುಮಕ್ಕಳನ್ನು ಆವರಿಸುತ್ತದೆ, ಅದರ ಹಿಂದೆ ಎಂತಹ ಜಾಲವಿದೆ ಎಂಬುದನ್ನು ಸಿನಿಮಾ ತೋರಿಸಿಕೊಡುತ್ತದೆ. ಇಂತಹ ದುರುಳರ ಕೃತ್ಯಗಳನ್ನು ಅರ್ಥಮಾಡಿಕೊಳ್ಳಲು ನೀವು ಕೇರಳ ಸ್ಟೋರಿ 2 ಸಿನಿಮಾನಾ ನೋಡಬೇಕು.

ವಚನ ಭಾಷಾಂತರ: ಸುತ್ತೂರು ಶ್ರೀ ಶ್ಲಾಘನೆ



• **ಬೆಂಗಳೂರು:** ಅಲ್ಲಮನ ವಚನಗಳು ತುಂಬಾ ಸಂಕೀರ್ಣವಾಗಿದ್ದು, ಇಂತಹ ಕೃತಿಗಳು ಅನುವಾದಕ್ಕೆ ನಿಲುಕುವುದಿಲ್ಲ. ಆದರೂ ಈ ಸವಾಲನ್ನು ಸ್ವೀಕರಿಸಿ, ಇಂಗ್ಲಿಷ್ ಭಾಷಾಂತರವನ್ನು ಮಾಡಿರುವುದು ಶ್ಲಾಘನೀಯ ಎಂದು ಸಚಿವ ಎಂ.ಬಿ ಪಾಟೀಲ ಹೇಳಿದರು.

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠವು ಇಲ್ಲಿನ ಶಿವರಾತ್ರೀಶ್ವರ ಕೇಂದ್ರದಲ್ಲಿ ಶನಿವಾರ ಏರ್ಪಡಿಸಿದ್ದ ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕನ್ನಡದ ಸಹಜತೆಯಲ್ಲಿ ಮೂಡಿಬಂದಿರುವ ವಚನಗಳು ಇಂಗ್ಲಿಷಿಗೆ ಅನುವಾದಗೊಳ್ಳುವುದರಿಂದ ಅದು ಜಾಗತಿಕ ಸ್ತರದಲ್ಲಿ ಪರಿಚಯವಾಗುತ್ತದೆ. ಇದರಿಂದ ಕರ್ನಾಟಕಕ್ಕೂ ನೆಲೆ-ಬೆಲೆಗಳು ಪ್ರಾಪ್ತವಾಗುತ್ತವೆ.

ವಿಜಯಪುರದಲ್ಲಿ ಜ್ಞಾನ ಯೋಗಾಶ್ರಮ ಕಟ್ಟಿ, ಆ ಊರನ್ನೇ ತಮ್ಮ ಕರ್ಮಭೂಮಿಯನ್ನಾಗಿ ಮಾಡಿಕೊಂಡಿದ್ದ ಶ್ರೀಸಿದ್ದೇಶ್ವರ ಸ್ವಾಮಿಗಳು ವಚನಕಾರ ಅಲ್ಲಮಪ್ರಭುವನ್ನು ತಮ್ಮ ವ್ಯಕ್ತಿತ್ವದ ಭಾಗವಾಗಿಸಿಕೊಂಡಿದ್ದರು. ಅಲ್ಲದೆ, ತಮ್ಮ ಅಂತಿಮ ಇಚ್ಛಾಪತ್ರದಲ್ಲೂ ಆತನ ವಚನವನ್ನೇ ಬರೆದಿದ್ದರು. ಅಂಥ ಜ್ಞಾನಿಗಳು ಅವನ ಬಗ್ಗೆ ಬರೆದಿರುವ ಕೃತಿಯು ಈಗ ಇಂಗ್ಲೀಷಿಗೆ ಭಾಷಾಂತರವಾಗಿರುವುದು ಕನ್ನಡ ಸಂಸ್ಕೃತಿಯ ವಿಸ್ತರಣೆಯ ಭಾಗವಾಗಿದೆ ಎಂದರು.

ಸಿದ್ದೇಶ್ವರ ಸ್ವಾಮೀಜಿಗಳು ಅಧ್ಯಯನ, ಆಧ್ಯಾತ್ಮಿಕತೆ ಮತ್ತು ವಸ್ತುನಿಷ್ಠ ನಿಲುವುಗಳಿಗೆ ಹೆಸರಾಗಿದ್ದರು. ಅವರು ಜೊತೆಯಲ್ಲೇ ಸುತ್ತಲಿನ ಪರಿಸರವನ್ನು ಕೂಡ ಅಗಾಧವಾಗಿ ಪ್ರೀತಿಸುತ್ತಿದ್ದರು. ಅವರು ಅಲ್ಲಮನ ವಚನಗಳನ್ನು ತುಂಬಾ ವಿಭಿನ್ನವಾಗಿ ವ್ಯಾಖ್ಯಾನಿಸುತ್ತಿದ್ದರು. ಇಂಗ್ಲಿಷ್ ಮೇಲೆ ಅಗಾಧ ಹಿಡಿತ ಹೊಂದಿದ್ದ ಅವರು, ವಚನ ಸಂಸ್ಕೃತಿಯನ್ನು ಹೊಸ ಬಗೆಯ ಅರ್ಥವಿಸ್ತಾರಕ್ಕೆ ಕೊಂಡೊಯ್ದರು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ, ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀಬಸವಲಿಂಗ ಸ್ವಾಮಿಗಳು, ನ್ಯಾ.ಕೃಷ್ಣ ದೀಕ್ಷಿತ್, ವಿದ್ವಾಂಸ ಮಲ್ಲೇಪುರಂ ವೆಂಕಟೇಶ, ಸಿ. ಸೋಮಶೇಖರ್ ಉಪಸ್ಥಿತರಿದ್ದರು.

ಮಕ್ಕಳು ಇತಿಹಾಸ ಸೃಷ್ಟಿಸುವಂತಾಗಲಿ



• **ಬೆಂಗಳೂರು:** ಇತಿಹಾಸದ ಪಾಠ ಕಲಿಸುವ ಕೆಲಸವಷ್ಟೇ ಆಗಬಾರದು. ಇತಿಹಾಸ ಸೃಷ್ಟಿಸುವಂತೆ ಮಕ್ಕಳನ್ನು ಶಿಕ್ಷಕರು ತಯಾರು ಮಾಡಿ. ನೀವು ಶಾಲೆಗೆ ಬರುವ ಮಕ್ಕಳನ್ನು ಮಾತ್ರ ಬೆಳೆಸುತ್ತಿಲ್ಲ. ಸಮಾಜವನ್ನೇ ಬೆಳೆಸುತ್ತಿದ್ದೀರಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದ ಅರಮನೆ ಮೈದಾನ ತ್ರಿಪುರ ವಾಸಿನಿಯಲ್ಲಿ ಶನಿವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ವತಿಯಿಂದ ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ ಹಾಗೂ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತಿಹಾಸ ಮರೆತವನು ಇತಿಹಾಸ ಸೃಷ್ಟಿಸುವುದಿಲ್ಲ ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು ಹೇಳಿದ್ದಾರೆ. ಮಕ್ಕಳ ಕನಸು ನನಸಾಗಿಸಲು ಶ್ರಮ, ಬದ್ಧತೆ, ಶಿಸ್ತಿರಬೇಕು. ಮಕ್ಕಳು ದೊಡ್ಡ ಕನಸು ಕಾಣುವಂತೆ ಮಾಡಬೇಕು. ನೀವು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಹಾಕುವ ಅಡಿಪಾಯ ಕೊನೆವರೆಗೂ ಇರುತ್ತದೆ ಎಂದು ಹೇಳಿದರು.

ಉತ್ತಮವಾಗಿರುವ ಖಾಸಗಿ ಶಾಲೆಗಳು ಈ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಶಿಕ್ಷಕರನ್ನು ನೇಮಿಸಬೇಕು ಎಂದು ಸೂಚಿಸಿದ್ದೇವೆ. ಮೂರು ಶಾಲೆ ನಡೆಸುತ್ತಿರುವ ನನ್ನ ಮಗಳಿಗೂ ಸರ್ಕಾರಿ ಶಾಲೆ ದತ್ತು ಪಡೆಯುವಂತೆ ಸೂಚಿಸಿದ್ದೇನೆ. ನಮ್ಮ ಕ್ಷೇತ್ರದ ಶಾಲೆಗಳನ್ನು ದತ್ತು ಪಡೆಯಲಾಗುತ್ತಿದೆ. ನಾನು ಶಿಕ್ಷಣ ಪ್ರೇಮಿ. ಈ ಮೂಲಕ 90 ಸಾವಿರ ಶಿಕ್ಷಕರ ಹುದ್ದೆ ಭರ್ತಿ ಮಾಡಬೇಕು. ಮುಂದಿನ ದಿನಗಳಲ್ಲಿ ಇದನ್ನು ಜಾರಿ ಮಾಡುತ್ತೇವೆ ಎಂದು ಹೇಳಿದರು.

ದಾಖಲಾತಿ ಹೆಚ್ಚಿಸಿ

ಮಕ್ಕಳಿಗೆ ಮೊಟ್ಟೆ, ಹಾಲು, ಪೂ-ಸಾಕ್ಸ್, ಪೌಷ್ಟಿಕಾಂಶಯುಕ್ತ ಆಹಾರ ನೀಡುವ ಯೋಜನೆಗಳನ್ನು ಚುರುಕುಗೊಳಿಸಲಾಗಿದೆ. ಈ ಬಾರಿ ಸರ್ಕಾರಿ ಶಾಲೆಗಳಲ್ಲಿ ದಾಖಲಾತಿಯನ್ನು ಶೇ.20 ರಷ್ಟು ಹೆಚ್ಚಿಸುವ ಗುರಿಯನ್ನು ಶಿಕ್ಷಕರು ಹೊಂದಬೇಕು. ಕಳೆದೆರಡು ವರ್ಷಗಳಲ್ಲಿ ಸುಮಾರು 14,499 ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ಕಿರುಸುದ್ದಿ

ಬಜೆಟ್ ನಂತರ ಪಕ್ಷದಲ್ಲಿನ ಗೊಂದಲ ನಿವಾರಣೆ



• **ಬಾಗಲಕೋಟೆ:** ಕಾಂಗ್ರೆಸ್ ಪಕ್ಷದಲ್ಲಿ ನಡೆಯುತ್ತಿರುವ ಗೊಂದಲವನ್ನು ಬಜೆಟ್ ನಂತರ ನಮ್ಮ ಪಕ್ಷದ ಹೈಕಮಾಂಡ್ ಬಗೆ ಹರಿಸಲಿದೆ. ಮುಖ್ಯಮಂತ್ರಿ ಬದಲಾವಣೆ ಇಷ್ಟು ವರ್ಷ ಎಂಬುದರ ಕುರಿತು ಎಲ್ಲಿಯೂ ಚರ್ಚೆಯಾಗಿಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು. ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇಕ್ಬಾಲ್ ಹುಸೇನ್ ಡಿಕೆ ಪರ ಬ್ಯಾಟಿಂಗ್ ಮಾಡಿರುವ ಕುರಿತು ಮಾತನಾಡಿದ ಸಚಿವರು, ರಾಜ್ಯದಲ್ಲಿ ಏಳುಕೋಟಿ ಜನಸಂಖ್ಯೆ ನಮ್ಮವರು. ಒಬ್ಬರು ಹೇಳಿದರೆ ಪಕ್ಷದ ನಿರ್ಣಯ ಆಗುವುದಿಲ್ಲ. ಮುಖ್ಯಮಂತ್ರಿ ಬದಲಾವಣೆ ಕುರಿತು ಎರಡೂವರೆ ವರ್ಷ ಮೂರುವರ್ಷ ಎಂದು ಹೇಳಿಲ್ಲ. ಹೀಗಾಗಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಐದು ವರ್ಷ ಅಧಿಕಾರ ನಡೆಸಲಿದ್ದಾರೆ ಎಂದು ಹೇಳಿದರು. ಬಾಲಕೃಷ್ಣ ಮನೆಯಲ್ಲಿ ಡಿನ್ನರ್ ಮೀಟಿಂಗ್ ಕುರಿತು ಮಾತನಾಡಿ, ಮೊದಲಿನಿಂದಲೂ ಡಿ.ಕೆ.ಶಿವಕುಮಾರ ಸಿಎಂ ಆಗಬೇಕು ಎಂದು ಬಯಸುತ್ತಿದ್ದಾರೆ. ಬಹಿರಂಗವಾಗಿ ಕೂಡ ಹೇಳಿದ್ದಾರೆ. ಪುನ: ಹೇಳ್ತಿದ್ದಾರೆ ಅಷ್ಟೇ ಎಂದು ತಿಳಿಸಿದರು.

ಫೈನಾನ್ಸ್ ಹಾವಳಿ: ಕುಟುಂಬ ಬೀದಿ ಪಾಲು

• **ಬೆಳಗಾವಿ:** ರಾಜ್ಯದಲ್ಲಿ ಮೈಕ್ರೋ ಫೈನಾನ್ಸ್‌ಗಳ ಹಾವಳಿ ತಡೆಗೆ ರಾಜ್ಯದ ಸರ್ಕಾರ ಕಟ್ಟುನಿಟ್ಟಿನ ಆದೇಶ ಹೊರಡಿಸಿದರೂ ಕಿರುಕುಳ ಮಾತ್ರ ನಿಂತಿಲ್ಲ. ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನಲ್ಲಿ ಅಲಖನೂರ ಗ್ರಾಮದಲ್ಲಿ ಖಾಸಗಿ ಫೈನಾನ್ಸ್ ಕಂಪನಿಯ ಕಿರುಕುಳಕ್ಕೆ ಮೂರು ತಿಂಗಳ ಹಸುಗೂಸು ಜತೆ ಕುಟುಂಬ ಬೀದಿ ಪಾಲಾಗಿದೆ. ಚಿಕ್ಕೋಡಿಯ ಸ್ಮಾಲ್ ಫೈನಾನ್ಸ್ ಕಂಪನಿಯಿಂದ ಮನೆ ಸೀಜ್ ಮಾಡಲಾಗಿದ್ದು, ಮೂರು ತಿಂಗಳ ಹಸುಗೂಸು ಸೇರಿ ಐವರು ಕುಟುಂಬಸ್ಥರು ಬೀದಿ ಪಾಲಾಗಿ ವಾಸ್ತವ್ಯ ಇಲ್ಲದೆ. ಇಡೀ ರಾತ್ರಿ, ಬೀದಿಯಲ್ಲೇ ಕಳೆದಿರುವ ಮನ ಕುಲುಕುವ ಘಟನೆ ನಡೆದಿದೆ. ಹನುಮಂತ ಪಾಟೀಲ್ ಎಂಬುವವರು ತಂದೆ ಶ್ರೀಕಾಂತ್ ಪಾಟೀಲ್ ಹೃದಯ ಶಸ್ತ್ರಚಿಕಿತ್ಸೆಗಾಗಿ ಮನೆ ಅಡವಿಟ್ಟು ಸುಮಾರು 20 ಲಕ್ಷ ರೂ. ಸಾಲ ಪಡೆದಿದ್ದರು. ಕಳೆದ ವರ್ಷ ಶ್ರೀಕಾಂತ್ ನಿಧನರಾದ ಬಳಿಕ, ಆರೋಗ್ಯ ಸಮಸ್ಯೆಯಿಂದಾಗಿ ಹನುಮಂತ ಕಳೆದ ಏಳು ತಿಂಗಳಿಂದ ಕಂತು ಪಾವತಿಸಲು ಸಾಧ್ಯವಾಗಿರಲಿಲ್ಲ. ಸುಮಾರು ಏಳು ಲಕ್ಷ ರೂ. ಬಾಕಿ ಇದ್ದ ಹಿನ್ನೆಲೆಯಲ್ಲಿ ಏಕಾಏಕಿ ಬಂದ ಫೈನಾನ್ಸ್ ಕಂಪನಿಯ ಸಿಬ್ಬಂದಿ ಮನೆ ಸೀಜ್ ಮಾಡಿದ್ದರಿಂದ ಕುಟುಂಬ ತೊಂದರೆಗೆ ಸಿಲುಕಿದೆ.

ಸರ್ಕಾರದ ಮೇಲೆ ಜನರ ವಿಶ್ವಾಸ ಇಲ್ಲ: ಬೊಮ್ಮಾಯಿ

• **ಹಾವೇರಿ:** ಕರ್ನಾಟಕ ಕಾಂಗ್ರೆಸ್ ಸರ್ಕಾರದ ಕುರ್ಚಿಯ ಗುದ್ದಾಟ ಬಜೆಟ್ ನಂತರ ತೀವ್ರವಾಗಿ ಅಂತಿಮ ಘಟಕ್ಕೆ ತಲುಪಲಿದೆ. ಅದು ಕಾದಾಟವೇ ಆಗಲಿದ್ದು, ಸಂಧಾನ ಆಗಲು ಸಾಧ್ಯವಿಲ್ಲ. ಅದು ಯಾವ ರೀತಿ ಆಗುತ್ತದೆ ಎನ್ನುವುದನ್ನು ಕಾದು ನೋಡಬೇಕು ಎಂದು ಮಾಜಿ ಮುಖ್ಯಮಂತ್ರಿ, ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಸರ್ಕಾರದ ಮೇಲೆ ಜನರ ವಿಶ್ವಾಸ ಸಂಪೂರ್ಣ ಹೋಗಿದೆ ಎಂದು ಹೇಳಿದರು.

ರಾಜಕಾರಣದಲ್ಲಿ ಶಸ್ತ್ರ-ಅಸ್ತ್ರ ಬೇಕಾಗಿಲ್ಲ: ಮಾಜಿ ಸಂಸದ ಡಿ.ಕೆ. ಸುರೇಶ್

ಅದೃಷ್ಟ ಇದ್ರೆ ಅಣ್ಣ ಸಿಎಂ!



• **ಬೆಂಗಳೂರು:** ಹಣೆ ಬರಹದಲ್ಲಿ ಬರೆದಿದ್ದರೆ ನನ್ನ ಅಣ್ಣ ಸಿಎಂ ಆಗುತ್ತಾರೆ. ಹಣೆಬರಹ ಇಲ್ಲ ಎಂದರೆ ಯಾರೂ ಏನೂ ಮಾಡಲು ಆಗುವುದಿಲ್ಲ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ತಿಳಿಸಿದರು.

ಶನಿವಾರ ಸದಾಶಿವನಗರ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿ, ಶಸ್ತ್ರ ತ್ಯಾಗದ ಪ್ರಶ್ನೆಗೆ ಉತ್ತರಿಸಿದ ಅವರು, ತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ? ಶಸ್ತ್ರವೇ ಇಲ್ಲವಲ್ಲ. ಶಸ್ತ್ರ ಇದೆ ಎಂದು ನಾನು ಯಾವಾಗ ಹೇಳಿದ್ದೆ. ಶಸ್ತ್ರವೇ ಇಲ್ಲದಿದ್ದಾಗ ಶಸ್ತ್ರತ್ಯಾಗದ ಪ್ರಶ್ನೆಯೇ ಬಾರದು ಎಂದು ಕೇಳಿದರು. ಆದರೆ, ತಾಳ್ಮೆ ಇರಲಿ ಎಂದು ಹೇಳುತ್ತಿದ್ದೇನೆ ಎಂದರು. ಇದು ರಾಜಕಾರಣ, ಇಲ್ಲಿ ಶಸ್ತ್ರ ಹಾಗೂ ಅಸ್ತ್ರ ಬೇಕಾಗಿಲ್ಲ ಎಂದರು.

ಶಾಸಕರ ದೆಹಲಿ ಯಾತ್ರೆ ವಿಚಾರ ನನಗೆ ಗೊತ್ತಿಲ್ಲ: ಶಾಸಕರು ದೆಹಲಿಗೆ ಹೋಗುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಶಾಸಕರನ್ನೇ ಕೇಳಬೇಕು. ಶಾಸಕರ ಭೋಜನಕೂಟ ನಡೆದಾಗ ನಾನು ಊರಲ್ಲಿ ಇರಲಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ, ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ. ಪಕ್ಷ ಅದನ್ನು ಗಮನಿಸಲಿದೆ ಎಂದು ತಿಳಿಸಿದರು. ಅಲ್ಲದೇ, ಚುನಾವಣೆಗೆ ಸ್ಪರ್ಧಿಸುವವರಿಗೆ ಕಷ್ಟವಾಗಬಹುದು. ನನಗೆ ಕಷ್ಟ ಆಗುವುದಿಲ್ಲ, ಈ ಬಗ್ಗೆ ನಾನೇಗೆ ಹೇಳಲಿ ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಶಾಸಕರ ವಿಚಾರಧಾರೆ ಶಾಸಕರಿಗೇ ಸಂಬಂಧಿಸಿದ್ದೇ ಹೊರತು, ನನಗಲ್ಲ, ಪಕ್ಷ ಅವರ ವಿಚಾರಗಳನ್ನು ಗಮನಿಸಲಿದೆ. ನಾವು ಆ ವಿಚಾರದಲ್ಲಿ ಹೇಳಲು ಬರುವುದಿಲ್ಲ ಎಂದರು. ಮುಖ್ಯಮಂತ್ರಿ ಆಗಲು ಎಲ್ಲರಿಗೂ ಆಸೆ ಇದೆ. ಇದರಲ್ಲಿ ತಪ್ಪೇನಿಲ್ಲ ಎಂದರು. ದಯವಿಟ್ಟು ಶಾಸಕರ ವಿಚಾರ ಬಿಟ್ಟು ಬಮೂಲ್ ವಿಚಾರ ಏನಾದರೂ ಇದ್ದರೆ ಕೇಳಿ, ಪ್ರತಿಕ್ರಿಯೆ ನೀಡುವೆ ಎಂದರು.

ಪಕ್ಷದಿಂದ ಕೆಎಂಎಫ್ ಚುನಾವಣೆ ಅಭ್ಯರ್ಥಿ ಆಯ್ಕೆ: ಕೆಎಂಎಫ್ ಚುನಾವಣೆ ಯಾವಾಗ ಮಾಡಬೇಕು ಎಂದು ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಆಗ ಪಕ್ಷ ತೀರ್ಮಾನ ಮಾಡುವ ವ್ಯಕ್ತಿಯೇ ಸ್ಪರ್ಧೆ ಮಾಡಲಿದ್ದಾರೆ ಎಂದರು. ಆದರೆ, ನಾನು ಯಾವುದಕ್ಕೂ ಆಕಾಂಕ್ಷಿ ಅಲ್ಲ, ನಾನು ರಾಜಕೀಯ ಪಂಡಿತನಲ್ಲ ಎಂದರು.

ಕೊಟ್ಟ ಗ್ಯಾರಂಟಿ ವಾಗ್ದಾನ ಉಳಿಸಿಕೊಳ್ಳಬೇಕು: ಗ್ಯಾರಂಟಿಯು ರಾಜ್ಯದ ಜನತೆಗೆ ಕೊಟ್ಟ ನಮ್ಮ ವಾಗ್ದಾನ. ನಾವು ಅದರಂತೆ ನಡೆಯಬೇಕು. ಪಕ್ಷದ ಅಧ್ಯಕ್ಷರು, ಸಿಎಂ ಸೇರಿದಂತೆ ಚುನಾವಣೆ ಎದುರಿಸಿದ ಎಲ್ಲರೂ ಗ್ಯಾರಂಟಿ ನೀಡುವುದಾಗಿ ಹೇಳಿದ್ದಾರೆ. ಅದನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕು ಎಂದು ಡಿ.ಕೆ.ಸುರೇಶ್ ತಿಳಿಸಿದರು.

ಗ್ಯಾರಂಟಿ ವಾಗ್ದಾನ ಮಾಡುವ ಮುಂಚೆ ಚಿಂತಿಸಬೇಕಿತ್ತು

ಹೊರೆಯಾದರೂ ಆಗಲಿ, ಬೇರೆಯಾದರೂ ಆಗಲಿ. ಮಾತು ಕೊಡುವ ಮುನ್ನ ಚಿಂತನೆ ಮಾಡಬೇಕಿತ್ತು. ಮಾತು ಕೊಟ್ಟಾಗಿದೆ. ಅದರಂತೆ ನಡೆಯಬೇಕು. ಐದು ವರ್ಷಗಳ ಕಾಲ ಎಷ್ಟೇ ಕಷ್ಟ ಆದರೂ ಗ್ಯಾರಂಟಿಗಳನ್ನು ರಾಜ್ಯದ ಜನತೆಗೆ ಕೊಡಬೇಕು. ಅದು ನಮ್ಮ ನಂಬಿಕೆ ಎಂದು ತಿಳಿಸಿದರು. ಸಿರಿವಂತರು ಇದನ್ನು ಪಡೆಯುತ್ತಿದ್ದರೆ ಅದು ತಪ್ಪು. ಬಡವರಿಗಾಗಿ ಗ್ಯಾರಂಟಿ ಯೋಜನೆ ತರಲಾಗಿದೆ. ಈ ಯೋಜನೆ ಎಲ್ಲರೂ ಬಳಸುತ್ತಿರುವ ಬಗ್ಗೆ ಕೆಲವರು ಮಾತನಾಡಿರಬಹುದು. ನಾವು ಕೊಟ್ಟಿರುವ ವಾಗ್ದಾನವನ್ನು ಅನುಷ್ಠಾನ ಮಾಡಲಾಗಿದ್ದು, ಇದರಿಂದ ಹಿಂದೆ ಸರಿಯುವ ಪ್ರಶ್ನೆ ಇಲ್ಲ. ಹಿಂದೆ ಸರಿದರೆ ಮಾತಿಗೆ ತಪ್ಪಿದಂತೆ ಆಗುತ್ತದೆ ಎಂದರು.

ಶಾಸಕರ ಫಾರಿನ್ ಟೂರ್ ಬಗ್ಗೆ ಗೊತ್ತಿಲ್ಲ: ಡಿಕೆಶಿ



ಶಾಸಕರು ದೆಹಲಿಗೆ ಹೋಗುವುದೂ ಗೊತ್ತಿಲ್ಲ, ಫಾರಿನ್ ಗೆ ಹೋಗುವುದೂ ಗೊತ್ತಿಲ್ಲ. ಈ ಬಗ್ಗೆ ನನ್ನನ್ನು ಯಾರೂ ಕೇಳಿಯೂ ಇಲ್ಲ, ಈ ವಿಚಾರದಲ್ಲಿ ನಾನು ಬಾಯಿ ಹಾಕುವುದಿಲ್ಲ. ನನ್ನ ಪರವಾಗಿ 139 ಶಾಸಕರು ಸೇರಿ ಮುಖ್ಯಮಂತ್ರಿಯವರು ನನ್ನ ಬೆಂಬಲಕ್ಕೆ ಇದ್ದೇ ಇದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ವಿಪಕ್ಷ ನಾಯಕ ಆರ್. ಅಶೋಕ್ ಟೀಕೆ

ಕುರ್ಚಿ ಕಾಳಗದಿಂದ ಅಭಿವೃದ್ಧಿ ಕುಂಠಿತ



• **ಮಂಡ್ಯ:** ಸಾವಿರ ದಿನಗಳನ್ನು ಪೂರೈಸಿ ಮುನ್ನುಗ್ಗುತ್ತಿರುವ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಸಾವಿರ ಸಮಸ್ಯೆಗಳು, ಹಗರಣಗಳು ಗೊಂದಲಗಳಿಂದ ಕೂಡಿದೆ ಎಂದು ವಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದರು.

ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಾವಿರ ದಿನಗಳನ್ನು ಪೂರೈಸಿದ್ದರೂ, ಬರೀ ಹಗರಣಗಳು, ಕುರ್ಚಿ ಕಾಳಗ, ಶಾಸಕರ ಡಿನ್ನರ್, ಬ್ರೇಕ್‌ಫಾಸ್ಟ್ ಮೀಟಿಂಗ್‌ಗೆ ಮಾತ್ರ ಸೀಮಿತವಾಗಿದೆ ಎಂದು ಆರೋಪಿಸಿದರು.

ಆರೋಗ್ಯ ಇಲಾಖೆಗೆ ಅನಾರೋಗ್ಯ: ರಾಜ್ಯದ ಸರ್ಕಾರಿ ಆಸ್ಪತ್ರೆಗಳು ಖಾಲಿ ಖಾಲಿಯಾಗಿವೆ. ಅಗತ್ಯ ಔಷಧಗಳಿಲ್ಲ. ಈ ಸರ್ಕಾರ ಔಷಧಗಳನ್ನೇ ಖರೀದಿಸುತ್ತಿಲ್ಲ, ಸರ್ಕಾರವೂ ಸರಬರಾಜು ಮಾಡುತ್ತಿಲ್ಲ. ಇಲ್ಲವೇ ಯೂಸರ್ಸ್ ಫಂಡ್‌ನಿಂದಲೂ ಖರೀದಿ ಮಾಡದಂತೆ ಆದೇಶ ನೀಡಿದೆ. ರೋಗಿಗಳು ಚೀಟಿ ಹಿಡಿದುಕೊಂಡು ಔಷಧ ಅಂಗಡಿಗಳತ್ತ ಹೋಗುವಂತಹ ಸ್ಥಿತಿಯಿಂದಾಗಿ ಆರೋಗ್ಯ ಇಲಾಖೆಗೆ ಅನಾರೋಗ್ಯ ಕಾಡುತ್ತಿದೆ ಎಂದು ಟೀಕಿಸಿದರು.

ಮಾ. 12ರಿಂದ ವೈದ್ಯರು ಪ್ರತಿಭಟನೆಗೆ ಮುಂದಾಗಿದ್ದಾರೆ. ಸರ್ಕಾರ ಬದುಕಿದ್ದರೆ ಔಷಧಗಳನ್ನು ಖರೀದಿಸಬೇಕು. ಈ ಪರಿಸ್ಥಿತಿಗೆ ಆರೋಗ್ಯ ಸಚಿವರೇ ಕಾರಣ. ಜತೆಗೆ ಗ್ಯಾರಂಟಿಗಳು ಹೊರೆಯಾಗಿವೆ ಎಂದು ಸ್ವತಃ ಉಪ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ್ ಅವರೇ ಹೇಳಿದ್ದಾರೆ. ಈ ಹೊರೆಯಿಂದ ಎಲ್ಲಾ ಇಲಾಖೆಗಳಲ್ಲೂ ಶೇ. 25 ರಿಂದ 30ರಷ್ಟು ಕಡಿತವಾಗುತ್ತಿದೆ. ಯಾವ ಇಲಾಖೆಯಿಂದಲೂ ಅಭಿವೃದ್ಧಿ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಖಾತೆ ಆರಂಭಿಸಿದರು. 11-12 ಸಾವಿರ ಲಂಚ ಕೊಡದೆ ಆಗುತ್ತಿಲ್ಲ, ಸರ್ಕಾರವೇ ಡಿಜಿಟಲ್ ಖಾತೆಗಳನ್ನು ಬದಲಾವಣೆ ಮಾಡಬೇಕಿತ್ತು. ಆದರೆ ಲಂಚಕ್ಕೆ ದಾರಿ ಮಾಡಿಕೊಡಲು ಈ ಖಾತಾ ಮಾಡಿದ್ದಾರೆ ಎಂದರು.

ಹೈಕಮಾಂಡ್ ತೀರ್ಮಾನ ಅಂತಿಮ

ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ವಿಚಾರ ಹೈಕಮಾಂಡ್ ತೀರ್ಮಾನ ಮಾಡುತ್ತಾರೆ. ರಾಜ್ಯದ ಪರಿಸ್ಥಿತಿ ಬಗ್ಗೆ ಈಗಾಗಲೇ ರಾಜ್ಯ ಉಸ್ತುವಾರಿಗೆ ನಮ್ಮ ಅಭಿಪ್ರಾಯಗಳನ್ನು ಹೇಳಿದ್ದೇವೆ. ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ವಿಚಾರ ಇದೆ. ದೇವೇಗೌಡರೇ ಮೊದಲು ಮೈತ್ರಿ ಬೇಡ ಎಂದಿದ್ದರು, ಈಗ ಮೈತ್ರಿ ಬಗ್ಗೆ ಮಾತನಾಡಿದ್ದಾರೆ. ಹೊಂದಾಣಿಕೆ ಬಗ್ಗೆ ಆಮೇಲೆ ನೋಡೋಣ ಆದರೆ, ಸಿದ್ದರಾಮಯ್ಯ ಉಳಿದುಕೊಳ್ಳಲು ಸ್ಥಳೀಯ ಚುನಾವಣೆ ಘೋಷಣೆ ಮಾಡಲಿ ಎಂದು ತಿರುಗೇಟು ನೀಡಿದರು.

ಒಳಮೀಸಲಾತಿ ಜಾರಿ ಮಾಡಿಲ್ಲ



• **ಬೆಂಗಳೂರು:** ಕಾಂಗ್ರೆಸ್ ಸರ್ಕಾರವು ಒಳ ಮೀಸಲಾತಿ ಜಾರಿ ಮಾಡಿಲ್ಲ, ಇಷ್ಟು ದಿನಗಳ ಕಾಲ ದಲಿತರಿಗೂ ವಂಚನೆ ಮಾಡಿ, ಇದೀಗ ಯುವ ಜನರಿಗೂ ಅನ್ಯಾಯ ಮಾಡಿದೆ ಎಂದು ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಎಂದು ಕಿಡಿಕಾರಿದ್ದಾರೆ.

ಶನಿವಾರ ಮಾಧ್ಯಮಗಳ ಜತೆಗೆ ಮಾತನಾಡಿ, ಹಳೇ ರೀತಿಯಲ್ಲೇ ಮೀಸಲಾತಿ ಕೊಡುವುದಾದರೆ ಅದು ಒಳ ಮೀಸಲಾತಿ ಆಗುವುದಿಲ್ಲ, ಒಳ ಮೀಸಲಾತಿ ಕೊಡುವುದಾದರೆ ಶೇ.17 ರಂತೆ ಕೊಡಬೇಕು. ಅದು ಆಗುವುದಿಲ್ಲ, ಕೋರ್ಟ್‌ನಲ್ಲಿ ಕೇಸಿದೆ ಎಂದರು.

ಒಳ ಮೀಸಲಾತಿಗೆ ಒಳಪಡುವ ಪರಿಶಿಷ್ಟ ಜಾತಿಗಳ ಹೋರಾಟ ಎರಡ್ಮೂರು ದಶಕಗಳಿಂದ ನಡೆಯುತ್ತಿತ್ತು. ಒಳ ಮೀಸಲಾತಿ ಮಾಡಲು ಒತ್ತಡ ಹೆಚ್ಚಾದ ಕಾರಣ ಒಂದು ತೀರ್ಮಾನಕ್ಕೆ ಬಂದು ಎಬಿಸಿಡಿ ಗುಂಪುಗಳನ್ನು ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿತ್ತು. ಆಗ ನಮಗೆ ಅದನ್ನು ಜಾರಿಗೊಳಿಸಲು ಅಧಿಕಾರ ಇರಲಿಲ್ಲ ಎಂದು ವಿಶ್ಲೇಷಿಸಿದರು.

ರಾಜ್ಯದಲ್ಲಿ ಯುವ ಜನತೆ ವಿರೋಧಿ ಸರ್ಕಾರ

ಬೆಂಗಳೂರು : ರಾಜ್ಯದಲ್ಲಿ ನಿರುದ್ಯೋಗಿ ಯುವ ಜನತೆಯ ವಿರೋಧಿ ಸರ್ಕಾರ ಇದೆ ಎಂದು ವಿಧಾನ ಪರಿಷತ್‌ನ ವಿಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ಆರೋಪಿಸಿದ್ದಾರೆ. ಶನಿವಾರ ಮಾಧ್ಯಮಗಳ ಜತೆ ಮಾತನಾಡಿದ ಅವರು, ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾಗಿದೆ. 40 ಸಾವಿರ ಹುದ್ದೆ ಭರ್ತಿ ಮಾಡಿರುವುದಾಗಿ ಸಿದ್ದರಾಮಯ್ಯ ಅವರು ಹೇಳುತ್ತಾರೆ. 40 ಸಾವಿರ ಹುದ್ದೆಯಡಿ ಯಾವ್ಯಾವ ಹುದ್ದೆ ಭರ್ತಿ ಮಾಡಿದ್ದೀರೆಂದು ಇಲಾಖಾವಾರು ಲೆಕ್ಕ ಕೊಡಿ ಎಂದು ಸವಾಲು ಹಾಕಿದರು. ಶೇ.56 ಮೀಸಲಾತಿಯಡಿ ನಾವು ಹುದ್ದೆ ಭರ್ತಿ ಮಾಡುವುದಾಗಿ ಕೋರ್ಟಿನಲ್ಲಿ ಸಮರ್ಥಕ ವಾದ ಮಂಡಿಸಿಲ್ಲ, ಇದು ಎಸ್ಸಿ,ಎಸ್ಟಿಗಳಿಗೆ ಅನ್ಯಾಯವಾಗಿದೆ ಎಂದರು.

ಇಂದು ಲಿಖಿತ ಪರೀಕ್ಷೆ

• **ಬೆಂಗಳೂರು:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ಎಲ್ಲ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಭಾನುವಾರ (ಮಾ.1) ಲಿಖಿತ ಪರೀಕ್ಷೆ ನಡೆಸಲಿದ್ದು ಸಕಲ ತಯಾರಿ ಮಾಡಿಕೊಂಡಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ಮಾದರಿ ಶಾಲೆ, ಅಟಲ್ ಬಿಹಾರಿ ವಾಜಪೇಯಿ ಶಾಲೆ, ಇಂದಿರಾಗಾಂಧಿ, ಅಂಬೇಡ್ಕರ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಇತ್ಯಾದಿ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ನೂರು ಅಂಕಗಳಿಗೆ ಪರೀಕ್ಷೆ ನಡೆಯಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ.

ಒಟ್ಟು 2.31 ಲಕ್ಷ ಮಂದಿ ಪರೀಕ್ಷೆ ಬರೆಯಲು ಅರ್ಜಿ ಸಲ್ಲಿಸಿದ್ದು, 629 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಬಹುತೇಕ ಎಲ್ಲ ತಾಲೂಕು ಕೇಂದ್ರಗಳಲ್ಲಿ ಕೂಡ ಪರೀಕ್ಷೆ ನಡೆಯಲಿದೆ. 5ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ ಎಂದು ವಿವರಿಸಿದ್ದಾರೆ.

ವಾಯವ್ಯ ಸಾರಿಗೆಗೆ ಶೀಘ್ರ ಕಿತ್ತೂರು ಚನ್ನಮ್ಮ ಎಂದು ಮರುನಾಮಕರಣ



• **ಬೆಳಗಾವಿ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ಚನ್ನಮ್ಮನ ಹೆಸರು ಮರುನಾಮಕರಣ ಮಾಡುವ ಸಂಬಂಧ ಪ್ರಸ್ತಾವ ಸಲ್ಲಿಕೆಯಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಅದಕ್ಕೆ ಅನುಮೋದನೆ ಪಡೆದು ಮರುನಾಮಕರಣ ಮಾಡುತ್ತೇವೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ಇಲ್ಲಿನ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ಚನ್ನಮ್ಮ ರಸ್ತೆ ಸಾರಿಗೆ ನಿಗಮ ಎಂದು ಶೀಘ್ರದಲ್ಲೇ ಮರುನಾಮಕರಣ ಮಾಡುತ್ತೇವೆ' ಎಂದರು.

ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ (2019ರಿಂದ 2023ರ ಅವಧಿಯಲ್ಲಿ) ಹೊಸ ಬಸ್ ಖರೀದಿಯಾಗಿಲ್ಲ. ಕೊರೋನಾ ಹಿನ್ನೆಲೆಯಲ್ಲಿ ಆಗ ಸಿಬ್ಬಂದಿ ವೇತನ ನೀಡಲು, ಡೀಸೆಲ್ ಖರೀದಿಗೂ ಕಷ್ಟದ ಪರಿಸ್ಥಿತಿ ಇತ್ತು. ಹಾಗಾಗಿ ಈಗ ಕೆಲವು ಮಾರ್ಗಗಳಲ್ಲಿ ಹಳೇ ಬಸ್‌ಗಳು ಓಡುತ್ತಿರಬಹುದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೊಸ ಬಸ್‌ಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಂತ-ಹಂತವಾಗಿ ವಿವಿಧ ಮಾರ್ಗಗಳಲ್ಲಿ ಹೊಸ ಬಸ್ ಒದಗಿಸಲಾಗುತ್ತಿದೆ ಎಂದರು.

ಆಯವ್ಯಯದಲ್ಲಿ ಘೋಷಿಸಿದಂತೆ ಎರಡು ಸಾವಿರ ಹೊಸ ಬಸ್ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ವಾಕರಸಾ ಸಂಸ್ಥೆಗೆ ಏಳು ನೂರು ವಾಹನಗಳ ಪೈಕಿ 250 ಬಸ್ ಗಳನ್ನು ಲೋಕಾರ್ಪಣೆಗೊಳಿಸಲಾಗಿದೆ. ಬೆಳಗಾವಿ ರಾಜ್ಯದ ದೊಡ್ಡ ಜಿಲ್ಲೆಯಾಗಿದೆ ಎಂದರು.

9 ಸಾವಿರ ಸಿಬ್ಬಂದಿ ನೇಮಕ

ನಾನು ಈ ಹಿಂದೆ ಸಾರಿಗೆ ಸಚಿವನಾಗಿದ್ದಾಗ, ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯಾಪ್ತಿಯಲ್ಲಿ ಹಲವು ಬಸ್ ನಿಲ್ದಾಣ, ಘಟಕ ನಿರ್ಮಿಸಿದ್ದೆ. ಈ ಸಲ ಸಾರಿಗೆ ಸಚಿವನಾದ ನಂತರ ಸಾರಿಗೆ ಸಂಸ್ಥೆಯಲ್ಲಿ 9 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಂಡಿದ್ದೇವೆ. ಅನುಕಂಪದ ಆಧಾರದಲ್ಲಿ 1 ಸಾವಿರ ಮಂದಿಗೆ ಕೆಲಸ ಕೊಟ್ಟಿದ್ದೇವೆ' ಎಂದರು.



ಸಿಲಿಕಾನ್ ಸಿಟಿಯ ರಸ್ತೆಗಳಲ್ಲಿ ಕಂಗೊಳಿಸಿದ ಗುಲಾಬಿ ಚೆರ್ರಿ ಹೂ


ಗುಲಾಬಿ ಬಣ್ಣಕ್ಕೆ ತಿರುಗಿದ ಬೆಂಗಳೂರಿನ ರಸ್ತೆಗಳು!

▸ ಮಹೇಶ್ ಹೆಗಡೆ

• **ಬೆಂಗಳೂರು:** ಪ್ರತಿ ವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಬೆಂಗಳೂರಿನ ರಸ್ತೆಗಳು ಗುಲಾಬಿ ಬಣ್ಣದ ಹೂವುಗಳಿಂದ ಕಂಗೊಳಿಸುತ್ತವೆ. ನಗರದ ಈ ಅದ್ಭುತ ಸೌಂದರ್ಯವನ್ನು ಪ್ರತಿಯೊಬ್ಬರು ಆಸ್ವಾದಿಸಿ, ಸಂತೋಷ ಪಡುತ್ತಿದ್ದಾರೆ. ಆದರೆ ಇದರ ಹಿಂದೆ ಭಾರತೀಯ ಅರಣ್ಯ ಸೇವೆಯ(ಐಎಫ್ಎಸ್) ಅಧಿಕಾರಿ ಸೇತುರಾಮ್ ಗೋಪಾಲರಾವ್ ನೇಗಿನಾಳ(ಎಸ್.ಜಿ. ನೇಗಿನಾಳ) ಅವರ 40 ವರ್ಷಗಳ ಹಿಂದಿನ ನಿರಂತರ ಪರಿಶ್ರಮ ಮತ್ತು ವೈಜ್ಞಾನಿಕ ಯೋಜನೆಯ ಪರಿಣಾಮವಾಗಿದೆ. ಸಿಲಿಕಾನ್ ಸಿಟಿ ಬೆಂಗಳೂರಿನ ರಸ್ತೆಗಳು ಈಗ ಟಬೂಬಿಯಾ ರೋಸಿಯಾ ಹೂವುಗಳಿಂದ ಕಂಗೊಳಿಸುತ್ತಿವೆ. ಜಪಾನಿನ ಚೆರ್ರಿ ಬ್ಲಾಸಂ ಹೂವುಗಳನ್ನು ಹೋಲುವ ಈ ಗುಲಾಬಿ ಬಣ್ಣದ ಹೂವುಗಳು ದಕ್ಷಿಣ ಅಮೆರಿಕ ಮೂಲದ್ದಾಗಿದೆ. ನಾಗರಬಾವಿ, ಕಬ್ಬನ್ ಪಾರ್ಕ್, ಲಾಲ್‌ಬಾಗ್, ಕೋರಮಂಗಲ, ಜಯನಗರ, ಸದಾಶಿವನಗರ ಸೇರಿದಂತೆ ರಾಜಧಾನಿಯ ಹಲವೆಡೆ ತಿಳಿ ಗುಲಾಬಿ, ಬಿಳಿ ಬಣ್ಣದ ಹೂಗಳನ್ನು ಹೊತ್ತು ನಗರದ ನಿವಾಸಿಗಳ ಮನಸ್ಸಿಗೆ ಖುಷಿ ತರುತ್ತಿದೆ. ಚಳಿಗಾಲದಲ್ಲಿ ತನ್ನ ಎಲೆಗಳನ್ನು ಉದುರಿಸಿ ವಸಂತ ಋತುವಿನ ಆರಂಭದಲ್ಲಿ ಹೂವುಗಳಿಂದ ತುಂಬಿ ನಿಲ್ಲುವ ಟಬೂಬಿಯಾ ಮರಗಳು ಬೆಂಗಳೂರಿನ ಅಂದಕ್ಕೆ ಮೆರುಗು ತರುತ್ತವೆ.

40 ವರ್ಷದ ಹಿಂದಿನ ಪರಿಶ್ರಮ

1980ರ ದಶಕದಲ್ಲಿ ಬೆಂಗಳೂರು ವೇಗವಾಗಿ ಬೆಳೆಯುತ್ತಿದ್ದಾಗ, ಜನಸಂಖ್ಯೆಗನುಗುಣವಾಗಿ ರಸ್ತೆಗಳ ಅಗಲೀಕರಣಕ್ಕಾಗಿ ಸಾವಿರಾರು ಮರಗಳನ್ನು ಕಡಿಯಲಾಗಿತ್ತು. ಹಸಿರು ನಗರವಾಗಿದ್ದ ಬೆಂಗಳೂರು ಕಾಂಕ್ರೀಟ್ ಕಾಡಾಗಿ ಬದಲಾಗುತ್ತಾ, ಉಸಿರುಗಟ್ಟುವ ವಾತಾವರಣ ನಿರ್ಮಾಣವಾಗಿತ್ತು. ಆಗ ನಗರಕ್ಕೆ ಮತ್ತೆ ಹಸಿರು ಹೊದಿಕೆ ಹೆಚ್ಚಿಸಲು ಸರ್ಕಾರದ ಸೂಚನೆಯಂತೆ ಆಂದಿನ ಐಎಫ್‌ಎಸ್ ಅಧಿಕಾರಿ ಎಸ್.ಜಿ.ನೇಗಿನಾಳ ಮುಂದಾದರು. ಯಾವುದಾದರೂ ಸಸಿಗಳನ್ನು ನೆಡುವ ಬದಲಿಗೆ, ವೈಜ್ಞಾನಿಕವಾಗಿ ಮಣ್ಣಿನ ಗುಣಮಟ್ಟವನ್ನು ಅಭ್ಯಸಿಸಿ, ನಗರಕ್ಕೆ ಯಾವ ಮರಗಳು ಸೂಕ್ತವೆಂದು ನಿರ್ಧರಿಸಿದರು. ಆದರ ಪರಿಣಾಮವೇ ರಸ್ತೆ ಬದಿಯಲ್ಲಿ ನೆರಳು ನೀಡುವ ಜೊತೆಗೆ ಕಾಲೋಚಿತವಾಗಿ ಹೂ ಬಿಡುವ, ಬೇಗನೆ ಬೆಳೆಯುವ ಟಬೂಬಿಯಾ ರೋಸಿಯಾ ತಳಿಯನ್ನು ಆರಿಸಿಕೊಂಡರು ನಗರದಾದ್ಯಂತ ನೆಟ್ಟರು. 25 ರಿಂದ 100 ಅಡಿ ಎತ್ತರದವರೆಗೆ ಬೆಳೆಯುವ ಸಾಮರ್ಥ್ಯ ಹೊಂದಿರುವ ಆ ಮರಗಳೇ ಈಗ ಗುಲಾಬಿ ಬಣ್ಣದ ಹೂವುಗಳನ್ನು ಬಿಟ್ಟು ಪ್ರತಿವರ್ಷ ಫೆಬ್ರವರಿ ಮತ್ತು ಮಾರ್ಚ್ ತಿಂಗಳಲ್ಲಿ ಕಣ್ಣಿಗೆ ಹಬ್ಬ ನೀಡುತ್ತವೆ.



ಬೆಂಗಳೂರಿನ ಕಾಂಕ್ರೀಟ್ ಕಾಡಿನ ಮಧ್ಯೆ, ಗುಲಾಬಿ ಬಣ್ಣದ ಹೂವುಗಳಿಂದ ತುಂಬಿರುವ ನೈಜವಾದ ಮರಗಳು ಮನಸ್ಸಿಗೆ ಆನಂದವನ್ನು ನೀಡುತ್ತಿದೆ.ಈ ಸೌಂದರ್ಯದಲ್ಲಿ ಬೆಂಗಳೂರನ್ನು ನೋಡುವುದೆ ಒಂದು ಖುಷಿ.
■ ಶ್ರೀದೇವಿ ಭಟ್, ಹೊಸಕೆರೆಹಳ್ಳಿ ನಿವಾಸಿ

ರಾತ್ರಿಯಲ್ಲಿ ಹಸಿರು ಕಾರ್ಯಾಚರಣೆ

ನೇಗಿನಾಳ ಅವರು ಪ್ರತಿಯೊಂದು ಏರಿಯಾದ ನಿವಾಸಿಗಳ ಬಳಿ ತೆರಳಿ ಅವರ ಸಹಕಾರದೊಂದಿಗೆ ನೆಡುತೋಪು ಬೆಳೆಸಿದರು. ಬೆಂಗಳೂರಿನ ಟ್ರಾಫಿಕ್‌ನಲ್ಲಿ ಹಗಲು ಹೊತ್ತಿನಲ್ಲಿ ಮರ ನೆಡುವುದು ಕಷ್ಟವಾಗಿತ್ತು. ಇದಕ್ಕಾಗಿ ನೇಗಿನಾಳ ಮತ್ತು ಅವರ ತಂಡವು ರಾತ್ರಿ ಹೊತ್ತು ಟಾರ್ಚ್ ಹಿಡಿದು ಕೆಲಸ ಮಾಡಿ, ಕೇವಲ 5 ವರ್ಷಗಳ ಅವಧಿಯಲ್ಲಿ ನಗರದಾದ್ಯಂತ ಸುಮಾರು 15 ಲಕ್ಷಕ್ಕೂ ಹೆಚ್ಚು ವಿವಿಧ ರೀತಿಯ ಸಸಿಗಳನ್ನು ನೆಟ್ಟು ಪೋಷಿಸಿದರು. ಸಸಿಗಳ ರಕ್ಷಣೆಗಾಗಿ ಸಿಮೆಂಟ್ ರಿಂಗ್‌ಗಳ ಬದಲು ಬಿದಿರು ಮತ್ತು ಜಾಲರಿಗಳನ್ನು ಬಳಸಿ ಕಡಿಮೆ ವೆಚ್ಚದಲ್ಲಿ ಟ್ರೀ ಗಾರ್ಡ್‌ಗಳನ್ನು ನಿರ್ಮಿಸಿದ ಕೀರ್ತಿ ಇವರದು. ನೇಗಿನಾಳ ಅವರ ಈ ನಗರ ಅರಣ್ಯೀಕರಣ ಮಾದರಿಯನ್ನು ಕೇಂದ್ರ ಸರ್ಕಾರದ ಪಂಚವಾರ್ಷಿಕ ಯೋಜನೆಗಳಲ್ಲಿ ಸೇರಿಸಿಕೊಂಡಿತು. ಇಂದು ನಾವು ನೋಡುತ್ತಿರುವ ಕಬ್ಬನ್ ಪಾರ್ಕ್ ರಸ್ತೆ, ಮೆಜೆಸ್ಟಿಕ್ ಪರಿಸರ ಮತ್ತು ಹೊರವರ್ತುಲ ರಸ್ತೆಗಳ ಹಸಿರುಕರಣ ಸಹ ಇವರ ಕೊಡುಗೆಯಾಗಿದೆ.



ಅಪರಾಧಿಗಳಿಗೆ ಶಿಕ್ಷೆಯಾಗಬೇಕು: ಸರ್ಕಾರಕ್ಕೆ ಮಾಜಿ ಗೃಹಸಚಿವ ಆರಗ ಜ್ಞಾನೇಂದ್ರ ಆಗ್ರಹ

ಸಂಕೇತ್ ಕೊಲೆಗಾರರಿಗೆ ಅನುಕಂಪ ಬೇಡ

ಶಿವಮೊಗ್ಗ: ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್‌ನನ್ನು ಕೊಲೆ ಮಾಡಿದವರು ಅಪ್ರಾಪ್ತರೆಂಬ ಕಾರಣಕ್ಕೆ ಅನುಕಂಪ ತೋರಿಸದೆ ಗರಿಷ್ಠ ಪ್ರಮಾಣದ ಶಿಕ್ಷೆಯಾಗುವಂತೆ ನೋಡಿಕೊಳ್ಳುವಂತೆ ಮಾಜಿ ಗೃಹಸಚಿವರೂ ಆಗಿರುವ ಶಾಸಕ ಆರಗ ಜ್ಞಾನೇಂದ್ರ ಆಗ್ರಹಿಸಿದರು.

ನಗರದ ಸೂಳೇಬೈಲಿನಲ್ಲಿ ಸಹಪಾಠಿ ಗಳಿಂದಲೇ ಹತ್ಯೆಯಾದ ಊರುಗಡೂರಿನ ವಿದ್ಯಾರ್ಥಿ ಸಂಕೇತ್ ಮನೆಗೆ ಶನಿವಾರ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ಈ ಪ್ರಕರಣಕ್ಕೆ ಸರ್ಕಾರ ಕೂಡಲೇ ವಿಶೇಷ ಸರ್ಕಾರಿ ಅಭಿಯೋಜಕರನ್ನು ನೇಮಿಸಿ ಕಠಿಣ ಶಿಕ್ಷೆ ಆಗುವಂತೆ ನೋಡಿಕೊಳ್ಳಬೇಕೆಂದ ಅವರು, ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಮುಸ್ಲಿಂ ಸಮುದಾಯದ ಕೆಲವರು ಅತಿರೇಕವಾಗಿ ವರ್ತಿಸುತ್ತಿದ್ದಾರೆ. ಸರ್ಕಾರದ ತುಷ್ಟೀಕರಣ ನೀತಿಯಿಂದ ಅಕ್ರಮ ದಂಧೆಗಳು ಮತ್ತು ಗಾಂಜಾ ಹಾವಳಿ ರಾಜ್ಯಾದ್ಯಂತ ಹೆಚ್ಚಾಗಿದೆ ದೂರಿದರು.

ಅಲ್ಪಸಂಖ್ಯಾತರಿರುವ ಪ್ರದೇಶಗಳಿಗೆ ಹೋಗಲು ಪೊಲೀಸರು ಉದಾಸೀನ ಮಾಡುತ್ತಿದ್ದಾರೆ. ಕೆಲವು ಸಿಬ್ಬಂದಿ ಅಕ್ರಮ ದಂಧೆಕೋರರೊಂದಿಗೆ ಶಾಮೀಲಾಗಿದ್ದಾರೆ. ಅಂತವರನ್ನು ಕೂಡಲೇ ವರ್ಗಾವಣೆ ಮಾಡದಿದ್ದರೆ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ ಎಂದರು.



ಮಕ್ಕಳನ್ನು ಕಳೆದುಕೊಂಡಾಗ ಪಾಲಕರಿಗೆ ಆಗುವ ವೇದನೆ ಏನೆಂಬುದು ನನಗೆ ಗೊತ್ತಿದೆ. ಅದನ್ನು ಸ್ವತಃ ನಾನೇ ಅನುಭವಿಸಿದ್ದೇನೆ. ಎದೆ ಎತ್ತರಕ್ಕೆ ಬೆಳೆದಿದ್ದ ಸಂಕೇತ್‌ನನ್ನು ಪಾಲಕರು ಕಳೆದುಕೊಂಡಿದ್ದಾರೆ. ಆತನ ಭವಿಷ್ಯದ ಬಗ್ಗೆ ಪಾಲಕರು ಕಂಡಿದ್ದ ಕನಸು ಭಗ್ನಗೊಂಡಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಭಾಗದಲ್ಲಿ ಅಕ್ರಮ ಚಟುವಟಿಕೆಗಳು ಹೆಚ್ಚಾಗಿದೆ. ತುಂಗಾನಗರ ಪೊಲೀಸ್ ಠಾಣಾ ವ್ಯಾಪ್ತಿ ದೊಡ್ಡದಾಗಿದೆ. ಹಾಗಾಗಿ ಸೂಳೇಬೈಲು ಅಥವಾ ಊರುಗಡೂರು ವ್ಯಾಪ್ತಿಯಲ್ಲಿ ಮತ್ತೊಂದು ಹೊಸ ಠಾಣೆಯ ಅಗತ್ಯವಿರುವುದರಿಂದ ಸರ್ಕಾರ ಕಾರ್ಯಪ್ರವೃತ್ತವಾಗ ಬೇಕು ಎಂದರು.

ಈ ಸಂದರ್ಭದಲ್ಲಿ ಸ್ಥಳದಲ್ಲೇ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ದೂರವಾಣಿ ಮೂಲಕ ಸಂಪರ್ಕಿಸಿ, ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸುವಂತೆ ಆಗ್ರಹಿಸಿದರು.

ಬಾಲಾಪರಾಧಿಗಳೆಂದು ಪರಿಗಣಿಸದಿರಿ: ಹಾಲಪ್ಪ

ಶಿವಮೊಗ್ಗ : ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ ಸಂಕೇತ್‌ನನ್ನು ಕೊಲೆ ಮಾಡಿದವರನ್ನು ಬಾಲಾಪರಾಧಿಗಳೆಂದು ಪರಿಗಣಿಸದಂತೆ ಮಾಜಿ ಸಚಿವ ಹರತಾಳು ಹಾಲಪ್ಪ ಒತ್ತಾಯಿಸಿದರು.

ಶನಿವಾರ ಸಂಕೇತ್ ಮನೆಗೆ ಭೇಟಿ ನೀಡಿ ಪೋಷಕರಿಗೆ ಸಾಂತ್ವನ ಹೇಳಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಅಪ್ರಾಪ್ತರಿಗೆ ಕೊಲೆ ಮಾಡುವ ಮನಸ್ಥಿತಿ ಬರುತ್ತದೆ ಎಂದರೆ ಅವರು ಬೆಳೆದ ವಾತಾವರಣ ಎಂಥದ್ದು ಎನ್ನುವ ಬಗ್ಗೆಯೂ ತನಿಖೆ ನಡೆಸಬೇಕೆಂದು ಆಗ್ರಹಿಸಿದರು. ಕೊಲೆ ಮಾಡುವ ಮನಸ್ಥಿತಿ ಇರುವವರು ಅಪ್ರಾಪ್ತರಾಗಲು ಸಾಧ್ಯವಿಲ್ಲ, ಕೊಲೆಗಾರರೆಂದೇ ಪರಿಗಣಿಸಬೇಕು. ಈ ಸಂಬಂಧ ನ್ಯಾಯಾಲಯ ಕೂಡ ಸರ್ಕಾರಕ್ಕೆ ನಿರ್ದೇಶನ ನೀಡಬಹುದಾಗಿದೆ. ಅಪರಾಧಿಗಳಿಗೆ ಗರಿಷ್ಠ ಶಿಕ್ಷೆಯಾಗಬೇಕಿದೆ ಎಂದರು.

ಅಡಿಕೆ ತೋಟದಲ್ಲಿ ಪಪ್ಪಾಯ ಕ್ರಾಂತಿ

ಪಪ್ಪಾಯ ನರ್ಸರಿ ಕನಸಿನತ್ತ ಯುವಕ



ಎನ್.ಕಾರ್ತಿಕ್ ಕೌಂಡಿನ್ಯ

ರಿಪ್ಪನ್‌ಪೇಟೆ : ಸಮೀಪದ ಹಾರಂಬಳ್ಳಿ ಗ್ರಾಮದ ಗಾಜಿನಗೋಡು ನಿವಾಸಿ 28 ವರ್ಷದ ಯುವ ರೈತ ಮಂಜುನಾಥ್ ಪಪ್ಪಾಯ ಕೃಷಿಯಲ್ಲಿ ಸಾಧನೆ ಮಾಡಿ ಇತರ ಯುವಕರಿಗೆ ಮಾದರಿಯಾಗಿದ್ದಾರೆ. ಬದುಕಿನ ಸಂಕಷ್ಟಗಳ ನಡುವೆ ಕೃಷಿಯನ್ನೇ ಆಯ್ಕೆ ಮಾಡಿಕೊಂಡು, ಅದನ್ನೇ ಯಶಸ್ವಿನ ದಾರಿಯಾಗಿ ರೂಪಿಸಿಕೊಂಡಿರುವುದು ಅವರ ವಿಶೇಷತೆ.

ತಂದೆಯವರ ಅಕಾಲಿಕ ನಿಧನದ ನಂತರ ತಾಯಿ ಸುಶೀಲಮ್ಮ ಅವರೊಂದಿಗೆ ಕುಟುಂಬದ ಜವಾಬ್ದಾರಿಯನ್ನು ಹೊತ್ತ ಮಂಜುನಾಥ್, ಹಲವಾರು ಬೆಳೆಗಳನ್ನು ಪ್ರಯತ್ನಿಸಿದರೂ ನಿರೀಕ್ಷಿತ ಫಲ ದೊರೆತಿಲ್ಲ. ಆದರೆ ಅದನ್ನೇ ಸವಾಲಾಗಿ ಸ್ವೀಕರಿಸಿ, ಆತ್ಮೀಯರ ಸಲಹೆ ಪಡೆದು ಯಶಸ್ವಿ ರೈತರ ತೋಟಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು. ಆ ಅಧ್ಯಯನವೇ ಅವರಿಗೆ ಪಪ್ಪಾಯ ಕೃಷಿಯ ಕಡೆಗೆ ದಾರಿ ತೋರಿಸಿತು.

ಆರಂಭದಲ್ಲಿ 1.75 ಎಕರೆ ಭೂಮಿಯಲ್ಲಿ ಅಡಿಕೆ ಬೆಳೆ ಜೊತೆಗೆ ಮಿಶ್ರ ಬೆಳೆಯಾಗಿ ಪಪ್ಪಾಯ ಬೆಳೆದ ಅವರು, ಉತ್ತಮ ಫಲಿತಾಂಶ ಕಂಡು ಇಂದು ನಾಲ್ಕು ಎಕರೆ ಪ್ರದೇಶದಲ್ಲಿ ಪಪ್ಪಾಯ ಬೆಳೆದು ಪ್ರತಿ ಎಕರೆಯಿಂದ ಸುಮಾರು 4.5 ಲಕ್ಷ ರೂ. ಆದಾಯ ಗಳಿಸುತ್ತಿದ್ದಾರೆ. ಸರಿಯಾದ ಪೋಷಕಾಂಶ ನಿರ್ವಹಣೆ, ನೀರಾವರಿ ವ್ಯವಸ್ಥೆ, ಸಮಯಕ್ಕೆ ಗೊಬ್ಬರ ಹಾಗೂ ಮಾರುಕಟ್ಟೆ ಅರಿವು ಈ ನಾಲ್ಕು ಅಂಶಗಳುಯಶಸ್ಸಿನ ಮೂಲಮಂತ್ರ ಎನ್ನುತ್ತಾರೆ. ಖರೀದಿದಾರರು ಉಡುಪಿ, ಮಂಗಳೂರು ಕಡೆಯಿಂದ ನೇರ ತೋಟಕ್ಕೆ ಬಂದು ಪಪ್ಪಾಯ ಹಣ್ಣು ತೆಗೆದುಕೊಂಡು ಹೋಗುತ್ತಾರೆ. ಹಾಗಾಗಿ ನಮಗೆ ಇನ್ನಷ್ಟು ಅನುಕೂಲವಾಗಿದೆ ಎನ್ನುತ್ತಾರೆ.

> ಕೃಷಿ ಅಂದರೆ ಲಾಭ-ನಷ್ಟಗಳ ಪಾಠ ಶಾಲೆ. ಕೆಲವು ಬೆಳೆಗಳಲ್ಲಿ ನಷ್ಟ ಕಂಡಿದ್ದರೂ ಅದರಿಂದಲೇ ಅನುಭವ ಕಲಿತೆ. ಸರಿಯಾದ ಮಾರ್ಗದರ್ಶನ ಪಡೆದು ಪಪ್ಪಾಯ ಬೆಳೆ ಕೈಗೊಂಡ ಬಳಿಕ ನನ್ನ ಶ್ರಮಕ್ಕೆ ತಕ್ಕ ಫಲ ಸಿಕ್ಕಿತು. ಇಂದು ನನ್ನ ಕುಟುಂಬ ಆರ್ಥಿಕವಾಗಿ ನೆಲೆ ನಿಂತಿದ್ದರೆ, ಅದಕ್ಕೆ ಪಪ್ಪಾಯ ಕೃಷಿಯೇ ಬೆನ್ನೆಲುಬು.
> ■ ಮಂಜುನಾಥ್ ಗಾಜಿನಗೋಡು.

ಪಪ್ಪಾಯ ಕೃಷಿಯಲ್ಲಿ ಸಾಧನೆ ಮಾಡಿದ ಮಂಜುನಾಥ್ ಈಗ ಗುಣಮಟ್ಟದ ಪಪ್ಪಾಯ ಸಸಿಗಳನ್ನು ಉತ್ಪಾದಿಸುವ ನರ್ಸರಿ ಆರಂಭಿಸುವ ಯೋಜನೆ ಹೊಂದಿದ್ದಾರೆ. ಈಗಾಗಲೇ 6 ಸಾವಿರ ಗಿಡಗಳಿಗೆ ಮುಂಗಡ ಆರ್ಡರ್ ಪಡೆದಿದ್ದಾರೆ. ರೈತರಿಗೆ ಗುಣಮಟ್ಟದ ಸಸಿಗಳನ್ನು ಒದಗಿಸುವ ಉದ್ದೇಶ ಹೊಂದಿದ್ದಾರೆ. ಕೃಷಿಯಿಂದ ಅಷ್ಟೇ ಅಲ್ಲದೆ ಸಸಿ ಮಾರಾಟ ಮಾಡುವ ಮೂಲಕವೂ ಆದಾಯ ಸೃಷ್ಟಿಸುವ ಚಿಂತನೆಯನ್ನು ಮಾಡಿದ್ದಾರೆ. ಇದು ಕೃಷಿ ಸ್ಟಾರ್ಟ್ ಅಪ್ ಎಂದು ಹೇಳಿದರು ತಪ್ಪಾಗಲಾರದು.

ಉದ್ಯೋಗಕ್ಕಾಗಿ ನಗರಗಳತ್ತ ಮುಖ ಮಾಡುವ ಕಾಲಘಟ್ಟದಲ್ಲಿ ಸ್ವಗ್ರಾಮದಲ್ಲೇ ಕೃಷಿಯ ಮೂಲಕ ಗೌರವಯುತ ಜೀವನ ಕಟ್ಟಿಕೊಳ್ಳಬಹುದು ಎಂಬ ವಿಶ್ವಾಸವನ್ನು ಮಂಜುನಾಥ್ ಮೂಡಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮಂಜುನಾಥ್ : 9880348037ನ್ನು ಸಂಪರ್ಕಿಸಬಹುದು.



ಬೆಂಗಳೂರಿನ ಶೇಷಾದ್ರಿ ರಸ್ತೆಯ ಮಹಿಳಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಶನಿವಾರ ಅಲ್ಯುಮ್ನಿ ಸಭೆಯನ್ನು ಆಯೋಜಿಸಲಾಗಿತ್ತು. 1968 ರ ಹಳೆಯ ವಿದ್ಯಾರ್ಥಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು. ಪ್ರಾಂಶುಪಾಲೆ ಸವಿತಾ ಸಿ, ವಿದ್ಯಾರ್ಥಿ ಕಲ್ಯಾಣಾಧಿಕಾರಿ ಶೈಲಜಾ ಡಿ, ಹಳೆ ವಿದ್ಯಾರ್ಥಿಗಳ ಸಂಘದ ಸಂಯೋಜಕಿ ಜ್ಯೋತಿ ಸೇರಿದಂತೆ ಇತರರಿದ್ದರು.



ಇಂಡಿಯಾ ಎಲೆಕ್ಟ್ರಾನಿಕ್ಸ್ ಸೆಮಿಕಂಡಕ್ಟರ್ ಅಸೋಸಿಯೇಷನ್ ವತಿಯಿಂದ ಬೆಂಗಳೂರಿನ ಲೀಲಾ ಭಾರತೀಯ ಸಿಟಿ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಐಇಎಸ್‌ಎ ವಿಷನ್ ಶೃಂಗಸಭೆಗೆ ಜಾಗತಿಕ ಉದ್ಯಮಿದಾರರಿಂದ ಚಾಲನೆ ನೀಡಲಾಯಿತು.

ಬಿಜೆಪಿ ಪ್ರಶಿಕ್ಷಣ ಅಭಿಯಾನ ಉದ್ಘಾಟನೆ | ವಿಪ ಸದಸ್ಯ ಸಿ.ಟಿ.ರವಿ ಅಭಿಮತ

ಅಭ್ಯಾಸ ವರ್ಗ ಬಹಳ ಮುಖ್ಯ

ಚಿಕ್ಕಮಗಳೂರು: ರಾಜಕೀಯ ಪಕ್ಷದ ಕಾರ್ಯಕರ್ತರಿಗೆ ಅಭ್ಯಾಸ ವರ್ಗ ಬಹಳ ಮುಖ್ಯವಾದದ್ದು ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅಭಿಪ್ರಾಯಿಸಿದರು.

ಶನಿವಾರ ನಗರದ ಬಿಜೆಪಿ ಕಚೇರಿ ಪಾಂಚಜನ್ಯದಲ್ಲಿ ಪಂಡಿತ್ ದೀನ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಅಭಿಯಾನ 2026ರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ರಾಜಕೀಯ ಪಕ್ಷದ ಕಾರ್ಯಕರ್ತರು ಒಬ್ಬೊಬ್ಬರು ಒಂದೊಂದು ರೀತಿಯ ಸ್ವಭಾವವನ್ನು ಹೊಂದಿರುತ್ತಾರೆ. ಸಾಮೂಹಿಕವಾಗಿ ತಮ್ಮ ಸ್ವಭಾವ ಹೇಗಿರಬೇಕೆಂದು ತಿಳಿಸಿಕೊಡುವುದೇ ಪ್ರಶಿಕ್ಷಣ ಅಭಿಯಾನದ ಉದ್ದೇಶವಾಗಿದೆ ಎಂದರು.

ಮೊದಲು ನಾವು ಬದಲಾಗಬೇಕು: ಸಮಾಜದಲ್ಲಿ ಪರಿವರ್ತನೆ ತರಬೇಕಾದರೆ, ಮೊದಲು ನಮ್ಮಲ್ಲಿನ ಅಭ್ಯಾಸಗಳನ್ನು ಬದಲಾಯಿಸಿಕೊಳ್ಳಬೇಕು. ನಮ್ಮಲ್ಲಿರುವ ಕೆಲವೊಂದು ಅಭ್ಯಾಸಗಳು ಮತ್ತು ಹವ್ಯಾಸಗಳು ಸಂಘಟನೆಗೆ ಅಡ್ಡಿಯಾಗಬಾರದು, ಏಕಾಂಗಿಯಾಗಿ ಯಶಸ್ಸು ಸಾಧಿಸಲು ಸಾಧ್ಯವಿಲ್ಲ, ಎಲ್ಲರೂ ಒಗ್ಗಟ್ಟಿನಿಂದ ಕೈ ಜೋಡಿಸಿದಾಗ ನಮ್ಮ ಉದ್ದೇಶ, ಪಕ್ಷದ ಗುರಿ, ತತ್ವಾದರ್ಶಗಳನ್ನು ಪಾಲಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಭಾರತೀಯ ಜನತಾ ಪಾರ್ಟಿ ದೇಶ ಮೊದಲು ಎಂಬ ತತ್ವದಡಿಯಲ್ಲಿ ಕೆಲಸ ಮಾಡುತ್ತಿದೆ. ಮೊದಲು ನಾವು ಪರಿವರ್ತನೆಯಾಗದೆ ಸಮಾಜ ಪರಿವರ್ತನೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಅವರು, ವ್ಯಕ್ತಿ ತನ್ನಲ್ಲಿರುವ ಸ್ವಭಾವ ಮತ್ತು ಹವ್ಯಾಸಗಳನ್ನು ಬದಲಾಯಿಸಿಕೊಂಡು ಸಮಾಜದಲ್ಲಿ ಪರಿವರ್ತನೆ ತರಬೇಕು ಎಂದು ತಿಳಿಸಿದರು.



ಮಂಡಲ ಮಟ್ಟದಲ್ಲಿ ಮೂರರಿಂದ ನಾಲ್ಕು ಅಭ್ಯಾಸ ವರ್ಗವನ್ನು ಆಯೋಜನೆ ಮಾಡಲಾಗುತ್ತದೆ. ಇದರ ಉದ್ದೇಶ ಸದಸ್ಯರಲ್ಲಿ ಪರಸ್ಪರ ಸಂಬಂಧಗಳು ಗಟ್ಟಿಯಾಗಬೇಕು. ಸದಸ್ಯತ್ವ ಪಡೆದ ನಂತರ ಭಾವನಾತ್ಮಕವಾಗಿ ಪಕ್ಷದಲ್ಲಿ ತೊಡಗಿಸಿಕೊಳ್ಳಬೇಕು. ನಮ್ಮನ್ನು ನಾವು ಸುಧಾರಿಸಿಕೊಂಡು ಬೆಳೆಯುವುದನ್ನು ಪ್ರಶಿಕ್ಷಣ ಅಭಿಯಾನ ಹೇಳಿಕೊಡುತ್ತದೆ ಎಂದು ಅಭಿಪ್ರಾಯಿಸಿದರು.

ಬೇರೆ ಪಕ್ಷದಂತಲ್ಲ: ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಆರ್. ದೇವರಾಜ್ ಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಮಾ.7 ರಿಂದ ಏ.14ರ ವರೆಗೆ ಪ್ರಶಿಕ್ಷಣ ಅಭಿಯಾನ ನಡೆಯಲಿದೆ. ಬೇರೆ ಪಕ್ಷಕ್ಕೂ ಬಿಜೆಪಿ ಪಕ್ಷಕ್ಕೂ ಸಾಕಷ್ಟು ವ್ಯತ್ಯಾಸವಿದ್ದು, ಜಿಲ್ಲೆಯಲ್ಲಿ ಅಭ್ಯಾಸ ವರ್ಗಗಳ ನೇತೃತ್ವ ವಹಿಸಿಕೊಂಡವರು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು. ಪಕ್ಷಕ್ಕೆ ತಳಮಟ್ಟದಿಂದ ಶಕ್ತಿ ತುಂಬಬೇಕು. ಮುಂಬರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಉತ್ಸುಕರಾಗಿ ಕಾರ್ಯನಿರ್ವಹಿಸಬೇಕು ಎಂದು ಹೇಳಿದರು.

ಪ್ರಶಿಕ್ಷಣ ಅಭಿಯಾನದ ರಾಜ್ಯ ಸಹ ಸಂಚಾಲಕ ಹಾಗೂ ಶಿವಮೊಗ್ಗ ವಿಭಾಗದ ಸಂಚಾಲಕ ವಿಕಾಸ್ ಪುತ್ತೂರು, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಎಚ್.ಸಿ. ಕಲ್ಮುರುಡಪ್ಪ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರವೀಂದ್ರ ಬೆಳವಾಡಿ, ಪುಣ್ಯಪಾಲ್ ಸೀತಾರಾಮ ಭರಣ್ಯ ಸೇರಿದಂತೆ ಮಂಡಲದ ಅಧ್ಯಕ್ಷರು ಇದ್ದರು. ಭೋಜರಾಜ್ ಸ್ವಾಗತಿಸಿದರು.

ಗೌರವಾನ್ವಿತ [illegible] ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ [illegible]
ಅಸಲು ದಾವೆ ಸಂಖ್ಯೆ:42/2022
ವಾದಿಗಳು : ಶ್ರೀ [illegible] -ವಿರುದ್ಧ-
ಪ್ರತಿವಾದಿಗಳು : ಶ್ರೀಮತಿ ಗೌರಮ್ಮ ಮತ್ತು ಇನ್ನಿತರರು
ಪ್ರತಿವಾದಿಗಳಿಗೆ ನೋಟೀಸು
[illegible]

IN THE COURT OF THE ADDITIONAL CIVIL JUDGE AT KUNIGAL
O.S. No: 290/2020
Petitioner : Chinnaiahshetty and others
-V/s-
Respondent : H C Pani and and others
Notice to Proposed Defendants No.32 and 33:

32. Smt.Gowri.S S/o Anand.C, aged about 35 years, **33. Sri.K G Krishna** S/o Late Gooligowda, aged about 55 years, Both are R/o Hosapete Village, Huliyurdurga Hobli, Kunigal Taluk.

Whereas the plaintiff have filed the above suit against the defendants for relief of Partition and such other reliefs, Hence the above named defendant is interested, in the above case are come and participate in the above proceedings. Hence this paper publication.

SUIT SCHEDULE PROPERTIES
"A" SCHEDULE

1) Land bearing Sy.No.323, measuring 33[1/2] guntas, out of which 20 guntas, situated at Hasige Hobli village, Huliyurdurga Hobli, Kunigal Taluk and bounded on the: EAST BY :- Kere Ari, WEST BY:- Land of Chikkannashetty, there after Anjaneyaswamy Inam Land, NORTH BY:- Land in Sy.No.324, SOUTH BY:- Land of Jayarama, **2)** Land bearing old Sy.No.357/2, New Sy.No.357/3, measuring 15[1/2] guntas, situated at Hasige Hobli village, Huliyurdurga Hobli, Kunigal Taluk and bounded on the: EAST BY :- Neeraganti, WEST BY :- Kaluve, NORTH BY:- Land of H.C. Narayanashetty, SOUTH BY:- Land in Sy.No.356/2,

"B" SCHEDULE

1) Land bearing Sy.No.323, measuring 33 1/2 guntas situated at Hasige Hobli village, Huliyurdurga Hobli, Kunigal Taluk and bounded on the:EAST BY - Kere Ari, WEST BY:- Anajaneyaswamy Inam Land, NORTH BY:- Land in Sy.NO.324, SOUTH BY:- Land of Jayaramashetty, **2)** Land bearing Sy.No.324, measuring 01 acre 04 guntas, situated at Hasige Hobli village, Huliyurdurga Hobli, Kunigal Taluk and bounded on the:EAST BY :- Kere Ari, WEST BY :- Govt. Karab, NORTH BY:- Land in Sy.No.325, SOUTH BY:- Land in Sy.No.323, **3)** Land bearing old Sy.No.356, New Sy.No.365/1, measuring 18 guntas, situated at Hasige Hobli village, Huliyurdurga Hobli, Kunigal Taluk and bounded on the: EAST BY :- Land of Kempegowda, WEST BY:- Govt. Kaluve, NORTH BY:- Land in Sy.No.356/2, SOUTH BY:- Govt. Kaluve, **4)** Land bearing old Sy.No.356, New Sy.No.365/2, measuring 14 guntas, situated at Hasige Hobli village, Huliyurdurga Hobli, Kunigal Taluk and bounded on the: EAST BY - Land of Gangamma, WEST BY :- Kaluve, NORTH BY:- Land in Sy.No.357/2, SOUTH BY:- Land in Sy.No.356/1, **5)** Land bearing old Sy.No.357/2, measuring 15[1/2] guntas, Sy.No.357/3 measuring 15[1/2] guntas, totally measuring 31 guntas, situated at Hasige Hobli village, Huliyurdurga Hobli, Kunigal Taluk and bounded on the: EAST BY-Neeraganti, WEST BY:- Kaluve, NORTH BY:- Land in Sy.No.357/1, SOUTH BY:- Land in Sy.No.356/2.

Take this suit summons that you are hereby called upon to appear before the Additional civil judge at Kunigal, Tumkur Dist. on 15-04-2026 at 11.00 a.m. Therefore you are hereby informed to appear on the said date. Failing, which the case shall be heard and determined in your absence. Respect to Schedule

Given, under my hand and the seal of the court on this day of 12.02.2026 at Kunigal.

By order of the Court.
Chief Ministerial Officer, Court of Prl. Civil Judge & JMFC. Kunigal
Advocate for plaintiff
Sri.Chandregowda BAL.,LLB.,
Sri:B S Harsha BA.,LLB.,Advocates, Kunigal.

IN THE COURT OF THE PRINCIPAL CIVIL JUDGE AND JMFC AT SIDLAGHATTA
Crl. Misc. No: 106/2026.

BETWEEN : 1. Smt. Shivamma W/o Late Anjinappa, Aged about 45 years, **2. Sri. Ambarish** S/o Late Anjinappa. Aged about 22 years, **3. Sri. Anand** S/o Late Anjinappa Aged about 19 years, All R/a Dabaraganahalli Village, Kasaba Hobli, Sidlaghatta Taluk. **| PETITIONERS**

AND
V/S

The Tahasilder Sidlaghatta, Sidlaghatta Taluk. | RESPONDENT

DRAFT PAPER PUBLICATION

That the Petitioners herein filed the above petition against the respondent to obtain the death certificate of the Husband of Petitioner No.1, father of Petitioner No.2 and 3 by namely **Sri. Anjinappa** S/o Late Govindappa demised **on : 21.10.2009** at Dabaraganahalli Village, Kasaba Hobli, Sidlaghatta Taluk, Chikkaballapur District. This Hon'ble Court issued notice/Summons to respondent. If any other persons have interest or concerned to this person, So, you are hereby directed to present before the Hon'ble Court **on : 02.04.2026** at 11 a.m. either in persons or through pleader and file defense if require or else considering your absence failing which the matter will be heard ex-parte. Given under my hand on this 28th Feb 2026.

By Order of the Court
Sheristadar,
Civil Judge & JMFC Sidlaghatta.
Advocate for Petitioners : **Sri. A. Narayanaswamy,** B.Com., LL.B. Advocate Sidlaghatta Sidlaghatta Date : 21.02.2026

IN THE COURT OF THE ADDL CIVIL JUDGE AND J.M.F.C. AT PAVAGADA
C.Mis No.1121/2025

Petitioners: 1. Dakenaik s/o late Baddenaik Aged about 58 years **2. Lalibai** w/o late BaddenaikAged about 75 years **3. Thippamma** D/o late BaddenaikAged about 62 years **4. Rameshnaik** s/o late KrishnanaikAged about 38 years **5. Murthynaik** s/o late KrishnanaikAged about 35 years **6. Ravinaik** s/o late KrishnanaikAged about 33 years **7. K.B.Ramanaik** s/o late Baddenaik Aged about 55 years. **8. Sekenaik** s/o late BaddenaikAged about 53 years. All are Rio K.Sevalalpura village Nagalamadikehobli, pavagada taluk V/S

Respondent: The Deputy Tahasildar cum Births and deaths Registrar Nagalamadikehobli, Pavagadataluk

PAPER PUBLICATION

Whereas the petitioners have filed the above petition seeking issuance of death certificate of the 1stpetitioner father by name **Baddenaik s/o sekenaik** was died on **23-01-1998** in the house of the petitioners at K.Sevalapura village, NagalamadikeHobli, pavagadataluk. Now the matter is set down for issue notice/summons to all are any interested persons or legal heirs who ever got any objection over the the said death certificate may appear in this case either as respondent/ petitioner and may prosecute the same on the date of hearing ie 13/4/2026

2. You are hereby called upon to appear before this Hon'ble court at 11-00 A.M on the said date of hearing either in person or through your advocate. If you fail to appear this court the matter will be heard and decidedexpert given under my hand and seal of the court this day of 28/2/2026

By Order
CMO, Principal Civil Judge & JMFC Court Pavagada
Advocate for Petitioner:
H.A.PRABHAKARAREDDY, Advocate Pavagada

ಗೌರವಾನ್ವಿತ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, [illegible]
ಅಸಲು ದಾವಾ ಸಂಖ್ಯೆ.: 61/2025.
[illegible]
ನ್ಯಾಯಾಲಯದ ಆದೇಶದ ಮೇರೆಗೆ
[illegible]

IN THE COURT OF THE IV ADDL. DISTRICT AND SESSIONS JUDGE, AT: CHANNARAYAPATNA
P & SC NO.6/2026

BETWEEN: Sri Rajesh.K., S/o Krishnamurthy & Smt. Yashodamma, Aged about 47 years, R/at Gunnayakanahalli Village, Dudda Hobli, Shivahalli Post, Mandya Taluk, Mandya District-571401. **....PETITIONER.**
AND: NIL **.....RESPONDENT.**

PUBLIC NOTICE BY WAY OF PAPER PUBLICATION:

Whereas, the Petitioner Rajesh.K., S/o Krishnamurthy & Smt. Yashodamma, Aged about 47 years, Residing at Gunnayakanahalli Village, Dudda Hobli, Shivahalli Post, Mandya Taluk, Mandya District-571401, has filed the above Petition before this Hon'ble Court seeking an Order for the grant of probate in respect of the last WILL dated 21- 05-2018 executed by the testator Sri Javarachari S/o late Dasachari in favour of the Petitioner herein in respect of the properties bearing Survey No.95/2A, measuring 0-15 guntas, Sy.No.93/1, measuring 0.24.08 Guntas and Sy.No.93/10, measuring 0.04 Guntas, of Kataghalli Village, Nuggehalli Hobli, Channarayapatna Taluk, Hassan District, which are mentioned in the Schedule hereunder.

If anybody have got any objections in granting probate in the name of the Petitioner Sri Rajesh. in respect of the properties mentioned in the registered WILL dated 21-05-2018, they may do by fing their objections by appearing in person or through their Counser in the above Petition before this Hon'ble Court on 7th Day of April 2026 Failing which at 11-00 AM, to answer the above Pelion, the Hon'ble Court will proceed further in the matter and dispose of the same in accordance with law.

SCHEDULE PROPERTIES:

Item No.1: All that piece and parcel of the Agricultural land bearing Sy.No.95/2A, measuring 0-15 guntas, situated at Kataghalli Village, Nuggehalli Hobli, Channarayapatna Taluk, Hassan District, situated within the boundary stones.

Item No.2: All that piece and parcel of the Agricultural land bearing Sy.No.93/1, measuring 0.24.08 guntas, situated Kataghalli Village, Nuggehalli Hobli, Channarayapatna Taluk, Hassan District, situated within the boundary stones.

Item No.3: All that piece and parcel of the Agricultural land bearing Sy.No.93/10, measuring 0-04 guntas, situated Kataghalli Village, Nuggehalli Hobli, Channarayapatna Taluk, Hassan District, situated within the boundary stones.

Given under my hand and seal of the Court on the 28 day of February 2026, at Hassan, Channarayapatna.

BY ORDER OF THE COURT
CHIEF ADMINISTRATIVE OFFICER, ADDL DISTRICT & SESSIONS JUDGEL 4th A CHANNARAYAPATNA
ADDRESS OF PETITIONER'S COUNSEL:
V.RAJAIAH, Advocate, No.25, 1st Floor, Praveen Building, 5th Main Road, Gandhinagar, Bengaluru-560009

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ [illegible]
ಸಿ.ಮಿಸ್. ನಂ: 189/2025
[illegible]
ಕೊರಟಗೆರೆ-[illegible]-571438.

IN THE COURT OF THE ADDL CIVIL JUDGE AND J.M.F.C. AT PAVAGADA
C.Mis No.1122/2025

Petitioners: T.Gangadhara s/o Late Thimmappa aged about 55 yours **2 Shivamma** D/o T Gangarhara Aged about 28 years **3. Manjanatha** s/o T.Gangadhars Aged about 24 years **4.Thippeswany** s/o TGangadharaAged about 22 years All ans R/o Marammanahalli village Y.N Hosakotehobli, pavagada taluk

V/S

Respondent: The Deputy Tahasildar cum Births and deaths Registrar Nagalamadike hobli, Pavagada taluk

PAPER PUBLICATION

Whereas the petitiomer has filed the above petition seeking issuance of death certificate of the 1st petitioner mother by name **Yallakka w/o Late Thimmappa** was died on **05-08-2021** in the house of the petitioners at Marammanahalli village, Y.N.Hotakate Hobli, pavagada taluk. Now the matter is set down for issue notice/ summons to all are any interested persons or legal heirs who ever got any objection over the above said death certificate may appear in this case either as respondent / petitioner and may prosecute the same on the date of hearing i.e.28/03/2026.

2. You are hereby called upon to appear before this Hon'ble court at 11-00 AM on the said date of hearing either in person or through your advocate. If you fail to appear this court the matter will be heard and decidedexparty given under my hand and seal of the court this day of 28/02/2026

By Order
CMO, Principal Civil Judge & JMFC Court Pavagada
Advocate for Petitioner:
H.A.PRABHAKARAREDDY, Advocate Pavagada

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಶ್ರೀ [illegible]
ಸಿ.ಮಿಸ್. ನಂ: 188/2025
[illegible]

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಗುಬ್ಬಿ[illegible]
ಮೂ.ದಾ.ಸಂಖ್ಯೆ: 402/2025
[illegible]
ನ್ಯಾಯಾಲಯದ ಆದೇಶದ ಮೇರೆಗೆ
[illegible]

ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಚನ್ನಗಿರಿ
ಎಂ.ಎ.ನಂ : 07/2025

ಅಪೀಲುದಾರರು : ಮೊಹಮ್ಮದ್ ಜಾಹೂರ್ ಅಹ್ಮದ್ ಮತ್ತು ಇತರರು.
ವಿರುದ್ಧ
ಎದುರುದಾರರು : ಶ್ರೀಮತಿ ಜಯ ಮತ್ತು ಇತರರು..

4ನೇ ಎದುರುದಾರರ ವಿಳಾಸ : ವೈ.ವಿ.ಜಯಂತಿ ತಂದೆ ವೈ.ವಿ.ವೆಂಕಟಸುಬ್ಬಯ್ಯ, ವಯಸ್ಸು ಸುಮಾರು 65 ವರ್ಷ, **5ನೇ ಎದುರುದಾರರ ವಿಳಾಸ :** ವೈ.ವಿ.ಭಾರತಿ ತಂದೆ ವೈ.ವಿ.ವೆಂಕಟಸುಬ್ಬಯ್ಯ, ವಯಸ್ಸು ಸುಮಾರು 60 ವರ್ಷ, 4 ಮತ್ತು 5ರವರ ವಾಸ: ನಂ.10, 1ನೇ ಕ್ರಾಸ್, 4ನೇ ಬ್ಲಾಕ್, 3ನೇ ಹಂತ, ಸತ್ಯನಾರಾಯಣ ಬಡಾವಣೆ, ಬಸವೇಶ್ವರ ನಗರ, ಬೆಂಗಳೂರು-560079. **6ನೇ ಎದುರುದಾರರ ವಿಳಾಸ :** ವೈ.ಎಸ್.ವಿ ದತ್ತ ತಂದೆ ವೈ.ವಿ. ಸುಬ್ರಹ್ಮಣ್ಯ, ವಯಸ್ಕರು, ವಾಸ: ಯುಗಟಿ ಗ್ರಾಮ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ಪ್ರಕರಣವನ್ನು ಅಪೀಲುದಾರರು ನಿಮ್ಮ ಮತ್ತು ಇತರೆ ಎದುರುದಾರರು ವಿರುದ್ಧ ಈ ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಪ್ರಕರಣವನ್ನು ಸಲ್ಲಿಸಿದ್ದು, ಪ್ರಸ್ತುತ ಈ ಪ್ರಕರಣದಲ್ಲಿ 4 ರಿಂದ 6ನೇ ಎದುರುದಾರರಾದ ತಾವು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಲು ಮೇಲ್ಕಂಡ ಘನ ನ್ಯಾಯಾಲಯಕ್ಕೆ **ದಿನಾಂಕ:02-04-2026 ರಂದು ಬೆಳಗ್ಗೆ 11 ಗಂಟೆಗೆ** ಖುದ್ದಾಗಿ ಆಗಲೀ ಅಥವಾ ವಕೀಲರ ಮೂಲಕವಾಗಲೀ ಹಾಜರಾಗಿ ನಿಮ್ಮ ತಕರಾರನ್ನು ಸಲ್ಲಿಸಲು ತಿಳಿಸಿದೆ. ಒಂದು ವೇಳೆ ನೀವು ಮೇಲೆ ತಿಳಿಸಿದ ಸಮಯ ಮತ್ತು ದಿನಾಂಕದಂದು ಹಾಜರಾಗಲು ತಪ್ಪಿದಲ್ಲಿ ನಿಮ್ಮನ್ನು ಏಕಪಕ್ಷೀಯ ಎಂದು ಪರಿಗಣಿಸಿ ಸದರಿ ದಾವೆಯನ್ನು ತೀರ್ಮಾನ ಮಾಡಲಾಗುವುದು ಎಂದು ತಿಳಿಯುವುದು. ನ್ಯಾಯಾಲಯದ ಆದೇಶ ಮತ್ತು ಮೊಹರಿನೊಂದಿಗೆ ದಿನಾಂಕ:18-02-2026 ರಂದು ನೀಡಲಾಗಿದೆ.

ಅಪೀಲುದಾರರ ಪರ ವಕೀಲರು
ಎಂ.ತಿಪ್ಪೇಸ್ವಾಮಿ
ವಕೀಲರು, ಚನ್ನಗಿರಿ

ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/- ಶಿರಸ್ತೇದಾರರು
ಹಿರಿಯ ಸಿವಿಲ್ ನ್ಯಾಯಾಧೀಶರು
ನ್ಯಾಯಾಲಯ, ಚನ್ನಗಿರಿ

ಇಸ್ಲಾಮಿಕ್ ಆಡಳಿತವನ್ನೇ ಗುರಿಯಾಗಿಸಿ ಅಮೆರಿಕ-ಇಸ್ರೇಲ್ ಜಂಟಿ ದಾಳಿ | ಇಸ್ಲಾಮಿಕ್ ರಾಷ್ಟ್ರಗಳ ಮೇಲೆಯೇ ಇರಾನ್ ದಾಳಿ
ಇಂಡಿಗೋ, ಏರ್ ಇಂಡಿಯಾ ಮಧ್ಯಪ್ರಾಚ್ಯ ಹಾರಾಟ ರದ್ದು | ಭಾರತೀಯರಿಗೆ ಕೇಂದ್ರದ ಸುರಕ್ಷತಾ ಸಲಹೆ | ದಾಳಿ ಖಂಡಿಸಿದ ರಷ್ಯಾ

ಅಮೆರಿಕ ಸೇನಾನೆಲೆಗಳೇ ಟಾರ್ಗೆಟ್

• **ದೋಹಾ:** ಇಸ್ರೇಲ್ ಮತ್ತು ಅಮೆರಿಕ ಶನಿವಾರ ಇರಾನ್ ಮೇಲೆ ಜಂಟಿ ವಾಯು ದಾಳಿ ನಡೆಸಿದ ಬೆನ್ನಲ್ಲೇ ಇರಾನ್ ದುಬೈ, ಅಬು ಧಾಬಿ, ಕತಾರ್ ಸೇರಿದಂತೆ ಅಮೆರಿಕದ ಸೇನಾ ನೆಲೆಗಳು, ರಾಯಭಾರ ಕಚೇರಿಗಳು ಮತ್ತು ಇಸ್ರೇಲ್ ಮೇಲೆ ಪ್ರತಿದಾಳಿ ನಡೆಸಿದೆ.

ಇರಾನ್ ಪ್ರತಿದಾಳಿ ನಡೆಸಿದ ಹಿನ್ನೆಲೆ ಮಧ್ಯಪ್ರಾಚ್ಯದಲ್ಲಿರುವ ತನ್ನ ಮಿಲಿಟರಿ ನೆಲೆಗಳಲ್ಲಿ ಅಮೆರಿಕ ಕಟ್ಟೆಚ್ಚರದಲ್ಲಿ ಹೆಚ್ಚಿಸಿದೆ. ಟೆಹ್ರಾನ್ ಪ್ರತೀಕಾರ ನಡೆಸಿದ್ದು, ಅಮೆರಿಕದ ನಿರ್ದಿಷ್ಟ ಸೇನಾನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸುವ ಸಾಧ್ಯತೆಯಿದೆ. ಈ ಹಿನ್ನೆಲೆಯಲ್ಲಿ ಅಮೆರಿಕದ ರಕ್ಷಣಾ ಇಲಾಖೆ (ಡಿಒಡಿ) ವ್ಯೂಹಾತ್ಮಕ ಉಪಸ್ಥಿತಿ ಜಾಗತಿಕ ಗಮನ ಸೆಳೆದಿದೆ.

ಶಾಶ್ವತ ನೆಲೆಗಳು ಮತ್ತು ವ್ಯಾಪ್ತಿ: ಜುಲೈ 2024ರ ಕಾಂಗ್ರೆಷನಲ್ ರಿಸರ್ಚ್ ಸರ್ವೀಸ್ (ಸಿಆರ್‌ಎಸ್) ವರದಿಯ ಪ್ರಕಾರ, ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಸೆಂಟ್ರಲ್ ಕಮಾಂಡ್ (ಸೆಂಟ್‌ಕಾಮ್) ಅನ್ವಯದಲ್ಲಿ ಕನಿಷ್ಠ 8 ಶಾಶ್ವತ ನೆಲೆಗಳು ಮತ್ತು 11 ಹೆಚ್ಚುವರಿ ಮಿಲಿಟರಿ ತಾಣಗಳನ್ನು ನಿರ್ವಹಿಸಲಾಗುತ್ತಿದೆ.

ಪ್ರಮುಖ ಕೇಂದ್ರಗಳು: ಕತಾರ್‌ನಲ್ಲಿರುವ 24 ಹೆಕ್ಟೇರ್ ವಿಸ್ತೀರ್ಣದ ಅಲ್ ಉದ್ದೈದ್ ವಾಯು ನೆಲೆಯನ್ನು ಸುಮಾರು 10,000 ಸಿಬ್ಬಂದಿ ಬಳಸುತ್ತಿದ್ದಾರೆ. ಇಲ್ಲಿ ಕಣ್ಗಾವಲು ವಿಮಾನಗಳು, ಕ್ಷಿಪಣಿ ರಕ್ಷಣಾ ವ್ಯವಸ್ಥೆ ಮತ್ತು ಇಂಧನ ಟ್ಯಾಂಕರ್‌ಗಳನ್ನು ನಿಯೋಜಿಸಲಾಗಿದೆ.

ಕತಾರ್‌ನಲ್ಲಿರುವ ಅಲ್ ಉದ್ದೈದ್ ವಾಯುನೆಲೆಯಿಂದ ಎಲ್ಲಾ ಸೇನಾ ಕಾರ್ಯಾಚರಣೆಗಳಿಗೆ ಅಮೆರಿಕ ನಿರ್ದೇಶನ ನೀಡುತ್ತದೆ. ಇದು ಮಧ್ಯಪ್ರಾಚ್ಯದಲ್ಲಿ ಅಮೆರಿಕ ಹೊಂದಿರುವ ಅತಿದೊಡ್ಡ ವಾಯುನೆಲೆ ಎನಿಸಿಕೊಂಡಿದೆ.

ಮುಂಚೂಣಿ ನೆಲೆಗಳು

ಇರಾಕ್ ಮೇಲಿನ ಆಕ್ರಮಣ 2011ರಲ್ಲಿ ಅಧಿಕೃತವಾಗಿ ಕೊನೆಗೊಂಡಿದ್ದರೂ, ಬಂಡಾಯ ನಿಗ್ರಹಕ್ಕಾಗಿ ಅಲ್-ಅಸಾದ್ ಮತ್ತು ಎರ್ಬಿಲ್‌ನಂತಹ ನೆಲೆಗಳಲ್ಲಿ ಸುಮಾರು 2,500 ಸೈನಿಕರನ್ನು ನಿಯೋಜಿಸಲಾಗಿದೆ. ಇದಲ್ಲದೆ, ಸೌದಿ ಅರೇಬಿಯಾದ ಪ್ರಿನ್ಸ್ ಸುಲ್ತಾನ್ ವಾಯು ನೆಲೆಯಲ್ಲಿ 2,300ಕ್ಕೂ ಹೆಚ್ಚು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ ಪ್ಯಾಟ್ರಿಯಟ್ ಮತ್ತು ಥಾಡ್ ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳನ್ನು ನಿರ್ವಹಿಸಲಾಗುತ್ತಿದೆ. ಜೋರ್ಡಾನ್, ಸಿರಿಯಾ ಮತ್ತು ಈಜಿಪ್ಟ್‌ನಲ್ಲಿಯೂ ಅಂತರಾಷ್ಟ್ರೀಯ ಶಾಂತಿ ಪಾಲನೆಗಾಗಿ ಸಣ್ಣ ಮಟ್ಟದ ಪಡೆಗಳನ್ನು ಉಳಿಸಿಕೊಳ್ಳಲಾಗಿದೆ.

ಇಂಡಿಗೋ ವಿಮಾನಗಳು ಸ್ಥಗಿತ

ಇರಾನ್ ಮತ್ತು ಮಧ್ಯಪ್ರಾಚ್ಯದ ವಾಯುಪ್ರದೇಶದ ನಿರ್ಬಂಧಗಳನ್ನು ಗಮನಿಸಿ ಇಂಡಿಗೋ ಮಧ್ಯಪ್ರಾಚ್ಯಕ್ಕೆ ಮತ್ತು ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ಅನಿರ್ದಿಷ್ಟಾವಧಿಗೆ ರದ್ದುಪಡಿಸಿದೆ. ದುಬೈ, ಜೆಡ್ಡಾ, ದೋಹಾ, ಅಬುಧಾಬಿ, ದಮ್ಮಾಮ್, ಬಹ್ರೇನ್, ಶಾರ್ಜಾ, ಕುವೈತ್ ಮತ್ತು ರಾಸ್ ಅಲ್ ಖೈಮಾ ಮಾರ್ಗಗಳಲ್ಲಿ ಸೇವೆಗಳು ಸ್ಥಗಿತಗೊಂಡಿವೆ. ಹಾಗೆಯೇ, ಏರ್ ಇಂಡಿಯಾ ಪಶ್ಚಿಮ ಏಷ್ಯಾ ಗಮ್ಯಸ್ಥಾನಗಳಿಗೆ ಎಲ್ಲಾ ವಿಮಾನಗಳನ್ನು ಸ್ಥಗಿತಗೊಳಿಸಿದೆ. ದೆಹಲಿ-ಟೆಲ್ ಅವೀವ್ ವಿಮಾನವನ್ನು ಮುಂಬೈಗೆ ತಿರುಗಿಸಲಾಗಿದೆ.



ಇಸ್ಲಾಮಿಕ್ ಆಡಳಿತದ ಅಂತ್ಯವೇ ನಮ್ಮ ಗುರಿ!

ಇರಾನ್‌ನಲ್ಲಿ ಆಯತುಲ್ಲಾ ಖಮೇನಿ ನೇತೃತ್ವದ ಇಸ್ಲಾಮಿಕ್ ಮೂಲಭೂತವಾದಿ ಸರ್ಕಾರವನ್ನು ಅಧಿಕಾರದಿಂದ ಕೆಳಗಿಳಿಸುವುದೇ ನಮ್ಮ ಗುರಿಯೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟವಾಗಿ ಹೇಳಿದ್ದಾರೆ.

ಕುವೈತ್ ಮತ್ತು ಯುಎಇ

ಕುವೈತ್ ಯುಎಸ್‌ಗೆ ಈ ಭಾಗದ ಪ್ರಮುಖ ಸರಕು ಸಾಗಣೆಗೆ ಪ್ರವೇಶದ್ವಾರವಾಗಿ ಕಾರ್ಯನಿರ್ವಹಿಸುತ್ತದೆ. ಇಲ್ಲಿನ ಕ್ಯಾಂಪ್ ಆರಿಫ್ಜಾನ್ ಮತ್ತು ಆಲಿ ಅಲ್ -ಸೇಲಮ್ ವಾಯು ನೆಲೆಗಳನ್ನು ಜಂಟಿ ಪಡೆಗಳಿಗೆ ಯುದ್ಧ ಸಾಮಗ್ರಿ ತಲುಪಿಸಲು ಬಳಸಲಾಗುತ್ತಿದೆ. ಯುಎಇನಲ್ಲಿ ಅಲ್ ಧಫ್ರಾ ವಾಯುನೆಲೆಯನ್ನು ಸ್ಥಳೀಯ ವಾಯುಪಡೆಯೊಂದಿಗೆ ಹಂಚಿಕೊಳ್ಳಲಾಗಿದ್ದು, ಇಲ್ಲಿ ಎಂಕ್ಯೂ-9 ರೀಪರ್ ಡ್ರೋನ್‌ಗಳನ್ನು ನಿಯೋಜಿಸಲಾಗಿದೆ.

ಬಹ್ರೇನ್

ಬಹ್ರೇನ್‌ನ ನೇವಲ್ ಸಪೋರ್ಟ್ ಆಕ್ಟಿವಿಟಿ ಎಂಬ ವಾಯು ನೆಲೆಯಲ್ಲಿ ಅಮೆರಿಕ ನೌಕಾಪಡೆಯ ಐದನೇ ಫ್ಲೀಟ್ ಅನ್ನು ಸ್ಥಾಪಿಸಲಾಗಿದೆ. ಪರ್ಷಿಯನ್ ಗಲ್ಫ್, ಕೆಂಪು ಸಮುದ್ರ, ಅರಬ್ಬಿ ಸಮುದ್ರ ಮತ್ತು ಹಿಂದೂ ಮಹಾಸಾಗರದ ಕೆಲವು ಭಾಗಗಳನ್ನು ಒಳಗೊಂಡಂತೆ ವಿಶಾಲ ವ್ಯಾಪ್ತಿಯ ಮೇಲೆ ಇದು ಕಣ್ಣಿಡುತ್ತದೆ. ಸಿಆರ್‌ಎಸ್ ವರದಿ ಪ್ರಕಾರ, ಈ ಸಂಬಂಧ 1948ರಿಂದಲೇ ಅಸ್ತಿತ್ವದಲ್ಲಿದೆ. ಆಗ ಈ ನೆಲೆ ಬ್ರಿಟಿಷ್ ರಾಯಲ್ ನೌಕಾಪಡೆಯ ನಿಯಂತ್ರಣದಲ್ಲಿತ್ತು. ವಿಮಾನವಾಹಕ ನೌಕೆಗಳು ಮತ್ತು ಉಭಯಚರ ದಾಳಿ ಹಡಗುಗಳನ್ನು ನಿಲ್ಲಿಸುವ ಸಾಮರ್ಥ್ಯವಿರುವ ಈ ಪ್ರದೇಶದ ಕೆಲವೇ ಸ್ಥಳಗಳಲ್ಲಿ ಈ ಬಂದರು ಕೂಡ ಒಂದಾಗಿದೆ.

ಇಸ್ರೇಲ್ ಅಧ್ಯಕ್ಷ ಹೆರ್ಜೋಗ್ ಸ್ವಾಗತ



ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಅಮೆರಿಕಾ-ಇಸ್ರೇಲ್ ಜಂಟಿ ಕಾರ್ಯಾಚರಣೆಯನ್ನು ಸ್ವಾಗತಿಸಿದ್ದಾರೆ. ಇದು ಮಧ್ಯಪ್ರಾಚ್ಯ ಹಾಗೂ ವಿಶ್ವಕ್ಕೆ ಉತ್ತಮ ಭವಿಷ್ಯ ತರುತ್ತದೆ ಎಂದು ಹೇಳಿದ್ದಾರೆ.

ಅಮೆರಿಕದ ದಾಳಿ ಖಂಡಿಸಿದ ರಷ್ಯಾ

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ನಡೆಸಿದ ಜಂಟಿ ದಾಳಿಯನ್ನು ಅಪ್ರಚೋದಿತ ದಾಳಿ ಮತ್ತು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯೆಂದು ರಷ್ಯಾ ಖಂಡಿಸಿದ್ದು, ತಕ್ಷಣ ದಾಳಿ ನಿಲ್ಲಿಸಬೇಕೆಂದು ಕರೆ ನೀಡಿದೆ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವೊಂದರ ಮೇಲೆ ಈ ರೀತಿ ಪೂರ್ವನಿಯೋಜಿತ ದಾಳಿ ನಡೆಸುವುದು ಆಕ್ರಮಣಕಾರಿ ನಡೆಯೆಂದು ರಷ್ಯಾ ಆರೋಪಿಸಿದೆ. ಶಾಂತಿದೂತನು ಮತ್ತೆ ಕಾರ್ಯನಿರ್ವಹಿಸುತ್ತಿದ್ದಾನೆ. ಅಮೆರಿಕಾ ಕೇವಲ 249 ವರ್ಷ ಹಳೆಯದು. ಪರ್ಷಿಯನ್ ಸಾಮ್ರಾಜ್ಯವು 2500 ವರ್ಷಗಳ ಹಿಂದೆ ಸ್ಥಾಪನೆಯಾಯಿತು. ಇನ್ನೂ 100 ವರ್ಷಗಳ ಬಳಿಕ ಏನಾಗುತ್ತದೆ ನೋಡೋಣ ಎಂದು ರಷ್ಯಾ ಫೆಡರೇಶನ್ ಭದ್ರತಾ ಮಂಡಳಿ ಉಪಾಧ್ಯಕ್ಷ ಮೆಡ್ವೆಡೆವ್ ಎಚ್ಚರಿಕೆ ನೀಡಿದ್ದಾರೆ.




ಅಣು ಒಪ್ಪಂದ ತಿರಸ್ಕರಿಸಿದ್ದೇ ದಾಳಿಗೆ ಕಾರಣ?

ಇರಾನ್ ತನ್ನ ಪರಮಾಣು ಯೋಜನೆಯಲ್ಲಿ ಅಮೆರಿಕ ಜತೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದ ಕೆಲವು ದಿನಗಳ ಬಳಿಕ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಾಳಿ ಆದೇಶ ನೀಡಿದ್ದಾರೆ. ಇರಾನ್ ಮತ್ತದರ ದೀರ್ಘಕಾಲದ ಶತ್ರುಗಳ ನಡುವೆ ಪುನಃ ಸಂಘರ್ಷ ಉದ್ಭವಿಸಿದ್ದು, ಪಾಶ್ಚಿಮಾತ್ಯ ರಾಷ್ಟ್ರಗಳೊಂದಿಗೆ ಟೆಹ್ರಾನ್‌ನ ಅಣು ವಿವಾದಕ್ಕೆ ರಾಜತಾಂತ್ರಿಕ ಪರಿಹಾರ ಸಿಗುವ ಸಾಧ್ಯತೆ ಇನ್ನಷ್ಟು ಕ್ಷೀಣಗೊಳಿಸಿದೆ. ಈ ವಾರ ಅಮೆರಿಕಾ ಮತ್ತು ಇರಾನ್ ನಡುವಿನ ಮೂರನೇ ಸುತ್ತಿನ ಪರೋಕ್ಷ ಮಾತುಕತೆ ಯಾವುದೇ ಮಹತ್ವದ ಮುನ್ನಡೆ ಕಂಡುಬರಲಿಲ್ಲ. ಇದು ಹೊಸ ಯುದ್ಧವನ್ನು ತಪ್ಪಿಸಬಹುದಾದ ಅವಕಾಶವನ್ನು ಕಡಿಮೆಗೊಳಿಸಿದೆ. ಇರಾನ್ ಪಡೆಗಳು ಇಸ್ರೇಲ್ ವಿರುದ್ಧ ಪ್ರತೀಕಾರವಾಗಿ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ಪ್ರಾರಂಭಿಸಿರುವುದಾಗಿ ತಿಳಿಸಿವೆ. ಪ್ರಾದೇಶಿಕ ಪ್ರದೇಶದಲ್ಲಿರುವ ಎಲ್ಲಾ ಅಮೆರಿಕಾ ನೆಲೆಗಳು ಮತ್ತು ಹಿತಾಸಕ್ತಿಗಳು ಇರಾನ್‌ನ ವ್ಯಾಪ್ತಿಯಲ್ಲಿವೆ ಎಂದು ಇರಾನ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಹ್ರೈನ್ ಅಮೆರಿಕದ ಐದನೇ ನೌಕಾಪಡೆಯ ಸೇವಾ ಕೇಂದ್ರದ ಮೇಲೆ ಕ್ಷಿಪಣಿ ದಾಳಿ ನಡೆದಿರುವುದಾಗಿ ತಿಳಿಸಿದೆ. ಸಾಕ್ಷಿದಾರರು ತೆಗೆದ ವಿಡಿಯೋ ದೃಶ್ಯಗಳಲ್ಲಿ, ಸಣ್ಣ ದ್ವೀಪ ರಾಷ್ಟ್ರವಾದ ಬಹ್ರೈನ್ ಕರಾವಳಿಯ ಸಮೀಪದಿಂದ ದಟ್ಟವಾದ ಹೊಗೆ ಏರುತ್ತಿರುವುದು ಮತ್ತು ಸೈರನ್‌ಗಳು ಮೊಳಗಿರುವುದು ಕಂಡುಬಂದಿದೆ. ಪ್ರಮುಖ ತೈಲ ರಾಷ್ಟ್ರ ಹಾಗೂ ಅಮೆರಿಕದ ಮಿತ್ರ ರಾಷ್ಟ್ರ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ರಾಜಧಾನಿ ಅಬು ಧಾಬಿಯ ವಿವಿಧ ಭಾಗಗಳಲ್ಲಿ ಭಾರೀ ಸ್ಫೋಟಗಳ ಶಬ್ದ ಕೇಳಿಬಂದಿರುವುದು ವರದಿಯಾಗಿದೆ.

ಇರಾನ್ ಖಾರ ಪ್ರತಿಕ್ರಿಯೆ

ಟೆಹ್ರಾನ್ ಮೇಲಿನ ದಾಳಿಗೆ ಖಾರವಾಗಿ ಪ್ರತಿಕ್ರಿಯಿಸಿದ ಇರಾನ್, ಇಸ್ರೇಲ್‌ನ ಮೇಲೆ ಕ್ಷಿಪಣಿ ದಾಳಿ ನಡೆಸಿದೆ. ಸಾರ್ವಜನಿಕರು ಹೊರಬಾರದಂತೆ ಇಸ್ರೇಲ್‌ನ ಸಚಿವಾಲಯವು ಮನವಿ ಮಾಡಿಕೊಂಡಿದೆ. ಪ್ರಬಲ ಪ್ರತಿಕ್ರಿಯೆ ನೀಡುವುದಾಗಿ ಇರಾನ್ ರಾಷ್ಟ್ರೀಯ ಭದ್ರತಾ ಆಯೋಗದ ಮುಖ್ಯಸ್ಥ ಇಬ್ರಾಹಿಂ ಅಜೀಜಿ ಎಚ್ಚರಿಕೆ ನೀಡಿದ್ದರು. ಪ್ರತಿದಾಳಿ ಬಳಿಕ ಅಜೀಜಿ, ನಾವು ಎಚ್ಚರಿಕೆ ನೀಡಿದ್ದೆವು. ನೀವು ಯುದ್ಧ ಆರಂಭಿಸಿದ್ದೀರಿ, ಇದನ್ನು ನಿಲ್ಲಿಸುವುದು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಮಧ್ಯಪ್ರಾಚ್ಯದಲ್ಲಿನ ಅಮೆರಿಕ ಸೇನಾ ನೆಲೆಗಳು



ಇರಾನ್‌ನ ದಾಳಿಗೊಳಗಾದ ಅಮೆರಿಕ ವಾಯುನೆಲೆಗಳು

1. ಅಲ್-ಉದ್ದೈದ್ ವಾಯುನೆಲೆ, ಕತಾರ್
2. ಅಲ್-ಸಲೇಮ್ ವಾಯುನೆಲೆ, ಕುವೈತ್
3. ಅಲ್-ಧಫ್ರಾ ವಾಯುನೆಲೆ, ಯುಎಇ
4. ಯು.ಎಸ್ ಫಿಫ್ತ್ ಫ್ಲೀಟ್ ಪ್ರಧಾನ ಕಚೇರಿ, ಬಹ್ರೈನ್

ಯುರೋಪ್‌ನ ಸಂದಿಗ್ಧತೆ

ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ನಡೆಸಿದ ದಾಳಿಗಳಿಗೆ ಹೇಗೆ ಪ್ರತಿಕ್ರಿಯಿಸಬೇಕು? ಮತ್ತು ಮಧ್ಯಪ್ರಾಚ್ಯದಲ್ಲಿರುವ ತಮ್ಮ ನಾಗರಿಕರನ್ನು ಹೇಗೆ ರಕ್ಷಿಸಿಕೊಳ್ಳಬೇಕು ಎಂಬ ವಿಚಾರದಲ್ಲಿ ಐರೋಪ್ಯ ದೇಶಗಳು ಸಂದಿಗ್ಧತೆಗೆ ಸಿಲುಕಿದವು. ಜರ್ಮನಿ ಇರಾನ್ ಪರಿಸ್ಥಿತಿಯನ್ನು ಚರ್ಚಿಸಲು ತುರ್ತು ಸಭೆ ಕರೆದು, ಐರೋಪ್ಯ ಒಕ್ಕೂಟ ಪ್ರದೇಶದಿಂದ ಕೆಲವು ಸಿಬ್ಬಂದಿಯನ್ನು ತೆರವುಗೊಳಿಸುತ್ತಿದೆ. ಇನ್ನೊಂದೆಡೆ, ಈ ದಾಳಿ ನಡೆಸುವ ಕುರಿತಂತೆ ಅಮೆರಿಕ, ಮೈತ್ರಿ ದೇಶಗಳಿಗೆ ಮುಂಚಿತವಾಗಿಯೇ ಎಚ್ಚರಿಕೆ ನೀಡಿತ್ತೇ ಎಂಬುದು ಗೊತ್ತಾಗಿಲ್ಲ. ಅಲ್ಲದೆ, ಜರ್ಮನಿಗೆ ಶನಿವಾರ ಬೆಳಗ್ಗೆಯಷ್ಟೇ ಮಾಹಿತಿ ನೀಡಲಾಗಿದೆ. ಫ್ರಾನ್ಸ್ ಮಾತ್ರ, ಇರಾನ್ ವಿರುದ್ಧ ಯುದ್ಧವಾಗುವುದು ಗೊತ್ತಿತ್ತು, ಆದರೆ, ಶನಿವಾರವೇ ಆಗುತ್ತೆ ಎಂಬುದು ಗೊತ್ತಿರಲಿಲ್ಲ ಎಂದು ಹೇಳಿದೆ. ಈ ಮಧ್ಯೆ, ಐರೋಪ್ಯ ಒಕ್ಕೂಟದ ಉನ್ನತ ರಾಜತಾಂತ್ರಿಕರು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದು, ಇದನ್ನು ಅಪಾಯಕಾರಿ ಎಂದು ಕರೆದಿದ್ದು ಅಲ್ಲದೆ, ಸಂಘರ್ಷವನ್ನು ಮಾತುಕತೆ ಮೂಲಕ ಬಗೆಹರಿಸಿಕೊಳ್ಳಬೇಕು. ಈ ಸಂಬಂಧ ಇಸ್ರೇಲ್ ಮತ್ತು ಅರಬ್ ದೇಶಗಳ ಪ್ರತಿನಿಧಿಗಳ ಜತೆ ಮಾತುಕತೆ ನಡೆಸುತ್ತಿರುವುದಾಗಿ ಹೇಳಿದ್ದಾರೆ. ಅಲ್ಲದೆ ಇರಾನ್ ನಡೆ ಖಂಡಿಸಿರುವ ಅದು, ಅಲ್ಲಿನ ಆಡಳಿತ ಸಾವಿರಾರು ಜನರನ್ನು ಕೊಂದಿದೆ. ಅದರ ಬ್ಯಾಲಿಸ್ಟಿಕ್ ಕ್ಷಿಪಣಿ ಮತ್ತು ಅಣು ಕಾರ್ಯಕ್ರಮಗಳು, ಭಯೋತ್ಪಾದಕ ಗುಂಪುಗಳಿಗೆ ನೀಡುತ್ತಿರುವ ಬೆಂಬಲ, ಜಾಗತಿಕ ಭದ್ರತೆಗೆ ಗಂಭೀರ ಬೆದರಿಕೆ ಉಂಟುಮಾಡುತ್ತವೆ ಎಂದು ವಿದೇಶಾಂಗ ನೀತಿ ಮುಖ್ಯಸ್ಥ ಕಾಜಾ ಕಾಲ್ಲಾಸ್ ಹೇಳಿದ್ದಾರೆ. ಜರ್ಮನ್ ಸರ್ಕಾರವು ಇರಾನ್, ಇಸ್ರೇಲ್ ಮತ್ತು ಇತರೆ ಪ್ರದೇಶದಲ್ಲಿರುವ ಜರ್ಮನ್ ನಾಗರಿಕರು ರಾಯಭಾರ ಕಚೇರಿಗಳಲ್ಲಿ ನೋಂದಾಯಿಸಿಕೊಂಡು ಸ್ಥಳೀಯ ಅಧಿಕಾರಿಗಳ ಸೂಚನೆಗಳನ್ನು ಪಾಲಿಸಬೇಕು ಎಂದು ಮನವಿ ಮಾಡಿದೆ. ಫ್ರಾನ್ಸ್, ಮಧ್ಯಪ್ರಾಚ್ಯದಲ್ಲಿ ಸೈನಿಕ ನೆಲೆಗಳನ್ನು ಹೊಂದಿರುವ ಜರ್ಮನಿ, ತನ್ನ ನಾಗರಿಕರಿಗೆ ಅತ್ಯಂತ ಎಚ್ಚರಿಕೆಯಿಂದ ಇರಲು ಕರೆ ನೀಡಿದೆ.

ಕಿರುಸುದ್ದಿ

ಸಂಸ್ಕೃತ ಭಾಷೆ ಅವಹೇಳನ: ಕ್ಷಮೆಯಾಚಿಸಿದ ಹಾರ್ವರ್ಡ್

• **ವಾಷಿಂಗ್ಟನ್:** ಹಾರ್ವರ್ಡ್ ವಿಶ್ವವಿದ್ಯಾಲಯದ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗ, ತನ್ನ ಸಂಸ್ಕೃತ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಹಾಕಿದ್ದ ಪೋಸ್ಟ್ ಒಂದು ವಿವಾದಕ್ಕೆ ಕಾರಣವಾಗಿದ್ದು, ಇದೀಗ ವಿಶ್ವವಿದ್ಯಾಲಯ ಅಧಿಕೃತವಾಗಿ ಕ್ಷಮೆಯಾಚಿಸಿದೆ. ಈ ಪೋಸ್ಟ್‌ನಲ್ಲಿ ಬಳಸಲಾದ ಚಿತ್ರ, ಹಿಂದೂ ಸಮುದಾಯದ ಭಾವನೆಗಳಿಗೆ ಧಕ್ಕೆ ತಂದಿದೆ ಎಂದು ಉತ್ತರ ಅಮೆರಿಕಾದ ಹಿಂದೂ ಒಕ್ಕೂಟ ಸೇರಿದಂತೆ ಹಲವು ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದ್ದವು. ವಿಶ್ವವಿದ್ಯಾಲಯ ಈ ಬಗ್ಗೆ ಹೇಳಿಕೆ ಬಿಡುಗಡೆ ಮಾಡಿದ್ದು, ನಡೆದ ಘಟನೆಗೆ ನಾವು ವಿಷಾದಿಸುತ್ತೇವೆ ಮತ್ತು ಸಂಸ್ಕೃತ ಭಾಷೆಯ ಸಾಂಸ್ಕೃತಿಕ ಪರಂಪರೆಯನ್ನು ಕಲಿಸಲು ನಾವು ಬದ್ಧರಾಗಿದ್ದೇವೆ ಎಂದು ತಿಳಿಸಿದೆ. ಈ ವಿವಾದಕ್ಕೂ ಲಕ್ಷ್ಮಿ ಮಿತ್ತಲ್ ದಕ್ಷಿಣ ಏಷ್ಯಾ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ, ಇನ್ನು ಮುಂದೆ ಇಂತಹ ತಪ್ಪುಗಳು ನಡೆಯದಂತೆ ಸಾಮಾಜಿಕ ಜಾಲತಾಣದ ನಿರ್ವಹಣಾ ಪ್ರಕ್ರಿಯೆಯನ್ನು ಪರಿಶೀಲಿಸುವುದಾಗಿ ಹಾರ್ವರ್ಡ್ ಹೇಳಿದೆ. ಸಂಘಟನೆಗಳು ಈ ಅಪರೂಪದ ಕ್ಷಮೆಯಾಚನೆಯನ್ನು ಸ್ವಾಗತಿಸಿವೆ.

ಈ ಬಾರಿ ಸೂರ್ಯ ಮತ್ತಷ್ಟು ಪ್ರಖರ: ಐಎಂಡಿ

• **ಹೊಸದಿಲ್ಲಿ:** ಮಾರ್ಚ್‌ನಿಂದ ಮೇ ತಿಂಗಳವರೆಗೆ ದೇಶದ ಹೆಚ್ಚಿನ ಭಾಗಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಪ್ರಮಾಣದಲ್ಲಿ ತಾಪಮಾನದ ಅಲೆಗಳು (ಹೀಟ್ ವೇವ್) ಇರಲಿವೆಯೆಂದು ಭಾರತೀಯ ಹವಾಮಾನ ಇಲಾಖೆ ಶನಿವಾರ ಎಚ್ಚರಿಕೆ ನೀಡಿದೆ. ರಾಜಸ್ಥಾನ, ಗುಜರಾತ್, ಪಂಜಾಬ್ ಮತ್ತು ಮಹಾರಾಷ್ಟ್ರ ಸೇರಿದಂತೆ ದಕ್ಷಿಣ ಮತ್ತು ಪೂರ್ವ ಭಾರತದ ರಾಜ್ಯಗಳಲ್ಲಿ ತಾಪಮಾನ ಏರಿಕೆಯಾಗುವ ನಿರೀಕ್ಷೆಯಿದೆ. ಕರ್ನಾಟಕದ ಉತ್ತರ ಭಾಗಗಳಲ್ಲಿಯೂ ಹೆಚ್ಚಿನ ಶಾಖ ಕಂಡುಬರಲಿದೆ ಎಂದು ಅಂದಾಜಿಸಲಾಗಿದೆ. ಈ ಪರಿಸ್ಥಿತಿ, ಸಾರ್ವಜನಿಕರ ಆರೋಗ್ಯದ ಮೇಲೆ ಮಾತ್ರವಲ್ಲದೆ, ಕುಡಿಯುವ ನೀರಿನ ಲಭ್ಯತೆ ಮತ್ತು ವಿದ್ಯುತ್ ಬೇಡಿಕೆಯ ಮೇಲೂ ಕೆಟ್ಟ ಪರಿಣಾಮ ಬೀರಲಿದೆ ಎಂದು ಇಲಾಖೆ ತಿಳಿಸಿದೆ.

ಪಾಕ್ ಆಪರೇಷನ್‌ನಲ್ಲಿ 331 ಅಫ್ಘನ್ನರ ಸಾವು?

• **ಇಸ್ಲಾಮಾಬಾದ್:** ಗಡಿ ಭಾಗದಲ್ಲಿ ಅಫ್ಘಾನ್ ತಾಲಿಬಾನ್ ಮತ್ತು ಇತರ ಉಗ್ರಗಾಮಿ ಗುಂಪುಗಳ ವಿರುದ್ಧ ಪಾಕಿಸ್ತಾನ ನಡೆಸುತ್ತಿರುವ ಆಪರೇಷನ್ ಘಜಬ್ ಲಿಲ್ ಹಕ್ ಸೇನಾ ಕಾರ್ಯಾಚರಣೆಯಲ್ಲಿ ಇದುವರೆಗೆ 331 ತಾಲಿಬಾನ್ ಸೈನಿಕರು ಹತರಾಗಿದ್ದಾರೆ ಎಂದು ಪಾಕಿಸ್ತಾನ ಶನಿವಾರ ಘೋಷಿಸಿದೆ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ: 21 ಜನ ಸಾವು

• **ವೆಟ್ಲಪಲೇಮ್(ಆಂಧ್ರ):** ಕಾಕಿನಾಡ ಜಿಲ್ಲೆಯ ಪಟಾಕಿ ಕಾರ್ಖಾನೆಯಲ್ಲಿ ಶನಿವಾರ ಮಧ್ಯಾಹ್ನ ಸಂಭವಿಸಿದ ಭೀಕರ ಸ್ಫೋಟದಲ್ಲಿ 21 ಮಂದಿ ಸಾವಿಗೀಡಾಗಿದ್ದು, 8 ಮಂದಿ ಗಂಭೀರ ಗಾಯಗೊಂಡಿದ್ದಾರೆ.

ದುರಂತ ಜಾಗದಲ್ಲಿ ಕಾರ್ಮಿಕರ ಸಹಿತ ಒಟ್ಟು 30 ಮಂದಿ ಇದ್ದರು. ರಾಜ್ಯದಲ್ಲಿ ಬಲು ದೊಡ್ಡ ಸ್ಫೋಟ ಇದಾಗಿದ್ದು, ಸ್ಫೋಟಕ ಮಾದರಿಯ ಪಟಾಕಿಗಳು ಸ್ಫೋಟವಾಗಿವೆ ಎಂದು ಆಂಧ್ರ ಸಚಿವ ಕಂದುಲ ದುರ್ಗೇಶ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಭಯಾನಕ ಸ್ಫೋಟಕ್ಕೆ 21 ಮಂದಿ ಕಾರ್ಮಿಕರು ಆಹುತಿಯಾದ ದುರಂತ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ತಲಾ 2 ಲಕ್ಷ ರೂ. ತುರ್ತು ಪರಿಹಾರ ಘೋಷಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಸಂತಾಪ ವ್ಯಕ್ತಪಡಿಸಿದ್ದಾರೆ.

ಬೆಂಕಿ ಹಬ್ಬಿದ ಬಗ್ಗೆ ತನಿಖೆ: ಭೀಕರ ಸ್ಫೋಟದಿಂದ ಬೆಂಕಿ ಹಬ್ಬಿಕೊಂಡದ್ದು ಹೇಗೆಂದು ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಸಂತ್ರಸ್ತ ಕುಟುಂಬಗಳ ಬೆಂಬಲಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಸಚಿವ ದುರ್ಗೇಶ್ ವಿವರಿಸಿದ್ದಾರೆ.

ಗದ್ದೆಗೆ ಹಾರಿದ ಶವಗಳು: ಸ್ಫೋಟದ ತೀವ್ರತೆ ಅದೆಷ್ಟಿತ್ತೆಂದರೆ ಕಾರ್ಮಿಕರ ಶವಗಳು ಸಮೀಪದ ಭತ್ತದ ಗದ್ದೆಗಳಿಗೆ ಎಸೆಯಲ್ಪಟ್ಟಿದ್ದವು. ಛಿದ್ರವಾಗಿದ್ದ ದೇಹಗಳನ್ನು ರಸಗೊಬ್ಬರ ಚೀಲದ ಶೀಟ್‌ಗಳಿಗೆ ಸ್ಥಳಾಂತರಿಸುತ್ತಿದ್ದ ದೃಶ್ಯ ಘೋರ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ರಾಗಾ ಜೈಲಲ್ಲಿ ಕೂರಲು ತಯಾರಾ?

ಸಿಸೋಡಿಯಾ ರೀತಿ ಸೋನಿಯಾ ಶಿಕ್ಷೆ ಅನುಭವಿಸುವರೇ?: ಕೇಜ್ರಿ

• **ಹೊಸದಿಲ್ಲಿ:** ಅರವಿಂದ ಕೇಜ್ರಿವಾಲ್ ಜೈಲಿಗೆ ಹೋದರು, ರಾಬರ್ಟ್ ವಾದ್ರಾ ಜೈಲಿಗೆ ಹೋಗ್ತಾರಾ? ಸಂಜಯ್ ಸಿಂಗ್ ಸೆರೆಮನೆವಾಸ ಅನುಭವಿಸಿದ್ದರು. ರಾಹುಲ್ ಗಾಂಧಿ ಜೈಲೊಳಗೆ ಕೂರಲು ತಯಾರಿದ್ದಾರೆಯೇ? ಮನೀಶ್ ಸಿಸೋಡಿಯಾ ಜೈಲುಶಿಕ್ಷೆ ಅನುಭವಿಸಿದಂತೆ ಸೋನಿಯಾ ಗಾಂಧಿ ಅನುಭವಿಸುವರೇ? ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆ ಎಂಬುದೇ ಇಲ್ಲವೇ? ಎಂದು ದಿಲ್ಲಿ ಅಬಕಾರಿ ನೀತಿ ಪ್ರಕರಣದಲ್ಲಿ ಸಿಬಿಐ ಕೋರ್ಟ್‌ನಲ್ಲಿ ಖುಲಾಸೆಗೊಂಡ ಆಮ್ ಆದ್ಮಿ ನಾಯಕ ಅರವಿಂದ ಕೇಜ್ರಿವಾಲ್, ಒಂದು ಕಾಲದಲ್ಲಿ ಮಿತ್ರಪಕ್ಷವಾಗಿದ್ದ ಕಾಂಗ್ರೆಸ್‌ನ ನಾಯಕರಿಗೆ ಈ ತೆರ ಸವಾಲೆಸೆದಿದ್ದಾರೆ.



ಯೋಜಿತ ಪ್ರಹಸನ: ಸಿಬಿಐ ನ್ಯಾಯಾಲಯದಲ್ಲಿ ಆಪ್ ನಾಯಕರ ಖುಲಾಸೆ ಯೋಜಿತ ಪ್ರಹಸನದ ಭಾಗವಾಗಿದೆ. ಚುನಾವಣೆಗಳು ಸನ್ನಿಹಿತವಿರುವ ಕಾರಣ ಈ ತೆರ ಪ್ರಹಸನ ನಿರೀಕ್ಷಣೀಯ. ಕಾಂಗ್ರೆಸ್ ನಾಯಕರ ವಿರುದ್ಧ ಪ್ರಕರಣಗಳ ಸಂಖ್ಯೆ ದಿಢೀರ್ ಏರುತ್ತೆ ಎಂದು ಕಾಂಗ್ರೆಸ್ ವಕ್ತಾರ ಪವನ್ ಖೇರಾ ಟೀಕಿಸಿದ್ದಾರೆ. ತಮಿಳುನಾಡಿನಲ್ಲಿ ಚುನಾವಣೆ ಸಮೀಪಿಸಿರುವ ಹಿನ್ನೆಲೆ ಪಿ.ಚಿದಂಬರಂರನ್ನು ಈಗಾಗಲೆ ಮರಳಿ ಸ್ಪಾಟ್‌ಲೈಟ್‌ಗೆ ಎಳೆಯಲಾಗಿದೆ. ಗುಜರಾತ್, ಪಂಜಾಬ್ ಚುನಾವಣೆ ಹಿನ್ನೆಲೆಯಲ್ಲಿ ಆಪ್ ಮತ್ತಿತರರ ವಿರುದ್ಧದ ಕೇಸ್‌ಗಳು ಮಾಯವಾಗುವುದು ಎಂದು ಖೇರಾ ಎಕ್ಸ್ ಗೆ ಹಾಕಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ.

ನನಗಿಲ್ಲ ಭಯ: ತೀರ್ಪಿನ ನಂತರ ಕೇಜ್ರಿವಾಲ್ ಕಣ್ಣೀರು ಹಾಕುತ್ತಿರುವ ಕ್ಲಿಪ್ ಅನ್ನು ಕಾಂಗ್ರೆಸ್‌ನ ಹಲವು ನಾಯಕರು ಎಕ್ಸ್‌ಗೆ ಹಾಕಿದ್ದಾರೆ. ನನ್ನ ವಿರುದ್ಧ 32 ಕೇಸುಗಳಿವೆ. ಆದರೂ ನಾನು ಎಂದಿನಂತೆ ಧೈರ್ಯವಾಗಿದ್ದೇನೆ ಎಂಬ ಕಾಂಗ್ರೆಸ್‌ನ ರಾಹುಲ್ ಗಾಂಧಿಯ ಹೇಳಿಕೆಯನ್ನೂ ಕ್ಲಿಪ್‌ಗೆ ಜೋಡಿಸಲಾಗಿದೆ.

ಹೈಕೋರ್ಟ್, ಸುಪ್ರೀಂ ತೀರ್ಪು ಮುಖ್ಯ: ಕೆಳ ನ್ಯಾಯಾಲಯ ಕೊಟ್ಟ ತೀರ್ಪಿದು. ಪ್ರಸ್ತುತ ಪ್ರಕರಣಗಳಿಗೆ ಸಂಬಂಧಿಸಿ ಈ ಹಿಂದೆ ದಿಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಗಂಭೀರ ಅಭಿಮತಗಳ ವ್ಯಕ್ತಪಡಿಸಿದ್ದವು. ಅಧೀನ ನ್ಯಾಯಾಲಯದ ನಿರ್ಧಾರವನ್ನು ಉಚ್ಚ ನ್ಯಾಯಾಲಯಗಳು ಅದ್ಯಾವ ರೀತಿ ಪರಿಗಣಿಸಲಿವೆ ಎಂಬುದು ಮುಖ್ಯ. ಕಾನೂನು ಪ್ರಕ್ರಿಯೆ ಇನ್ನೂ ಮುಗಿದಿಲ್ಲ ಎಂದು ದಿಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಮುಖ್ಯಸ್ಥ ದೇವೇಂದರ್ ಯಾದವ್ ಕುಟುಕಿದ್ದಾರೆ.

ಬಂಗಾಳದ ಮತದಾರರ ಪಟ್ಟಿ ಪ್ರಕಟ: 63 ಲಕ್ಷ ಹೆಸರು ಕಡಿತ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ನಡೆದ ವಿಶೇಷ ತೀವ್ರ ಪರಿಷ್ಕರಣೆಯ (ಎಸ್ ಐಆರ್) ನಂತರ ಸಿದ್ಧಪಡಿಸಲಾದ ಅಂತಿಮ ಮತದಾರರ ಪಟ್ಟಿಯನ್ನು ಭಾರತೀಯ ಚುನಾವಣಾ ಆಯೋಗ ಶನಿವಾರ ಬಿಡುಗಡೆ ಮಾಡಿದೆ. ಈ ಹೊಸ ಪಟ್ಟಿಯ ಪ್ರಕಾರ ರಾಜ್ಯದ ಒಟ್ಟು ಮತದಾರರ ಸಂಖ್ಯೆಯಲ್ಲಿ ಭಾರಿ ಇಳಿಕೆಯಾಗಿದ್ದು, ಪ್ರಸ್ತುತ 7,04,59,284 ಮತದಾರರು ಇದ್ದಾರೆ.

ಪ್ರಮುಖ ಅಂಕಿ-ಅಂಶಗಳು: ಈ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಬರೋಬ್ಬರಿ 63,66,952 ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ, ಎಂದು ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್ವಾಲ್ ಹೇಳಿದ್ದಾರೆ. ಇದೇ ವೇಳೆ 1.88 ಲಕ್ಷಕ್ಕೂ ಹೆಚ್ಚು ಹೊಸ ಮತದಾರರನ್ನು ಸೇರಿಸಲಾಗಿದೆ. ಅಂತಿಮ ಪಟ್ಟಿಯಲ್ಲಿ 3,60,22,642 ಪುರುಷ, 3,44,35,260 ಮಹಿಳಾ ಮತ್ತು 1,382 ತೃತೀಯ ಲಿಂಗಿ ಮತದಾರರು ಇದ್ದಾರೆ. ಸುಮಾರು 60 ಲಕ್ಷ ಮತದಾರರ ಹೆಸರುಗಳು ಇನ್ನೂ ಪರಿಶೀಲನಾ ಹಂತದಲ್ಲಿವೆ ಎಂದು ಆಯೋಗ ತಿಳಿಸಿದೆ. ಪ್ರತಿ ಬೂತ್ ಮಟ್ಟದ ಅಧಿಕಾರಿಗಳಿಗೆ (ಬಿಎಲ್‌ಒ) ಮತ್ತು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಮತದಾರರ ಪಟ್ಟಿಯ ಪ್ರತಿಗಳನ್ನು ವಿತರಿಸಲಾಗುತ್ತಿದೆ. ಈ ಪಟ್ಟಿಯನ್ನು ಚುನಾವಣಾ ಆಯೋಗದ ಅಧಿಕೃತ ವೆಬ್‌ಸೈಟ್ ಮತ್ತು ಇಸಿಐ ನೆಟ್ ಆ್ಯಪ್‌ನಲ್ಲಿ ಲಭ್ಯವಾಗುವಂತೆ ಮಾಡಲಾಗಿದೆ. ಮತದಾರರು ತಮ್ಮ ವೋಟರ್ ಐಡಿ (ಎಪಿಕ್) ಸಂಖ್ಯೆ ಬಳಸಿ ಈ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ತಮ್ಮ ಹೆಸರು ಇದೆಯೇ ಎಂದು ಖಚಿತಪಡಿಸಿಕೊಳ್ಳಬಹುದು.

ದೇಶವನ್ನು ಅಪಮಾನಿಸುವ ಅವಕಾಶಕ್ಕೆ ಕೈ ಕಾಯುತ್ತಿದೆ: ಪ್ರಧಾನಿ ಮೋದಿ

ಮುಸ್ಲಿಂ ಲೀಗ್ ಹಾದಿ ತುಳಿದ ಕಾಂಗ್ರೆಸ್

• **ಜೈಪುರ:** ವಿಪಕ್ಷ ಕಾಂಗ್ರೆಸ್ ಇಂದು ಮುಸ್ಲಿಂ ಲೀಗ್-ಮಾವೋವಾದಿ ಕಾಂಗ್ರೆಸ್ ಆಗಿ ಮಾರ್ಪಾಡಾಗಿದ್ದು, ದೇಶವನ್ನು ಅಪಮಾನಿಸುವ ಅವಕಾಶಕ್ಕಾಗಿ ಕಾಂಗ್ರೆಸ್ ಚಾತಕಪಕ್ಷಿಯಂತೆ ಕಾಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಛೀಮಾರಿ ಹಾಕಿದ್ದಾರೆ. ಈಚಿನ ಜಾಗತಿಕ ಎಐ ಶೃಂಗಸಭೆಯಲ್ಲಿ ಯುವ ಕಾಂಗ್ರೆಸಿಗರ ಶರ್ಟ್‌ರಹಿತ ಪ್ರತಿಭಟನೆಗೆ ಪ್ರಧಾನಿ ಮೋದಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮುಸ್ಲಿಂ ಲೀಗ್‌ಗೆ ಭಾರತದ ಬಗ್ಗೆ ಇದ್ದ ದ್ವೇಷಾಸೂಯೆಗಳಿಂದಾಗಿ ಅಖಂಡ ಭಾರತ ವಿಭಜನೆಯಾಯಿತು. ಇಂದೀಗ ಕಾಂಗ್ರೆಸ್ ಕೂಡ ಲೀಗ್ ಹಾದಿಯನ್ನೇ ತುಳಿದಿದೆ. ಇಡೀ ಜಗತ್ತು ಭಾರತವನ್ನು ಪ್ರಶಂಸಿಸುವಾಗ ಭಾರತೀಯರಿಗೆ ಸಹಜವಾಗೇ ಹೆಮ್ಮೆಯಾಗುತ್ತೆ. ಆದರೆ ಕಾಂಗ್ರೆಸ್ ಮಾತ್ರ ಜಾಗತಿಕ ವೇದಿಕೆಗಳಲ್ಲಿ ಪ್ರಹಸನ ಸೃಜಿಸಿ ವಿದೇಶಿ ಗಣ್ಯರ ಸಮಕ್ಷಮ ಭಾರತವನ್ನು ಅಪಮಾನಿಸುವುದು ತೀರಾ ಸರಿಯಲ್ಲ ಎಂದು ಪ್ರಧಾನಿ ಮೋದಿ ಆರೋಪಿಸಿದರು. ರಾಜಸ್ಥಾನದ ಅಜ್ಮೀರ್‌ನಲ್ಲಿ ಬರೋಬ್ಬರಿ 16,600 ಕೋಟಿ ರೂ. ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ನೆರವೇರಿಸಿದ ಬಳಿಕ, ಕಯಾಡ್ ವಿಶ್ರಾಮ್ ಸ್ಥಳದಲ್ಲಿ ಸಾರ್ವಜನಿಕ ರ‍್ಯಾಲಿಯಲ್ಲಿ ಪ್ರಧಾನಿ ಪಾಲ್ಗೊಂಡರು.

ಅದೊಂದು ಕಾಲದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಥವಾ ಐಎನ್‌ಸಿ ಹೆಸರು ಅರ್ಥಪೂರ್ಣವಾಗಿತ್ತು. ಆದರೆ ಐಎನ್‌ಸಿ ಇಂದು ಆ ಸ್ವರೂಪದಲ್ಲಿ ಉಳಿದಿಲ್ಲ, ಇಂದೀಗ ಅದು ಎಂಎಂಸಿ- ಮುಸ್ಲಿಂಲೀಗ್ ಮಾವೋವಾದಿ ಕಾಂಗ್ರೆಸ್ ಆಗಿ ಪರಿವರ್ತಿತವಾಗಿದೆ ಎಂದು ಹೇಳಿದರು.

ಹಾರ್ಡ್‌ವೇರ್ ರಂಗದಲ್ಲೂ ಪ್ರಗತಿ

• **ಸಾನಂದ್(ಗುಜರಾತ್):** ಸಾಫ್ಟ್‌ವೇರ್ ರಂಗದಲ್ಲಿ ಬಲಿಷ್ಠವಾಗಿರುವ ರಾಷ್ಟ್ರವು, ಹಾರ್ಡ್‌ವೇರ್ ರಂಗದಲ್ಲೂ ತನ್ನ ಅಸ್ತಿತ್ವವನ್ನು ದೃಢವಾಗಿ ರೂಪಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಗುಜರಾತಿನ ಸಾನಂದ್‌ನಲ್ಲಿ ಮೈಕ್ರಾನ್ ಟೆಕ್ನಾಲಜಿಯ ಸೆಮಿಕಂಡಕ್ಟರ್ ಸ್ಥಾವರವನ್ನು ಪ್ರಧಾನಿ ಮೋದಿ ಶನಿವಾರ ಲೋಕಾರ್ಪಣೆಗೈದರು. ಉದ್ಘಾಟನೆಗೊಂಡ, ಅಮೆರಿಕ ಮೂಲದ ಕಂಪೆನಿಯ ಎಟಿಎಂಪಿ ಸ್ಥಾವರವು ದೇಶದಲ್ಲೇ ಪ್ರಥಮ ಸೌಲಭ್ಯವಾಗಿದೆ. ಇದು ಭಾರತ ಮತ್ತು ಅಮೆರಿಕ ನಡುವಣ ಗಾಢ ಪಾಲುದಾರಿಕೆಯನ್ನು ಪ್ರತಿಫಲಿಸಿದೆ ಎಂದರು.

ಎಚ್‌ಪಿವಿ ಲಸಿಕೆ ಅಭಿಯಾನಕ್ಕೆ ಚಾಲನೆ

• **ಜೈಪುರ:** 9 ರಿಂದ 14 ವರ್ಷದೊಳಗಿನ ಬಾಲಕಿಯರು ಎದುರಿಸುವ ಗರ್ಭಕಂಠ ಕ್ಯಾನ್ಸರ್ ತಡೆಯುವ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್‌ಪಿವಿ) ಲಸಿಕೆ ಅಭಿಯಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಶನಿವಾರ ಚಾಲನೆ ನೀಡಿದರು. ಅಜ್ಮೀರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಲವು ಬಾಲಕಿಯರಿಗೆ ಲಸಿಕೆ ಹಾಕುವ ಮೂಲಕ ರಾಷ್ಟ್ರವ್ಯಾಪಿ ನಡೆಸಲಾಗುವ ಅಭಿಯಾನಕ್ಕೆ ಔಪಚಾರಿಕವಾಗಿ ಉದ್ಘಾಟಿಸಿದರು.

ಫಾರ್ಮ್ - IV
ಹೊಸದಿಗಂತ ದಿನಪತ್ರಿಕೆ
ಹೊಸದಿಗಂತ ಪತ್ರಿಕೆಯ ಒಡೆತನ ಮತ್ತಿತರ ವಿವರಗಳು
ಪ್ರೆಸ್ ಮತ್ತು ಪುಸ್ತಕ ದಾಖಲಾತಿ ಕಾಯ್ದೆಯ 19ಡಿ ಉಪನಿಯಮ ಬಿ ಕಾಯ್ದೆ 8 ಪತ್ರಿಕೆಗಳ ದಾಖಲಾತಿ (ಕೇಂದ್ರ ಕಾಯ್ದೆ) 1956 ರ ಪ್ರಕಾರ

ಪ್ರಕಾಶಿಸಲ್ಪಡುವ ಸ್ಥಳ	:	ಬೆಂಗಳೂರು
ಪ್ರಕಾಶನದ ಅವಧಿ	:	ದಿನಪತ್ರಿಕೆ
ಪ್ರಕಾಶಕ	:	ಪಿ. ಎಸ್. ಪ್ರಕಾಶ್ ಜ್ಞಾನಭಾರತಿ ಪ್ರಕಾಶನ (ಲಿ.) ನಂ.1/1, 1ನೇ ಮಹಡಿ, 6ನೇ ಕ್ರಾಸ್ 8ನೇ ಮುಖ್ಯ, ಮಲ್ಲೇಶ್ವರ, ಬೆಂಗಳೂರು
ಮುದ್ರಕರು	:	ಪಿ. ಎಸ್. ಪ್ರಕಾಶ್ 5/120/2,ಅರುಣೋದಯ,ನಂ.18, ಬೋಳುಗುಡ್ಡೆ, ಕಾವೂರ್, ಮಂಗಳೂರು
ರಾಷ್ಟ್ರೀಯತೆ	:	ಭಾರತೀಯ
ಮುದ್ರಣಾಲಯ	:	ಎಂ.ಎಸ್.ಎಸ್ ಪ್ರಿಂಟರ್ಸ್., ನಂ.345/4, ಭಟ್ಟರಹಳ್ಳಿ, ವಿರ್ಗೋ ನಗರ, ಹಳೆ ಮದ್ರಾಸ್ ರಸ್ತೆ, ಕೆ.ಆರ್.ಪುರಂ, ಬೆಂಗಳೂರು - 560049.
ಸಂಪಾದಕ	:	ಪಿ. ಎಸ್. ಪ್ರಕಾಶ್ 5/120/2, ಅರುಣೋದಯ, ನಂ.18, ಬೋಳುಗುಡ್ಡೆ, ಕಾವೂರ್, ಮಂಗಳೂರು.
ಒಡೆತನ ಮತ್ತು ಮಾಲಿಕತ್ವ	:	ಜ್ಞಾನಭಾರತಿ ಪ್ರಕಾಶನ (ಲಿ.) ಹೊಸದಿಗಂತ, 2ನೇ ಮಹಡಿ, ವಿಕಾಸ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಹತ್ತಿರ, ಬಿಜೈ ಮಂಗಳೂರು - 575004
ಆಡಳಿತ ಕಚೇರಿ	:	2ನೇ ಮಹಡಿ, ವಿಕಾಸ, ಕೆಎಸ್‌ಆರ್‌ಟಿಸಿ ಬಸ್‌ನಿಲ್ದಾಣದ ಹತ್ತಿರ, ಬಿಜೈ, ಮಂಗಳೂರು - 575004

ನಾನು ಪಿ. ಎಸ್. ಪ್ರಕಾಶ್ ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ಮೇಲ್ಕಾಣಿಸಿದ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಗೆ ಅನುಸಾರವಾಗಿ ಸತ್ಯವಾಗಿರುತ್ತವೆ.

01.03.2026
ಮಂಗಳೂರು

ಪಿ.ಎಸ್. ಪ್ರಕಾಶ್
ಪ್ರಕಾಶಕ



ಮಿಂಚಿನಂತೆ ಚಪಲವಾದುದು ಯಾವುದು?

ದುರ್ಜನಸಂಗ ಮತ್ತು ಯುವತಿ

ಈ ಉತ್ತರದಲ್ಲಿ ಹೇಳಿರುವ ದುರ್ಜನಸಂಗ ಮತ್ತು ಯುವತಿ ಎರಡು ವಿಷಯಗಳು ಎಷ್ಟು ಚಪಲ ಎಂಬುದನ್ನು ತಿಳಿಯಬಹುದಾಗಿದೆ. ಮಿಂಚು ಎಲ್ಲರಿಗೂ ತಿಳಿದಂತೆ ಒಂದು ಕ್ಷಣ ಆಕಾಶದಲ್ಲಿ ನಮ್ಮ ಕಣ್ಣಿಗೆ ಗೋಚರಿಸಿ ಮರೆಯಾಗುವ ವಿಷಯವಾಗಿದೆ. ಅಂತೆಯೇ ಈ ದುರ್ಜನಸಂಗ ಮತ್ತು ಯುವತಿಯ ಸಂಗವು ಕೂಡ ನಮ್ಮ ಜೀವನದಲ್ಲಿ ಅಷ್ಟು ಕ್ಷಣಿಕವಾದವುಗಳು. ಮಿಂಚು ಹೇಗೆ ಕಣ್ಣಿಗೆ ಕ್ಷಣಿಕ ಆನಂದವನ್ನು ಕೊಟ್ಟು ಮರೆಯಾಗುತ್ತದೆಯೋ ಅಂತೆಯೇ ಈ ಎರಡು ಸಂಗತಿಗಳೂ ಕೂಡ ಎಂಬ ಮಾರ್ಮಿಕ ವಿಷಯವನ್ನು ಈ ಪ್ರಶ್ನೋತ್ತರ ಸಾರುತ್ತದೆ. ದುರ್ಜನರ ಸಂಗ ಮತ್ತು ಯುವತಿಯರ ಸಂಗ ಇವೆರಡೂ ನಮ್ಮನ್ನು ಸನ್ಮಾರ್ಗದಿಂದ ಚ್ಯುತಿಗೊಳಿಸುವ ವಿಧಾನವಾಗಿವೆ. ಹಾಗಾಗಿ ಇವೆರಡೂ ದೂರವಿಡಲು ಯೋಗ್ಯವಾದ ವಿಷಯಗಳು ಎಂಬುದನ್ನು ಅರಿಯಬೇಕಾಗಿದೆ. ನಮ್ಮ ಜೀವನವು ಹೇಗೆ ಸಾಗಬೇಕಾಗಿದೆ ಎಂಬುದನ್ನು ತಿಳಿದಾಗ, ಆ ಜೀವನಕ್ಕೆ ಎರಡು ಸಂಗತಿಗಳು ಎಷ್ಟು ವಿರೋಧವಾದವುಗಳು ಎಂಬುದನ್ನು ತಿಳಿಯಬಹುದು. ಅಂದರೆ ದುರ್ಜನರ ಸಂಪರ್ಕ ಮತ್ತು ಯುವತಿಯ ಸಾಂಗತ್ಯವು ಅತ್ಯಂತ ಚಂಚಲವಾಗಿದ್ದು, ಅವು ನಮ್ಮ ಜೀವನದಲ್ಲಿ ಮಿಂಚಿನಂತೆ ಬಂದುಹೋಗುತ್ತವೆ. ಶಾಶ್ವತವಾದವುಗಳಲ್ಲ, ಅವುಗಳನ್ನೇ ನೆಚ್ಚಿ ಕೂತರೆ ಬದುಕು ಅಸಾಧ್ಯ. ಹಾಗಾಗಿ ಇವೆರಡು ಕೂಡ ತ್ಯಾಜ್ಯ ಎಂಬುದು ಇದರ ಅರ್ಥ.

ವಯಸ್ಸಿಗೆ ಬಂದ ಯುವಕನಿಗೆ ಯುವತಿಯ ಸೆಳೆತ, ಹಾಗೆ ಯುವತಿಗೆ ಯುವಕನ ಸೆಳೆತ. ಈ ಎರಡು ಸೆಳೆತಗಳು ಆ ವಯಸ್ಸಿನಲ್ಲಿ ಅತ್ಯಂತ ಸಹಜವಾದವುಗಳು. ಅಕಾಲದಲ್ಲಿ ಬರುವ ಈ ಯುವಕ ಯುವತಿಯರ ಸೆಳೆತವು ಜೀವನದ ಉದ್ದೇಶವನ್ನು ಮರೆಸಬಹುದು. ವಿವೇಕಪ್ರಜ್ಞೆಯನ್ನೂ ಸಹ ನಷ್ಟವಾಗಿಸಬಹುದು. ಇದನ್ನೇ ಸಾಮಾನ್ಯವಾಗಿ 'ರತಿ, ಪ್ರೀತಿ, ಕಾಮ' ಇತ್ಯಾದಿಯಾಗಿ ಹೇಳುವುದುಂಟು. ರತಿ ಅಥವಾ ಪ್ರೀತಿಯಲ್ಲಿ ಮುಳುಗಿದ ವ್ಯಕ್ತಿಗೆ ಯಾವ ಪ್ರಪಂಚವೂ ಕೂಡ ಕಾಣಿಸದು. ಈ ಕಾರಣವಾಗಿ ತನ್ನ ಜೀವಿತದ ಉತ್ಕೃಷ್ಟ ಉದ್ದಿಷ್ಟವನ್ನು ಅವನು ಮರೆಯುವ ಸಂದರ್ಭ ಬರುತ್ತದೆ. ಹಾಗಾಗಿ ಯುವಕ ಯುವತಿಯರ ಆಕರ್ಷಣೆ ಎಂಬುದು ಮಿತಿಯಲ್ಲಿ ಇರಬೇಕು. ಅಂದರೆ ಯಾವ ಕಾಲದಲ್ಲಿ ಬರಬೇಕು ಎಂಬುದಕ್ಕೆ ಒಂದು ನಿಯಮ ಇದೆ. ಅವರ ಪರಸ್ಪರ ಆಕರ್ಷಣೆಯು ಕೇವಲ ಸಂತಾನೋತ್ಪತ್ತಿಗೆ ಮಾತ್ರ ಸೀಮಿತವಾಗಿರಬೇಕು. ಹಾಗಿಲ್ಲದ ಆಕರ್ಷಣೆಯು ಅವರ ಮನಸ್ಸಿನ ಏಕಾಗ್ರತೆಯನ್ನು ಭಂಗಗೊಳಿಸಬಹುದು. ಆದ್ದರಿಂದ ಅಕಾಲದ ಆಕರ್ಷಣೆಯು ಅತ್ಯಂತ ಅಪಾಯವಾದುದು. ಅದರಂತೆಯೇ ದುರ್ಜನರ ಸಂಗವೂ ಕೂಡ ಅತ್ಯಂತ ಅಪಾಯಕಾರಿ. ದುರ್ಜನರು ಎಂದರೆ ಧರ್ಮಪ್ರೀತಿ ಇಲ್ಲದ, ಧರ್ಮಕ್ಕೆ ವಿರೋಧವಾದ ನಡೆಯನ್ನು ಉಳ್ಳವರು. ಅವರ ಸಂಗವು ನಮ್ಮನ್ನು ಧರ್ಮದಿಂದ ಚ್ಯುತವಾಗಿಸುತ್ತದೆ. ಮತ್ತು ತತ್ಕಾಲದಲ್ಲಿ ಅದು ಬಹಳ ಅಪ್ಯಾಯಮಾನವಾಗಿ ಕಂಡುಬರುತ್ತದೆ. ಈ ಎರಡು ಸಂಗತಿಗಳು ಕೂಡ ತತ್ಕಾಲದಲ್ಲಿ ಆಕರ್ಷಕವಾಗಿಯೇ ಕಂಡು ಬರುತ್ತವೆ. ಆದರೆ ಪರಿಣಾಮದಲ್ಲಿ ಅವು ವಿಷಮತೆಯನ್ನು ಉಂಟುಮಾಡುತ್ತವೆ. ಆದ್ದರಿಂದ ಇವೆರಡನ್ನು 'ಮಿಂಚಿನಂತೆ ಅತ್ಯಂತ ಚಂಚಲವಾದವುಗಳು' ಎಂಬುದಾಗಿ ಈ ಪ್ರಶ್ನೋತ್ತರ ಸಾರುತ್ತದೆ.



ಕೃಷ್ಣಾರ್ಜುನ-ಭೀಮರ ಮಾಗಧ ಪ್ರಯಾಣ

ಜರಾಸಂಧ ವಧೆಯನ್ನು ಮಾಡುವಲ್ಲಿ ಕೃಷ್ಣನಿತ್ತ ಸಲಹೆ ಅಮೂಲ್ಯವಾದುದೆಂದೂ, ನೀತಿ-ಬಲ-ಕ್ರಿಯೆಗಳ ಸಂಗಮವೇ ಕಾರ್ಯಸಾಧಕವೆಂದೂ ಯುಧಿಷ್ಠಿರನು ಮನಗಂಡನು. ಅರ್ಜುನನ ದಶನಾಮಗಳಲ್ಲಿ ಕೃಷ್ಣನೆಂಬುದೂ ಒಂದಾದ್ದರಿಂದ, ಯುಧಿಷ್ಠಿರನ ಮಾತು ಹೀಗೆ ಸಾಗಿತು:

"ಈ ಇಬ್ಬರು ಕೃಷ್ಣರಿಗೆ, ಎಂದರೆ ಕೃಷ್ಣಾರ್ಜುನರಿಗೆ, ಅಜೇಯನಾದವನೇ ಇಲ್ಲ ಮತ್ತು ಈ ವೃಕೋದರ ಭೀಮನಾದರೂ ಬಲಶಾಲಿಗಳಲ್ಲೇ ಶ್ರೇಷ್ಠನಾದವನು. ನಿಮ್ಮಿಬ್ಬರೊಂದಿಗೆ ಸೇರಿದ ಈ ಮಹಾಕೀರ್ತಿ ಸಂಪನ್ನನಾದ ವೀರನು ಏನನ್ನು ತಾನೆ ಸಾಧಿಸಲಾರ? ಸೈನ್ಯ-ಸ್ತೋಮವು ಉತ್ತಮ ಕಾರ್ಯವನ್ನು ಸಾಧಿಸುವುದು ಯಾವಾಗ? ನೇತಾರನಿಂದ ಸರಿಯಾಗಿ ಸಂಚಾಲಿತವಾದಾಗ. ಬಲವೆಂಬುದು ತನ್ನಷ್ಟಕ್ಕೆ ಕುರುಡೆಂದೂ, ಜಡವೆಂದೂ ಹೇಳುವರು. ವಿಚಕ್ಷಣರೇ ಅದನ್ನು ಮುನ್ನಡೆಸಬೇಕು.

ಹೀಗೆ, ಕಾರ್ಯವು ಸಿದ್ಧಿಸಬೇಕೆಂದರೆ ಪ್ರಜ್ಞೆ-ರಾಜ-ನೀತಿಗಳೆಂಬ ಬಲಗಳಿಂದ ಕೂಡಿರುವವನೂ, ಕ್ರಿಯೆಯ ಉಪಾಯವನ್ನು ಹೊಂದಿರುವವನೂ ಆದ ಶ್ರೀಕೃಷ್ಣನನ್ನೇ ಮುಂದಿಟ್ಟುಕೊಂಡು ಹೊರಡಬೇಕು. ಯದುಶ್ರೇಷ್ಠನಾದ ಕೃಷ್ಣನೇ, ಕಾರ್ಯಸಿದ್ಧಿ ಪರ್ಯಂತವೂ ಅರ್ಜುನನು ಕೃಷ್ಣನನ್ನು ಅನುಸರಿಸಲಿ ಹಾಗೂ ಭೀಮನು ಅರ್ಜುನನನ್ನು ಅನುಸರಿಸಲಿ. ನಯ-ಜಯ-ಬಲ - ಇವುಗಳು ಸೇರಿ, ವಿಕ್ರಮದಲ್ಲಿ ತಮ್ಮ ಸಿದ್ಧಿಯನ್ನು ಹೊಂದುವುವು ಎಂದು ಆತನು ತನ್ನ ಮಾತನ್ನು ಮುಗಿಸಿದನು. ಯುಧಿಷ್ಠಿರನು ಹೀಗೆಂದು ಹೇಳಲಾಗಿ, ಮಹಾತೇಜಸ್ವಿಗಳೆನಿಸಿದ ಕೃಷ್ಣ-ಅರ್ಜುನ-ಭೀಮಸೇನರು ಜರಾಸಂಧನ ರಾಜಧಾನಿಯತ್ತ ಸಾಗಿದರು. ವರ್ಚಸ್ವಿಗಳಾದ ಸ್ನಾತಕ ಬ್ರಾಹ್ಮಣರ ಪರಿಚ್ಛದವನ್ನು, ಎಂದರೆ ವೇಷ-ಭೂಷಣಗಳನ್ನು ಅವರು ಧರಿಸಿಕೊಂಡರು. ಈ ಮೂಲಕ ತಮ್ಮನ್ನೇ ಮರೆಮಾಚಿಕೊಂಡರು. ಆ ಸಂದರ್ಭದಲ್ಲಿ ಅವರ ಸ್ನೇಹಿತರು ತಮ್ಮ ಮನೋಹರವಾದ ಮಾತುಗಳಿಂದ ಅವರನ್ನು ಅಭಿನಂದಿಸಿದರು.

ಈ ಮೂವರೂ ಜರಾಸಂಧನ ವಿಷಯಕ್ಕೆ ರೋಷದಿಂದ ಕುದಿಯುತ್ತಿದ್ದರು. ಎಂದೇ ಸೂರ್ಯ-ಚಂದ್ರ-ಅಗ್ನಿಗಳಂತೆ ಅವರ ಶರೀರವು ಜ್ವಲಿಸುತ್ತಿತ್ತು. ಯುದ್ಧದಲ್ಲಿ ಎಂದೂ ಸೋಲನ್ನೇ ಕಂಡಿರದ ಹಾಗೂ ಒಂದೇ ಕಾರ್ಯಕ್ಕಾಗಿಯೇ ಸಮುದ್ಯತರಾಗಿದ್ದ ಹಾಗೂ ಭೀಮನನ್ನು ಮುಂದಿಟ್ಟುಕೊಂಡು ಹೊರಟಿದ್ದ, ಆ ಕೃಷ್ಣರಿಬ್ಬರನ್ನು ಹಾಗೆ ಕಂಡ ಯುಧಿಷ್ಠಿರನು, ಜರಾಸಂಧನು ಹತನಾದನೆಂದೇ ಭಾವಿಸಿದನು. ಎಷ್ಟಾದರೂ ಅವರಿಬ್ಬರೂ ಎಂತಹವರು? ಧರ್ಮ-ಕಾಮ-ಅರ್ಥ ಇವುಗಳನ್ನು ಸಾಧಿಸುವ ಲೋಗರನ್ನು ತೊಡಗಿಸುವವರು! ಅವರು ನರ-ನಾರಾಯಣರೇ ಸರಿ.

ಕುರು ಪ್ರದೇಶದಿಂದ ಹೊರಟ ಅವರು, ದಾರಿಯಲ್ಲಿ ನಾನಾ-ಪ್ರದೇಶಗಳನ್ನು ಕಂಡರು. ಕುರು-ಜಾಂಗಲ ಪ್ರದೇಶ, ಅಲ್ಲಿ ರಮಣೀಯವಾದ ಪದ್ಮ-ಸರಸ್ಸು, ಮುಂದಕ್ಕೆ ಕಾಲಕೂಟ-ಪರ್ವತ, ಅದನ್ನೂ ದಾಟಿದ ಮೇಲೆ ಗಂಡಕಿ, ಮಹಾ ಶೋಣಾ, ಸದಾನೀರಾ ನದಿಗಳು, ಬಳಿಕ ಏಕಪರ್ವತಕ-ಪ್ರದೇಶದ ನದಿಗಳು - ಇವೆಲ್ಲವನ್ನೂ ಮೀರಿ ನಡೆದರು. ಆಮೇಲೆ ರಮ್ಯವಾದ ಸರಯೂ ನದಿ, ಪೂರ್ವಕೋಸಲ ದೇಶ, ಬಳಿಕ ಮಿಥಿಲೆ. ಅಲ್ಲಿ ವಿಪುಲವಾದ ನದಿಗಳನ್ನು ಕಾಣುತ್ತಾ ಗಂಗೆ-ಶೋಣಭದ್ರಾ ನದಿಗಳನ್ನು ದಾಟಿದರು. ಮುಂದಕ್ಕೆ ಪೂರ್ವಾಭಿಮುಖಿವಾಗಿ ಹೊರಟರು. ಕುಶ-ಚೀರವಸ್ತ್ರಗಳನ್ನು ಧರಿಸಿದ್ದ ಅವರು, ಮುಂದೆ ಮಾಗಧ ಸೀಮೆಯನ್ನು ಸೇರಿದರು. ಅಲ್ಲಿ ಗೋಧನದಿಂದ ತುಂಬಿತುಳುಕಿದ್ದುದೂ, ಜಲಸಮೃದ್ಧಿ-ಸಸ್ಯಸಮೃದ್ಧಿಗಳನ್ನುಳ್ಳದ್ದೂ ಆದ ಗೋರಥ-ಗಿರಿಯನ್ನು ತಲುಪಿ, ಅಲ್ಲಿ ಮಾಗಧ ಪುರವನ್ನು ಕಂಡರು. ಆಗ ವಾಸುದೇವನೇ ಮಾಗಧ ದೇಶವನ್ನು ಪ್ರಶಂಸಿಸಿದನು. ಗೋಸಂಪತ್ತು, ನಿತ್ಯ-ಜಲಸಮೃದ್ಧಿಗಳನ್ನುಳ್ಳ ದೇಶ ಇದಲ್ಲವೇ? ಇಲ್ಲಿನ ಜನಗಳಾದರೂ ವ್ಯಾಧಿಗಳಿಲ್ಲದಿರುವರು. ಮನೆಗಳು ಸೊಗಸಾಗಿವೆ. ಹೀಗಾಗಿ, ಈ ಮಾಗಧ-ದೇಶವೇ ಮನೋಹರವಾಗಿದೆ. ವಿಪುಲ, ವರಾಹ, ವೃಷಭ, ಋಷಿಗಿರಿ ಹಾಗೂ ಚೈತ್ಯಕ ಎಂಬ ಹೆಸರಿನ ಐದು ವಿಹಾರ ಯೋಗ್ಯವಾದ ಪರ್ವತಗಳಿಲ್ಲಿವೆ.

ಹಾ.ತ.ಸಂ.ನ ವಿಷಯ ನಿಷೇಧ ಪಟ್ಟಿ



ಎಂಟನೆಯ ತರಗತಿಯ ಸಮಾಜವಿಜ್ಞಾನ ವಿಷಯದಲ್ಲಿ ನ್ಯಾಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ಬಗ್ಗೆ ಅಧ್ಯಾಯವೊಂದು ಇದ್ದುದನ್ನು ಖಂಡಿಸಿದ ನ್ಯಾಯಾಲಯವು ಆ ಪಠ್ಯಪುಸ್ತಕವನ್ನು ನಿಷೇಧಿಸಿದುದರ ಹಿನ್ನೆಲೆಯಲ್ಲಿ ಇತರ ವಿಷಯಗಳಲ್ಲಿಯೂ ಯಾವ್ಯಾವ ಅಧ್ಯಾಯಗಳನ್ನು ನಿಷೇಧಿಸಬೇಕೆಂದು ಚರ್ಚಿಸಲು ಹಾ.ತ.ಸಂ. (ಹಾದಿಬದಿ ತರಲೆಗಳ ಸಂಘ) ನ ಸ್ಟ್ಯಾಂಡಿಂಗ್ ಕಮಿಟಿಯು (ಹಾದಿಬದಿಯಲ್ಲೇ ಸೇರುತ್ತಿದ್ದುದರಿಂದಲೂ, ಅಲ್ಲಿ ಕುಳಿತುಕೊಳ್ಳಲು ಇದ್ದ ಸೋಮಾರಿಕಟ್ಟೆಯನ್ನು ಪಾನಿಪುರಿ ಮಾರುವವನು ಪೊಲೀಸರಿಂದ ಅನಧಿಕೃತವಾಗಿ ಭೋಗ್ಯಕ್ಕೆ ಪಡೆದಿದ್ದುದರಿಂದಲೂ ಇವರದು ಸಿಟಿಂಗ್ ಕಮಿಟಿ ಆಗಲು ಸಾಧ್ಯವಿಲ್ಲದ ಕಾರಣ ಸ್ಟ್ಯಾಂಡಿಂಗ್ ಕಮಿಟಿಯೇ ಆಗಿದ್ದಿತು) ಮೆಜೆಸ್ಟಿಕ್‌ನ ಫುಟ್‌ಪಾತಿನಲ್ಲಿ ಸಭೆ ಸೇರಿತು.

"ಚರಿತ್ರೆಯಲ್ಲಿ ಯುದ್ಧಗಳಿವೆ. ಚರಿತ್ರೆಯಲ್ಲಿ ಗಾಂಧೀಜಿಯೂ ಇದ್ದಾರೆ. ಎರಡರಲ್ಲಿ ಒಂದನ್ನು ಇಟ್ಟುಕೊಳ್ಳಬೇಕು" ಎಂದ ಹಾತಸಂ ಅಧ್ಯಕ್ಷನಾದ ತರಲೆ ತಮ್ಮಣ್ಣ.

"ಏಕೆ?"

"ಗಾಂಧೀಜಿ ಅಹಿಂಸಾವಾದಿ. ಯುದ್ಧ ಹಿಂಸಾಕಾಂಡ. ಹರ್ಷನು ಅನೇಕ ಯುದ್ಧಗಳನ್ನು ಗೆದ್ದನು ಎಂದು ಪಾಠ ಮಾಡಿದ ಮರುದಿನವೇ ಗಾಂಧಿಯು ಅಹಿಂಸಾ ತತ್ತ್ವವನ್ನು ಸಾರಿದರು ಎಂದರೆ ಹರ್ಷನ ಬಗ್ಗೆ ಹರ್ಷ ಪಡಬೇಕೋ, ಗಾಂಧಿಯನ್ನು ಮೆಚ್ಚಬೇಕೋ ಎಂಬ ಗೊಂದಲ ಉಂಟಾಗುತ್ತದೆ. ಎರಡರಲ್ಲಿ ಒಂದು ಧೋರಣೆಯಿರುವ ಪಾಠವನ್ನಷ್ಟೇ ಬೋಧಿಸುವುದೇ ಗೊಂದಲ ನಿವಾರಣೆಗೆ ಉಪಾಯ" ನುಡಿದ ತ.ತ.

"ಚರಕದ ಬಗ್ಗೆಯೂ ಗೊಂದಲವಿದೆ" ಕೊರಳೆತ್ತಿದ ಹಾತಸಂ ಕಾರ್ಯದರ್ಶಿಯಾದ ಕಿತಾಪತಿ ಕಿಟ್ಟಣ್ಣ.

"ಏನು ಗೊಂದಲ?" ಸಂಶಯವನ್ನು ಮುಂದಿರಿಸಿದ ಡೌಟೇಶ.

"ಚರಕ ಎಂದರೆ ವೈದ್ಯ. ಅವನು ಡಾಕ್ಟರ್ ಶುಶ್ರುತನ ಕಸಿನ್ ಎಂದೂ ನಂಬಲನರ್ಹವಾದ ಮೂಲಗಳು ತಿಳಿಸಿವೆ. ಗಾಂಧೀಜಿಯ ಚರಕ ಒಂದು ಯಂತ್ರ. ಈ ಚರಕನೇ ಯೆಗ್ಗೆಬೇಕಾದ ನೂಲನ್ನು ನೀಡಿದರೆ ಆ ಚರಕ ನೂಲನ್ನು ಬಳಸಿ ಶಸ್ತ್ರಚಿಕಿತ್ಸೆಗೆ ಹೊಲಿಗೆ ಹಾಕುತ್ತಿದ್ದನಂತೆ. ವಿದ್ಯಾರ್ಥಿಗಳಿಗೆ ಚರಕ ಎಂದ ಕೂಡಲೆ ವ್ಯಕ್ತಿಯೋ, ಶಕ್ತಿಯೋ ಎಂಬ ಅನುಮಾನ ಮೂಡುವುದರಿಂದ ಎರಡೂ ಚರಕಗಳನ್ನು ಪುಸ್ತಕದಿಂದ ಹೊರಗಿಡುವುದು ಕ್ಷೇಮ" ಎಂದ ಕಿ.ಕಿ.

"ವಿಜ್ಞಾನವು ಮುಂದುವರಿದು ಆಮ್ಲಜನಕವನ್ನು ಇಲ್ಲವಾಗಿಸಿದರೆ ರಾಜಕೀಯ ವಿಜ್ಞಾನದವರು ನೆಮ್ಮದಿಯಿಂದ ಉಸಿರಾಡಬಹುದು" ಎಂದ ಇಂಪರ್ಟಿನೆಂಟ್ ಇಳಂಗೋವನ್.

"ಆಮ್ಲಜನಕವೇ ಇಲ್ಲವಾದರೆ ಉಸಿರಾಡುವುದು ಹೇಗೆ?" ಡೌಟೇಶ ಉವಾಚ.

"ಇಲ್ಲವಾದರೆ ಎಂದರೆ ವ್ಯಾನಿಶ್ ಆಗಬೇಕೆಂದು ಅರ್ಥವಲ್ಲ. ಉದಾಹರಣೆಗೆ ನ್ಯಾಯ ವ್ಯವಸ್ಥೆಯಲ್ಲಿ ಭ್ರಷ್ಟಾಚಾರವಿಲ್ಲ ಎಂದು ನ್ಯಾಯಾಲಯವು ಹೇಳಿದಾಕ್ಷಣ ಸಿಗ್ನಲ್ ಲೈಟಿನ ಕಂಬದ ಹಿಂದೆ ಕಳ್ಳನಂತೆ ಅಡಗಿ ನಿಂತ ಪೊಲೀಸನು ಸಿಗ್ನಲ್ ಜಂಪಿನತ್ತ ಕುರುಡುನೋಟ ಬೀರಲು ಕೈಬಿಸಿಮಾಡಿಕೊಳ್ಳುವುದಿಲ್ಲ ಎಂದೇನಿಲ್ಲ. ಆಮ್ಲಜನಕ ಇರಕೂಡದು ಎಂದರೆ ಪುಸ್ತಕದಲ್ಲಿ ಇರಕೂಡದು ಎಂದಷ್ಟೇ ಅರ್ಥ" ದನಿಯೇರಿಸಿದ ಇಂ.ಇ.

"ವಿಜ್ಞಾನದ ಆಮ್ಲಜನಕವು ರಾಜಕೀಯ ವಿದ್ಯಾರ್ಥಿಗೆ ಹೇಗೆ ಗೊಂದಲ ಉಂಟಾಗಿಸುತ್ತದೆ?" ಕೇಳಿದ ಅನುಮಾನಂ ಅಯ್ಯಂಗಾರ್.

"ರಸಾಯನಶಾಸ್ತ್ರದಲ್ಲಿ ಆಮ್ಲಜನಕವನ್ನು ಓಟು ಎನ್ನುತ್ತಾರೆ. ರಾಜಕೀಯದಲ್ಲಿ ಓಟು ಎಂದರೆ ಬೇರೆಯದೇ ಅರ್ಥ. ಆಮ್ಲಜನಕವನ್ನು ಬೇರೆ ಅಕ್ಷರದಿಂದ ಗುರುತಿಸಿದರೆ ಮತದ ಛಾಯೆ ಕಳೆದು ಗೊಂದಲ ತಪ್ಪುತ್ತದೆ."

"ಆಕ್ಸಿಜನ್ ಓ ಎಂದಲೇ ಆರಂಭವಾಗುವುದರಿಂದ ಬೇರೆ ಅಕ್ಷರದಿಂದ ಗುರುತಿಸುವುದು ಸೂಕ್ತವಲ್ಲ" ಎಂದ ಅ.ಅ.

"ಪೊಟಾಶಿಯಮ್‌ಗೆ ಪಿ ಎನ್ನುವುದಿಲ್ಲ, ಕೆ ಎನ್ನುತ್ತೇವೆ. ಗೋಲ್ಡ್‌ಗೆ ಜಿ ಎನ್ನುವುದಿಲ್ಲ, ಎಯು ಎನ್ನುತ್ತೇವೆ. ಹಾಗೆಯೇ ಆಮ್ಲಜನಕಕ್ಕೆ ಮರುನಾಮಕರಣ ಮಾಡುವುದು ಅತ್ಯವಶ್ಯ" ಘಂಟಾಘೋಷಿಸಿದ ಇಂ.ಇ.

"ಬೀಜಗಣಿತ ಎಂದು ಆಲ್‌ಜೀಬ್ರಾವನ್ನು ಕರೆಯುವುದು ನನಗೆ ಇನಿತೂ ಸರಿಬರುವುದಿಲ್ಲ" ಎಂದ ಸಿನಿಕ್ ಸಿದ್ದಯ್ಯ.

"ಏಕೆ?"

"ಸರ್ಕಾರವು ರೈತರಿಗೆ ಬಿತ್ತನೆಗೆಂದು ಕೊಡುವ ಬೀಜಗಳ ಲೆಕ್ಕವನ್ನು ಬೀಜಗಣಿತ ಎನ್ನಬೇಕು. ಕೃಷಿಗೆ ಸಂಬಂಧಿಸಿದ ಈ ಲೆಕ್ಕವನ್ನು ಎ+ಬಿ ವಿಧದಲ್ಲಿ ಬೋಧಿಸುವುದು ಸರಿಯಲ್ಲ. ಹಾಗೆ ನೋಡಿದರೆ ಆಲ್ಜೀಬ್ರಾ ಸಹ ಸರಿಯಾದ ಹೆಸರಲ್ಲ. ಎಲ್ಲಾ ಪ್ರಾಣಿಗಳೂ ಜೀಬ್ರಾಗಳಾಗಲು ಹೇಗೆ ಸಾಧ್ಯ?" ಕೊಕ್ಕೆನಿಸಿದ ಸಿ.ಸಿ.

"ನನ್ನದು ಬೀಜಗಣಿತ ಎಂಬ ಪದದ ಬಗ್ಗೆ ತಕರಾರಿಲ್ಲ. ಆದರೆ ಎಕ್ಸ್ ಅಕ್ಷರವನ್ನು ಬೀಜಗಣಿತದಿಂದ ಹೊರಗಿಡುವುದು ಸೂಕ್ತ" ಎಂದ ಶಕುನಿ ಶಾಮಣ್ಣ.

"ಏಕೆ?" ಎಂದ ಸಿ.ಸಿ.

"ಎಕ್ಸ್ ಎನ್ನುವುದು ಮಾಜಿ ಟ್ವಿಟರ್‌ನ ಹಾಲಿ ಹೆಸರು. ನಾವು ಆಲ್ಜೀಬ್ರಾದಲ್ಲಿ ಎಕ್ಸ್+ಎ, ಎಕ್ಸ್ ಸ್ಕ್ವೇರ್ ಎಂದೆಲ್ಲ ಹೇಳುವಾಗ ಝುಕರ್‌ಬರ್ಗನು 'ನಮ್ಮ ಫೇಸ್‌ಬುಕ್ಕಿನ ಸಿಂಬಲ್ಲಾದ ಎಫ್‌ಗೂ ಪ್ರಾಮುಖ್ಯತೆ ಕೊಡಿ. ಎಫ್+ಎ, ಎಫ್+ಬಿ ಎಂದೆಲ್ಲ ಲೆಕ್ಕ ಹೇಳಿಕೊಡಿ' ಎಂದೂ, 'ಟಂಬ್ಲರ್ ಅನ್ನು ಕಡೆಗಣಿಸುವುದು ತರವಲ್ಲ, ಮುಂದಿನ ದಿನಗಳಲ್ಲಿ ಕೆಲವೆಡೆ ಎಫ್ ಬಳಸಿ, ಕೆಲವೆಡೆ ನನ್ನ ಸೂಚಕವಾದ ಟಿ ಅನ್ನು ಬಳಸಿ' ಎಂದು ಟಂಬ್ಲರೂ ಕೂಗೆಬ್ಬಿಸಬಹುದು. 'ದೊಡ್ಡ ಟಿ ಅಕ್ಷರವು ನನ್ನ ಮೊದಲ ಅಕ್ಷರವನ್ನೂ, ಎಕ್ಸ್ ಅಕ್ಷರವು ನನ್ನ ಕೊನೆಯ ಅಕ್ಷರವನ್ನೂ ಸೂಚಿಸುವುದರಿಂದ ಎರಡೂ ಇರಲಿ' ಎಂದು ಟೆಲಿಗ್ರಾಮ್ ಎಕ್ಸ್ ಆಪ್ ಸಹ ದನಿಯೇರಿಸಬಹುದು. ಒಂದು ಆಪ್‌ಗೆ ಬೆಣ್ಣೆ, ಮತ್ತೊಂದು ಆಪ್‌ಗೆ ಸುಣ್ಣ ಬಳಿಯಬಾರದೆಂದಿದ್ದರೆ ಬೀಜಗಣಿತದಲ್ಲಿ ಎಕ್ಸ್ ಅಕ್ಷರದ ಬಳಕೆಯನ್ನು ಈ ದಿನದಿಂದಲೇ ನಿಷೇಧಿಸಬೇಕು" ಎಂದ ಶ.ಶಾ.

"ಬೀಜಗಣಿತದಲ್ಲಿ ಬರುವ ಸೈನ್ ತೀಟಾ, ಕಾಟ್ ತೀಟಾಗಳ ಹೆಸರನ್ನು ಬದಲಿಸಬೇಕು ಅಥವಾ ಬೀಜಗಣಿತವನ್ನೇ ಸಿಲಬಸ್‌ನಿಂದ ಹೊರಗಿಡಬೇಕು" ಎಂದ ಕಾಮ್ರೇಡ್ ಕಾಮಣ್ಣ.

"ಏಕೆ?"

"ಸೈನ್ ತೀಟಾ ಎಂದು ಬಾಯಲ್ಲಿ ಹೇಳಿದರೂ ಅದನ್ನು ಬರೆಯುವುದು ಸಿನ್ (sin) ಎಂದೇ. ಪಾಪವನ್ನು ಸೂಚಿಸುವ ಈ ಪದವು ಗಣಿತಕ್ಕೆ ಹೊಂದುವಂತಹದ್ದಲ್ಲ, ಅದೇನಿದ್ದರೂ ಧರ್ಮದ ಬಾಬತ್ತು. ಧರ್ಮಬೋಧನೆಯು ಟಿಆರ್‌ಪಿಗೆಂದು ವಾಹಿನಿಗಳು ಬಳಸುವ ವಿಷಯವೇ ಹೊರತು ಶಾಲೆಯ ಪಠ್ಯ ವಿಷಯವಲ್ಲ. ಕಾಟ್ ತೀಟಾದ ಪೂರ್ಣ ಹೆಸರು ಕೊಟ್ಯಾನ್-ಜೆಂಟ್ ಎಂದಿದ್ದು, ಕೊಟ್ಯಾನ್-ಲೇಡಿ ಇಲ್ಲದ ಕಾರಣ ಅದು ಪುರುಷಪ್ರಧಾನ ಸಮಾಜವನ್ನು ಬಿಂಬಿಸುತ್ತದೆ, ತತ್ಕಾರಣ ಸ್ತ್ರೀಯರಿಗೆ ಅನ್ಯಾಯವಾದಂತೆ. ಮಕ್ಕಳಲ್ಲಿ ಈ ರೀತಿಯ ಭೇದಭಾವಗಳನ್ನು ಬಿತ್ತುವುದು ಅಕ್ಷಮ್ಯ ಅಪರಾಧ. ಕೊಟ್ಯಾಂಜೆಂಟನ್ನು ಕಾಟ್ ಎಂದು ಬಳಸುವುದೂ ಸಹ ಮಂಚವನ್ನು ನೆನಪಿಸುವುದರಿಂದಲೂ, ಅನೇಕ ಜಗದ್ಗುರುಗಳು, ದೊಡ್ಡ ಕುಳಗಳು ಕಾಟ್‌ನಲ್ಲೇ ಕಾಟ್ (caught) ಆಗುವುದು ಹನಿ ಟ್ರ್ಯಾಪ್ ಆದುದರಿಂದಲೂ ಅದು ಕ್ರೈಮ್ ಲೈಫನ್ನು ಬಿಂಬಿಸುತ್ತದೆ. ಕ್ರೈಮ್ ತರಗತಿಗಳ ಪಠ್ಯವಾದರೆ ವಿದ್ಯಾರ್ಥಿಗಳ ಜೀವನದ ಗತಿಯೇ ಬದಲಾಗುತ್ತದೆ. ಇದನ್ನು ಹಾತಸಂ ಉಗ್ರವಾಗಿ ಖಂಡಿಸಲೇಬೇಕು" ಎಂದು ಗುಡುಗಿದ ಕಾ.ಕಾ.

"ಬಯಾಲಜಿಯಲ್ಲಿ ಹೃದಯದ ಬಗ್ಗೆ ತಿಳಿಸಿಕೊಡುವುದು ಸಮಂಜಸವೇ ಆದರೂ ಹೃದಯದ ಚಿತ್ರವನ್ನು ಬ್ಯಾನ್ ಮಾಡಲೇಬೇಕು" ಎಂದ ಸನಾತನಿ ಸರವಣ.

"ಏಕೆ?"

"ಹೃದಯದ ಚಿತ್ರವನ್ನು ಲವ್ ಸಿಂಬಲ್ ಆಗಿ ಬಳಸುತ್ತಾರೆ. ಆ ಸಿಂಬಲ್ಲು ಫೆಬ್ರವರಿ 14ಕ್ಕೆ ಸಂಬಂಧಿಸಿದ್ದೆಂದು ಇಂದಿನ ಪಡ್ಡೆಗಳ ಅಭಿಪ್ರಾಯ. ವ್ಯಾಲೆಂಟೈನ್ ವಿದೇಶಿ ಪದ್ಧತಿ. ನಮ್ಮದು ಪ್ರೇಮಕಾಮಗಳಿಗೆ ಫುಲ್‌ಸ್ಟಾಪ್ ಇಡುವ ಪದ್ಧತಿ. ವಿದೇಶೀಯರದು ಕಾಮಪ್ರೇಮಗಳಿಗೆ ಕಾಮಾ ಹಾಕುವ ಇರಾದೆ. ಪ್ರೇಮಕಾಮಗಳು ಬದುಕಿನಲ್ಲಿ ತಪ್ಪಲ್ಲವಾದರೂ ಹೈಸ್ಕೂಲಿನಲ್ಲಿಯೇ ಅದರ ವಾಸನೆಯನ್ನು ಹರಡುವುದು ತಪ್ಪು. ಆದ್ದರಿಂದ ಹೃದಯದ ಚಿತ್ರವಿಲ್ಲದೆಯೇ ಹೃದಯದ ಬಗ್ಗೆ ಪಾಠವನ್ನು ಮಾಡಲೆಂದು ಹಾತಸಂ ಆಗ್ರಹಿಸಲಿ" ಎಂದ ಸ.ಸ.

"ನಿಮ್ಮದು ಶುದ್ಧ ಹುಚ್ಚುಮಾತು ಸರವಣ. ಚಿತ್ರವೇ ಇಲ್ಲದೆ ಹೃತ್ಕರ್ಣ, ಹೃತ್ಕುಕ್ಷಿಗಳನ್ನು ಸೂಚಿಸುವುದು ಹೇಗೆ?" ಎಂದ ಕಾ.ಕಾ.

"ಆ ಹೆಸರುಗಳೂ ಸರಿಯಿಲ್ಲ. ಕುಕ್ಷಿ ಎನ್ನುವುದು ನಿರಕ್ಷರಕುಕ್ಷಿ ಎನ್ನುವುದನ್ನೇ ನೆನಪಿಗೆ ತರುತ್ತದೆ. ಅದು ಅನಕ್ಷರಸ್ಥರ ಬಗ್ಗೆ ಸಮಾಜವು ತೋರುವ ಕೀಳುಭಾವವನ್ನು ಬಿಂಬಿಸುತ್ತದೆ. ಹೃತ್ಕರ್ಣದಲ್ಲಿರುವ ಕರ್ಣವೂ ಮಹಾಭಾರತದ ಕರ್ಣನನ್ನು ಬಿಂಬಿಸುವುದೆಂದು ನನ್ನ ಅಭಿಮತ. ಮದುವೆಗೆ ಮುಂಚೆಯೇ ಹುಟ್ಟಿದ ಮಗುವಿನ ಹೆಸರನ್ನು ಹೈಸ್ಕೂಲಿನ ಹುಡುಗರ ಕಿವಿಯ ಮೇಲೆ ಹಾಕುವುದು ನನಗಂತೂ ಸರಿಕಾಣದು. ಹೃದಯದ ಈ ಭಾಗಗಳಿಗೂ ಬೇರೆ ಹೆಸರಿಡದಿದ್ದರೆ ಈ ಅಧ್ಯಾಯವನ್ನೂ ನಿಷೇಧಿಸುವುದೇ ಉತ್ತಮ." ಅಭಿಪ್ರಾಯಿಸಿದ ಸ.ಸ.

"ಕರ್ಣನ ಹೆಸರೆತ್ತಿದರೆ ನನಗೆ ರಸಾಯನದ್ದೇ ನೆನಪು. ಪಂಪನು ಭಾರತವನ್ನು 'ಕರ್ಣರಸಾಯನಮಲ್ತೆ' ಎಂದಿರುವುದೇ ಇದರ ಹಿನ್ನೆಲೆ. ಅಲ್ಲದೆ ಕೆಮಿಸ್ಟ್ರಿಯ ಬಗ್ಗೆ ಮಾತನಾಡಿದವರೂ ಅದನ್ನು ರಸಾಯನಶಾಸ್ತ್ರ ಎಂದರು. ರಸಾಯನ ಎಂದರೆ ಪಂಚಾಮೃತ. ಫಲಾಮೃತಗಳು ನೆನಪಾಗುತ್ತವೆ. ಅವೆರಡು ನೆನಪಾದಾಗ ಮಠಗಳ ನೆನಪಾಗುತ್ತದೆ. ಹೀಗೆ ಒಂದು ಧರ್ಮಕ್ಕೆ ಸೇರಿದ ಪೂಜಾಗೃಹವನ್ನು ನೆನಪಿಸುವ ರಸಾಯನ ಎಂಬ ಪದವು ಜಾತ್ಯತೀತತೆಯನ್ನು ಬಿಂಬಿಸುವುದಕ್ಕೆ ಅಡಚಣೆ ಉಂಟು ಮಾಡೀತೆಂದು ನನ್ನ ಮನ ಅಂಜುತ್ತಿದೆ. ತತ್ಕಾರಣ ಕೆಮಿಸ್ಟ್ರಿಗೆ ಕನ್ನಡದಲ್ಲಿ ಹೊಸ ಹೆಸರಿಡಬೇಕು, ಅದುವರೆಗೆ ಆ ವಿಷಯವನ್ನೇ ಬ್ಯಾನ್ ಮಾಡಬೇಕು" ಎಂದ ಪ್ರಾಚೀನಂ ಪಾಪಯ್ಯ.

"ಹಾಗೆ ನೋಡಿದರೆ ಸಮಾಜ ವಿಜ್ಞಾನ ಎನ್ನುವ ವಿಷಯವೇ ನಮಗೆ ಅನ್ವಯವಾಗದು. ಜಾತ್ಯಾಧಾರಿತವಾಗಿ ಓಟ್ ಮಾಡುವ, ಸಂಘ ಕಟ್ಟುವ, ಮೀಸಲು ಬೇಡುವ ನಾವು ವಿಜ್ಞಾನದಿಂದ ಬಹಳ ದೂರ ಇದ್ದೇವೆ. ಆದ್ದರಿಂದ ಸಮಾಜವೇ ಬೇರೆ, ವಿಜ್ಞಾನವೇ ಬೇರೆ" ಎಂದು ಆರಂಭಿಸಿದ ಕಾ.ಕಾ.

ಅಷ್ಟರಲ್ಲಿ ಸಮೀಪದ ಸಿನೆಮಾ ಮಂದಿರವು ಬಿಟ್ಟ ಕಾರಣ ಜನಸಮೂಹವು ಫುಟ್‌ಪಾತಿನಲ್ಲಿ ನುಗ್ಗಿಬಂದ ಕಾರಣ ಸ್ಟ್ಯಾಂಡಿಂಗ್ ಕಮಿಟಿಯು ಸ್ಥಾನಪಲ್ಲಟವಾಗಿ ಸಭೆ ಬರ್ಖಾಸ್ತಾಯಿತು.

ಮತಾಂತರ: ಛತ್ತೀಸ್‌ಗಢ ಹೈಕೋರ್ಟಿನ ಮಹತ್ವದ ತೀರ್ಪು

ಅರವಿಂದ ಶೆಣೈ

ಮತಾಂತರಕ್ಕೆ ಸಂಬಂಧಿಸಿ ಛತ್ತೀಸ್‌ಗಢ ಹೈಕೋರ್ಟ್ ನೀಡಿದ ಮಹತ್ವದ ತೀರ್ಪೊಂದಕ್ಕೆ ತಡೆಯಾಜ್ಞೆ ನೀಡಲು ಕೆಲದಿನಗಳ ಹಿಂದೆ ಸುಪ್ರೀಂಕೋರ್ಟ್ ನಿರಾಕರಿಸಿದ್ದು ಒಂದು ಮಹತ್ವದ ಬೆಳವಣಿಗೆ. ಇದು ಛತ್ತೀಸ್‌ಗಢದ ಕೆಲವು ಗ್ರಾಮ ಪಂಚಾಯತ್‌ಗಳು ಗ್ರಾಮದ ಪ್ರವೇಶದ್ವಾರಗಳಲ್ಲಿ ಭಿತ್ತಿಪತ್ರಗಳನ್ನು ಹಾಕಿದ್ದರ ವಿರುದ್ಧವಾಗಿ ಸಲ್ಲಿಸಲಾಗಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪಾಗಿತ್ತು. ಛತ್ತೀಸ್‌ಗಢದ ಆದಿವಾಸಿ ಪ್ರದೇಶಗಳಲ್ಲಿರುವ ಹಲವು ಗ್ರಾಮ ಪಂಚಾಯತ್‌ಗಳು "ಕ್ರೈಸ್ತ ಮಿಷನರಿಗಳಿಗೆ ಮತ್ತು ಧರ್ಮಗುರುಗಳಿಗೆ ಪ್ರವೇಶವಿಲ್ಲ" ಎಂಬ ಭಿತ್ತಿಪತ್ರಗಳನ್ನು ಗ್ರಾಮದ ಪ್ರವೇಶದ್ವಾರದಲ್ಲಿ ಹಾಕಿದ್ದವು. ಕ್ರೈಸ್ತ ಮಿಷನರಿಗಳು ಆದಿವಾಸಿ ಜನಾಂಗದವರನ್ನು ಮತಾಂತರ ಮಾಡುತ್ತಾರೆ ಎಂಬ ಭೀತಿಯಿಂದ ಅದನ್ನು ತಡೆಯುವ ಉದ್ದೇಶದಿಂದ ಗ್ರಾಮ ಪಂಚಾಯತ್‌ಗಳು ಈ ರೀತಿಯ ಭಿತ್ತಿಪತ್ರ ಹಾಕಿದ್ದವು. ಇದೀಗ ಈ ವಿಷಯವು ಧಾರ್ಮಿಕ ಮತಾಂತರದ ವಿಷಯದ ಕುರಿತಾದ ಚರ್ಚೆಯನ್ನು ಮತ್ತೆ ಮುನ್ನೆಲೆಗೆ ತಂದಿದೆ.

ದಿಗ್ಬಾಲ್ ತಂಡಿ ಎಂಬಾತ ಇಂತಹ ಭಿತ್ತಿಪತ್ರಗಳನ್ನು ತೆಗೆಸಬೇಕೆಂದು ಕೋರಿ ಛತ್ತೀಸ್‌ಗಢ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದ. ಆದರೆ ಹೈಕೋರ್ಟ್ ಅದನ್ನು ನಿರಾಕರಿಸಿ ತೀರ್ಪು ನೀಡಿತ್ತು. ಆ ಬಳಿಕ ಆತ ಸುಪ್ರೀಂಕೋರ್ಟ್‌ನ ಮೊರೆ ಹೋಗಿದ್ದ. ಸುಪ್ರೀಂಕೋರ್ಟ್ ಕೂಡಾ ಈಗ ಆತನ ಮನವಿಯನ್ನು ತಿರಸ್ಕರಿಸಿದೆ. ತಂಡಿಯ ಮೂಲ ಅರ್ಜಿಯನ್ನು 2025ರ ಅಕ್ಟೋಬರ್‌ನಲ್ಲಿ ತಿರಸ್ಕರಿಸಿ ತೀರ್ಪು ನೀಡಿದ್ದ ಹೈಕೋರ್ಟ್, ಮತಾಂತರದ ಕುರಿತಂತೆ ಕೆಲವು ಮಹತ್ವದ ಅಂಶಗಳನ್ನು ಉಲ್ಲೇಖಿಸಿದೆ. ಇಬ್ಬರು ಸದಸ್ಯರನ್ನೊಳಗೊಂಡ ನ್ಯಾಯಪೀಠವು ತನ್ನ ಆದೇಶದಲ್ಲಿ "ಆದಿವಾಸಿ ಜನಾಂಗದವರನ್ನು ಬಲವಂತದಿಂದ ಅಥವಾ ಆಮಿಷದಿಂದ ಮತಾಂತರ ಮಾಡದಂತೆ ತಡೆಯುವ ಉದ್ದೇಶದಿಂದ ಗ್ರಾಮಪಂಚಾಯತ್‌ಗಳು ಹಾಕಿರುವಂತಹ ಭಿತ್ತಿಪತ್ರಗಳನ್ನು ಅಸಾಂವಿಧಾನಿಕ ಎಂದು ಹೇಳುವಂತಿಲ್ಲ. ದೇಶೀ ಆದಿವಾಸಿ ಪಂಗಡಗಳ ಹಿತಾಸಕ್ತಿಯನ್ನು ಮತ್ತು ಸ್ಥಳೀಯ ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವ ಉದ್ದೇಶದಿಂದ ಗ್ರಾಮ ಪಂಚಾಯತ್‌ಗಳು ಇಂತಹ ಭಿತ್ತಿಪತ್ರಗಳನ್ನು ಹಾಕಿರುವಂತೆ ತೋರುತ್ತದೆ" ಎಂದು ಹೇಳಿತು.

ಮತಾಂತರದ ಕುರಿತಂತೆಯೂ ಹೈಕೋರ್ಟ್ ಹಲವು ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. "ಧಾರ್ಮಿಕ ಮತಾಂತರಗಳು ಬಹುಕಾಲದಿಂದಲೇ ಭಾರತದ ಸಾಮಾಜಿಕ-ರಾಜಕೀಯ ಪರಿಸರದಲ್ಲಿ ಅತ್ಯಂತ ಸೂಕ್ಷ್ಮ ಸಂವೇದಿ ವಿಷಯಗಳಾಗಿವೆ. ಕ್ರೈಸ್ತ ಮಿಷನರಿಗಳು ಬಡ ಮತ್ತು ಅನಕ್ಷರಸ್ಥ ಆದಿವಾಸಿಗಳನ್ನು ಮತ್ತು ಗ್ರಾಮೀಣ ಪ್ರದೇಶದ ಜನರನ್ನು ಮತಾಂತರ ಮಾಡುವ ವಿಷಯಗಳು ಬಹಳಷ್ಟು ವಿವಾದಗಳನ್ನು ಸೃಷ್ಟಿಸಿದೆ. ಸಂವಿಧಾನವು ಪ್ರತಿಯೊಬ್ಬರಿಗೂ ತಮ್ಮ ತಮ್ಮ ಧರ್ಮವನ್ನು ಆಚರಿಸುವ ಮತ್ತು ಪ್ರತಿಪಾದಿಸುವ ಸ್ವಾತಂತ್ರ್ಯವನ್ನು ನೀಡಿದೆಯಾದರೂ ಈ ಸ್ವಾತಂತ್ರ್ಯವನ್ನು ಬಲಪ್ರಯೋಗ, ಆಮಿಷ ಮತ್ತು ವಂಚನೆಯಿಂದ ದುರುಪಯೋಗ ಮಾಡುತ್ತಿರುವ ಬಹಳಷ್ಟು ಪ್ರಸಂಗಗಳು ಸಂಭವಿಸಿವೆ. ಇದು ಅತ್ಯಂತ ಕಳವಳಕಾರಿ ವಿಷಯವಾಗಿದೆ. ಸಾಮೂಹಿಕ ಮತಾಂತರ ಅಥವಾ ಉದ್ದೇಶಪೂರಿತ ಮತಾಂತರ ಕಾರ್ಯಗಳು ಸಾಮಾಜಿಕ ಸೌಹಾರ್ದತೆಯನ್ನು ಹಾಳುಗೆಡಹುವುದಷ್ಟೇ ಅಲ್ಲದೇ ದೇಶೀ ಸಮುದಾಯಗಳ ಸಾಂಸ್ಕೃತಿಕ ಅಸ್ಮಿತೆಗೆ ದೊಡ್ಡ ಸವಾಲೂ ಆಗಿದೆ" ಎಂದು ಹೈಕೋರ್ಟ್ ಅಭಿಪ್ರಾಯಿಸಿದೆ.

> ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಎಂದರೆ ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವೆಂದು ಅರ್ಥವಲ್ಲ ಎಂದು ನ್ಯಾಯಾಲಯವು ಸ್ಪಷ್ಟಪಡಿಸಿದೆ.

"ಭಾರತದಲ್ಲಿ ವಸಾಹತುಶಾಹಿ ಕಾಲದಿಂದಲೇ ಮಿಷನರಿ ಚಟುವಟಿಕೆಗಳು ನಡೆಯುತ್ತಿವೆ. ಕ್ರೈಸ್ತ ಸಂಘಟನೆಗಳು ಶಾಲೆ, ಆಸ್ಪತ್ರೆ ಸ್ಥಾಪಿಸಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅವನ್ನು ಆರಂಭದಲ್ಲಿ ಸಾಮಾಜಿಕ ಏಳಿಗೆ, ಸಾಕ್ಷರತೆ ಉದ್ದೇಶಕ್ಕಾಗಿ ಬಳಸಿಕೊಂಡರೂ ನಂತರ ಕಾಲಕ್ರಮೇಣ ಇದೇ ವೇದಿಕೆಯನ್ನು ಮತಾಂತರ ಉದ್ದೇಶಗಳಿಗಾಗಿ ಬಳಸಿಕೊಂಡಿವೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳು, ಅದರಲ್ಲಿಯೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡದವರು ಉತ್ತಮ ಜೀವನ ನಿರ್ವಹಣೆ ಮತ್ತು ಸಮಾನತೆಯ ಆಮಿಷಕ್ಕೊಳಗಾಗಿ ದೊಡ್ಡ ಪ್ರಮಾಣದಲ್ಲಿ ಮತಾಂತರಗೊಂಡಿದ್ದಾರೆ. ಒಂದು ಕಾಲದಲ್ಲಿ ಸೇವೆಯೆಂದು ಕಂಡು ಬಂದ ಮಿಷನರಿಗಳ ಕಾರ್ಯಗಳು ಬಳಿಕ ಧಾರ್ಮಿಕ ಮತಾಂತರ ಮತ್ತು ಧಾರ್ಮಿಕ ವಿಸ್ತರಣೆಗೆ ಸಾಧನವಾಗಿ ಬಳಸಲ್ಪಟ್ಟಿವೆ" ಎಂದು ನ್ಯಾಯಾಲಯ ಹೇಳಿತು.

"ಮತಾಂತರವೆಂಬುದು ಒಬ್ಬನ ವೈಯಕ್ತಿಕ ನಂಬಿಕೆಯಿಂದ ನಡೆಯುವ ಬದಲಾಗಿ, ಆಮಿಷ, ಶೋಷಣೆ ಮತ್ತು ಆತನ ದೌರ್ಬಲ್ಯದ ದುರುಪಯೋಗದಿಂದ ನಡೆಯುವಾಗ ಅದು ಪಿಡುಗಾಗಿ ಬದಲಾಗುತ್ತದೆ. ಕೆಲವು ಆದಿವಾಸಿ ಪ್ರದೇಶಗಳಲ್ಲಿ ಮಿಷನರಿಗಳು ಅನಕ್ಷರಸ್ಥ ಮತ್ತು ಬಡ ಕುಟುಂಬಗಳನ್ನೇ ಗುರಿಯಾಗಿಸಿಕೊಂಡು ಅವರಿಗೆ ಹಣದ ಮತ್ತು ಉಚಿತ ಶಿಕ್ಷಣದ ಆಮಿಷವೊಡ್ಡಿ ಅವರನ್ನು ಮತಾಂತರಗೊಳಿಸಿದ್ದಾರೆ. ಮತಾಂತರವಾದರೆ ಮಾತ್ರ ಇಂತಹ ಸೌಲಭ್ಯ ನೀಡುವುದಾಗಿ ಅವರು ಹೇಳುತ್ತಿದ್ದಾರೆ. ಇಂತಹ ಕ್ರಮಗಳು ಇಚ್ಛಿತ ಧಾರ್ಮಿಕ ನಂಬಿಕೆಯನ್ನು ಅನುಸರಿಸುವ ಸ್ಫೂರ್ತಿಗೆ ವಿರುದ್ಧವಾಗಿವೆ ಹಾಗೂ ಇದು ಸಾಂಸ್ಕೃತಿಕ ಬಲಪ್ರಯೋಗವೆಂದೇ ಭಾವಿಸಬೇಕಾಗುತ್ತದೆ. ಈ ಪ್ರಕ್ರಿಯೆಗಳು ಆದಿವಾಸಿ ಪಂಗಡಗಳೊಳಗೇ ಸಾಮಾಜಿಕ ವಿಭಜನೆಗಳಿಗೆ ಕಾರಣವಾಗಿದೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಆದಿವಾಸಿಗಳು ನೂತನ ಸಾಂಸ್ಕೃತಿಕ ಆಚರಣೆಗಳಲ್ಲಿ ತೊಡಗಿಕೊಂಡಿರುವ ಹಾಗೂ ತಮ್ಮ ಮೂಲ ಪಾರಂಪರಿಕ ಆಚರಣೆಗಳಿಂದ ಮತ್ತು ಉತ್ಸವಗಳಿಂದ ದೂರ ಸರಿದಿರುವ ನಿದರ್ಶನಗಳು ಕಂಡುಬಂದಿವೆ. ಈ ಕಾರಣದಿಂದಾಗಿ ಗ್ರಾಮಗಳು ಎರಡು ವರ್ಗಗಳಾಗಿ ಧ್ರುವೀಕರಣಗೊಂಡಿವೆ. ಇಂತಹ ಗ್ರಾಮಗಳಲ್ಲಿ ಉದ್ವಿಗ್ನತೆ ಹೆಚ್ಚಿದೆ. ಸಾಮಾಜಿಕ ಬಹಿಷ್ಕಾರ, ಸಂಘರ್ಷಗಳೂ ನಡೆದಿವೆ" ಎಂದು ನ್ಯಾಯಾಲಯವು ನುಡಿದಿದೆ.

25ನೇ ವಿಧಿ ಮತ್ತು ಮತಾಂತರ

ಮತಾಂತರ ವಿರೋಧಿ ಕಾನೂನುಗಳನ್ನು ಟೀಕಿಸುವ ಜನರು ಇದು ಸಂವಿಧಾನದ 25ನೇ ವಿಧಿಯ ಉಲ್ಲಂಘನೆ ಎಂದು ವಾದಿಸುತ್ತಾರೆ. ಸಂವಿಧಾನದ ಪ್ರಕಾರ ಪ್ರತಿಯೊಬ್ಬರಿಗೂ ತಮ್ಮದೇ ಆದ ಧಾರ್ಮಿಕ ವಿಧಿಗಳನ್ನು ಅನುಸರಿಸುವ ಮತ್ತು ಪ್ರಚಾರ ಮಾಡುವ ಸ್ವಾತಂತ್ರ್ಯವಿದೆಯೆಂದು ಅವರು ಪ್ರತಿಪಾದಿಸುತ್ತಾರೆ. ಆದರೆ ಈ ವಿಷಯವನ್ನು 5 ದಶಕಗಳ ಹಿಂದೆಯೇ ಸುಪ್ರೀಂಕೋರ್ಟ್ ಇತ್ಯರ್ಥಪಡಿಸಿದೆ. ಛತ್ತೀಸ್‌ಗಢ ಹೈಕೋರ್ಟ್ ಕೂಡಾ ಈ ವಿಷಯದಲ್ಲಿ ಕೆಲವು ಉಲ್ಲೇಖಗಳನ್ನು ಮಾಡಿದ್ದು, ರೆವೆರೆಂಡ್ ಸ್ಟಾನಿಸ್ ಲಾಸ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿದ್ದ ತೀರ್ಪಿನ ಅಂಶಗಳನ್ನು ಉಲ್ಲೇಖಿಸಿದೆ. ಈ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಧಾರ್ಮಿಕ ಮತಾಂತರದ ಹಕ್ಕು ಒಂದು ಮೂಲಭೂತ ಹಕ್ಕು ಹೌದೇ ಎಂಬುದನ್ನು ವಿವೇಚಿಸಿತ್ತು.

ಸು.ಕೋರ್ಟ್ ರೆ. ಸ್ಟಾನಿಸ್‌ಲಾಸ್ ಮತ್ತು ಮಧ್ಯಪ್ರದೇಶ ಸರಕಾರದ ನಡುವಿನ ಪ್ರಕರಣದಲ್ಲಿ ಈ ತೀರ್ಪು ನೀಡಿತ್ತು. 1977ರಲ್ಲಿ ರೆ. ಸ್ಟಾನಿಸ್ ಲಾಸ್ ಅವರು ಮಧ್ಯಪ್ರದೇಶ ಮತ್ತು ಒಡಿಸ್ಸಾದ 'ಮತಾಂತರ ನಿಷೇಧ ಕಾನೂನ'ನ್ನು ಪ್ರಶ್ನಿಸಿ ಕೋರ್ಟಿಗೆ ಹೋಗಿದ್ದರು. ಈ ಕಾನೂನು ಸಂವಿಧಾನದ 25ನೇ ವಿಧಿಯಲ್ಲಿ ಕೊಡಮಾಡಲಾಗಿರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಮೊಟಕುಗೊಳಿಸುತ್ತದೆ ಎಂಬುದು ಅವರ ವಾದವಾಗಿತ್ತು. ಇದಕ್ಕುತ್ತರವಾಗಿ ಸುಪ್ರೀಂಕೋರ್ಟ್ "ಧಾರ್ಮಿಕತೆಯನ್ನು ಪ್ರಚುರಪಡಿಸುವ ಹಕ್ಕು ಎಂದರೆ ಒಬ್ಬನನ್ನು ತನ್ನ ಧರ್ಮಕ್ಕೆ ಮತಾಂತರ ಮಾಡಲು ಇರುವ ಹಕ್ಕು ಎಂಬುದಾಗಿ ಅರ್ಜಿದಾರರು ವಾದಿಸುತ್ತಿದ್ದಾರೆ. ಆ ಮೂಲಕ ಅವರು ಮತಾಂತರ ಮಾಡುವುದು ಸಂವಿಧಾನದ 25ನೇ ವಿಧಿ ನೀಡಿರುವ ಸ್ವಾತಂತ್ರ್ಯ ಎಂಬುದಾಗಿಯೂ ವಾದಿಸುತ್ತಿದ್ದಾರೆ. ಈ ವಿಷಯದಲ್ಲಿ ನಾವು ಸ್ಪಷ್ಟಪಡಿಸುವುದೇನೆಂದರೆ ಸಂವಿಧಾನದ 25ನೇ ವಿಧಿಯಲ್ಲಿ ನೀಡಲಾಗಿರುವ 'ಧಾರ್ಮಿಕತೆ ಪ್ರಚುರಪಡಿಸುವ ಹಕ್ಕು' ಎಂದರೆ ಅದು ಇನ್ನೊಬ್ಬರನ್ನು ಮತಾಂತರ ಮಾಡಲು ನೀಡಲಾಗಿರುವ ಸ್ವಾತಂತ್ರ್ಯ ಎಂದಲ್ಲ. ಸಂವಿಧಾನದ 25ನೇ ವಿಧಿಯು ಪ್ರತಿಯೊಬ್ಬರಿಗೂ ಅವರ 'ಅಸ್ಮಿತೆಯ ಸ್ವಾತಂತ್ರ್ಯ'ವನ್ನು ನೀಡಿದೆಯೇ ಹೊರತು, ಕೇವಲ ಒಂದು ಧರ್ಮವನ್ನು ಅನುಸರಿಸುವುದಷ್ಟೇ ಒಬ್ಬಾತನ ಹಕ್ಕಲ್ಲ. ಆದ್ದರಿಂದ ಒಬ್ಬ ವ್ಯಕ್ತಿ ತಾನಾಗಿ ಬೇರೆ ಧರ್ಮಕ್ಕೆ ಮತಾಂತರ ಮಾಡುವುದನ್ನು ಸಮರ್ಥಿಸಬಹುದಾದರೂ, ಇನ್ನೊಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯನ್ನು ತನ್ನ ಧರ್ಮಕ್ಕೆ ಮತಾಂತರವಾಗುವಂತೆ ಪ್ರೇರೇಪಿಸುವಂತಿಲ್ಲ. ಹಾಗಾಗಿ ಬೇರೆಯವರನ್ನು ಮತಾಂತರ ಮಾಡುವ ಸ್ವಾತಂತ್ರ್ಯವನ್ನು ಸಂವಿಧಾನವು ನೀಡಿಲ್ಲ. ಹಾಗೆ ಮಾಡುವುದು ಒಬ್ಬಾತನ ಅಸ್ಮಿತೆಯ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಂತೆ " ಎಂಬುದಾಗಿ ನ್ಯಾಯಾಲಯವು ಅಭಿಪ್ರಾಯಿಸಿತ್ತು.

ಈ ಹಿನ್ನೆಲೆಯಲ್ಲಿ ಛತ್ತೀಸ್‌ಗಢದ ಆದಿವಾಸಿ ಪ್ರದೇಶಗಳ ಗ್ರಾಮಗಳು ತಮ್ಮ ಧಾರ್ಮಿಕ ಮತ್ತು ಪಾರಂಪರಿಕ ಅಸ್ಮಿತೆಯನ್ನು ಉಳಿಸಿಕೊಳ್ಳುವ ಸಲುವಾಗಿ ಕ್ರೈಸ್ತ ಮಿಷನರಿಗಳು ತಮ್ಮ ಗ್ರಾಮಗಳಿಗೆ ಪ್ರವೇಶಿಸದಂತೆ ನಿರ್ಬಂಧ ಹೇರುವ ಭಿತ್ತಿಪತ್ರಗಳನ್ನು ಹಾಕಿರುವುದು ಸರಿಯಾಗಿಯೇ ಇದೆ. ಆಮಿಷ ಮತ್ತು ಬಲಾತ್ಕಾರದಿಂದ ಮತಾಂತರ ಮಾಡುವುದು ತಪ್ಪೆಂಬುದನ್ನು ಈಗ ನ್ಯಾಯಾಲಯವೂ ಎತ್ತಿ ಹಿಡಿದಂತಾಗಿದೆ.

ನೌಕರಿ ಕ್ರಾಂತಿಗೆ ಸಿಕ್ಕ ದೊಡ್ಡ ಜಯ

ಪೃಥ್ವಿರಾಜ್ ಕುಲಕರ್ಣಿ

ಧಾರವಾಡದಲ್ಲಿ ನಿಬ್ಬೆರಗಾಗಿಸುವ ಪ್ರತಿಭಟನೆಯೊಂದು ನಡೆದಿದೆ. ದೇಶದ ವ್ಯವಸ್ಥೆಯನ್ನೇ ಗಾಬರಿಗೊಳಿಸಿದೆ. ಇದು ಒಂದು ಧರ್ಮಕ್ಕೆ, ಜಾತಿಗೆ ಅಥವಾ ಪ್ರಾಂತ್ಯಕ್ಕೆ ಸೀಮಿತವಾಗಿರದ ಹೋರಾಟವಾಗಿದ್ದು ರಾಜಕಾರಣಕ್ಕೆ ದೊಡ್ಡ ಪ್ರಶ್ನೆಯಾಗಿದೆ. ಇಷ್ಟು ದಿನ ತಮ್ಮ ಮೀಸಲಾತಿಗಾಗಿಯೋ, ತಮ್ಮ ಧರ್ಮದ ಹೋರಾಟದಲ್ಲೋ ಇದೇ ಯುವಕರು ಕಾಣಿಸಿಕೊಳ್ಳುತ್ತಿರುವಾಗ ಅವರ ಬಾಯಿ ಮುಚ್ಚಿಸಲು ಸರ್ಕಾರ ಯೋಜನೆಗಳನ್ನು ಹಾಕಿಕೊಳ್ಳುತ್ತಿತ್ತು. ಆಶ್ವಾಸನೆ, ಭರವಸೆಗಳನ್ನು ನೀಡುತ್ತಿತ್ತು. ಈಗ ಅವರ ಹೋರಾಟದ ಬಳಿಕ, ಸರ್ಕಾರ ಎಚ್ಚೆತ್ತು ಇತ್ತೀಚೆಗಷ್ಟೇ ನಡೆದ ಸಚಿವ ಸಂಪುಟ ಸಭೆಯಲ್ಲಿ 52 ಸಾವಿರ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನಿರ್ಧಾರ ತೆಗೆದುಕೊಂಡು ಘೋಷಣೆಯನ್ನೂ ಮಾಡಿದೆ. ಹೀಗಾಗಿ, ಯುವಕರ ಹೋರಾಟಕ್ಕೆ ಒಂದು ಬಲ ಬಂದಂತಾಗಿದೆ.

ನಮ್ಮ ಶಾಲೆಗಳಲ್ಲಿ ಸರ್ಕಾರಿ ಹುದ್ದೆಗಳ ಬಗ್ಗೆ ಅಚ್ಚುಕಟ್ಟಾಗಿ ಅರಿವು ಮೂಡಿಸಲಾಗಿದೆ. ಸರ್ಕಾರಿ ನೌಕರರಿಗೆ ದೇಶದಲ್ಲಿ ಸಿಗುವ ಗೌರವ, ಘನತೆ ಬಗ್ಗೆ ಸ್ಪಷ್ಟವಾಗಿ ಹೇಳಲಾಗಿದೆ. ಆ ಹುದ್ದೆಗೆ ಸರಿಸಾಟಿಯೇ ಇಲ್ಲ, ಯಾವ ದುಡ್ಡಿನಿಂದಲೂ ತುಲನೆ ಮಾಡಲಾಗದ ಶಕ್ತಿ ಸರ್ಕಾರಿ ಅಧಿಕಾರಿಗಳಿಗಿದೆ. ನೌಕರಿ ಪಡೆದುಕೊಂಡರೆ ಅದೇ ಜೀವನದಲ್ಲಿ ಮಾಡಬಹುದಾದ ದೊಡ್ಡ ಸಾಧನೆ ಎಂದು ಹೇಳಲಾಗಿತ್ತು. ಆದರೆ ಸರ್ಕಾರ ಅಂತಹ ಹುದ್ದೆಗಳನ್ನು ಮುಚ್ಚಿಟ್ಟುಕೊಂಡಿರುವ ವಿಚಾರ ಬಹಿರಂಗವಾಗಿ ಹೊರಬೀಳುತ್ತಿದೆ. ಇದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ.

ಸರ್ಕಾರಿ ಪರೀಕ್ಷೆ ಮತ್ತು ಭರ್ತಿ ಮಾಡಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ದೊಡ್ಡ ಕತೆಗಳಿವೆ. ಆ ಕತೆಗಳಿಗೆ ಪಿಎಸ್‌ಐ ಹಗರಣದಂತಹ ದೊಡ್ಡ ತಿರುವುಗಳಿವೆ. ಕಡ್ಡಾಯವಾಗಿ ನಮಗೆ ಸರ್ಕಾರಿ ಹುದ್ದೆಗಳೇ ಬೇಕು, ಬೇರೆ ಪ್ರಯತ್ನಗಳನ್ನೇ ನಾವು ಮಾಡಲ್ಲ ಎಂಬುವವರು ಕರ್ನಾಟಕದಲ್ಲಿ ತುಂಬಿದ್ದಾರೆ. ಅದರಲ್ಲೂ ಉತ್ತರ ಕರ್ನಾಟಕಕ್ಕೆ ಹೋದರೆ ಅಂಥವರು ಮನೆಗೊಬ್ಬರು ಸಿಗುತ್ತಾರೆ. ಧಾರವಾಡದಂತಹ ನಗರಗಳಲ್ಲಿ ಸ್ಪರ್ಧಾತ್ಮಕ ಸಂಸ್ಥೆಗಳ ಭರಾಟೆಯೇ ಇದೆ.

ಆದರೆ ಮತ್ತೊಂದು ದಿಕ್ಕಿನಲ್ಲಿ ನೋಡಿದರೆ ವರ್ಷಾನುಗಟ್ಟಲೆ ಅಧಿಸೂಚನೆಗಳೇ ಬರುತ್ತಿಲ್ಲ, ಭರ್ತಿಯಾಗುತ್ತಿಲ್ಲ ಎಂಬ ಆರೋಪಗಳಿದ್ದವು. ಹೀಗಾಗಿ ನಮ್ಮಲ್ಲಿ ನೌಕರಿ ಕ್ರಾಂತಿಯಾಗುವುದು ಅನಿವಾರ್ಯವಾಗಿತ್ತು. ಸರ್ಕಾರಿ ನೌಕರಿಯನ್ನು ಹುಡುಕಿಕೊಂಡು ಹೋಗುವವರ ಸಂಖ್ಯೆ ನಮ್ಮಲ್ಲಿ ಜಾಸ್ತಿ. ಉತ್ತರ ಕರ್ನಾಟಕದಲ್ಲಿ ತೀರಾ ಹೆಚ್ಚು, ನಮ್ಮೂರಿನವ ಸಾಹೇಬನಾದನಂತೆ ಎಂಬುದೇ ಅವರಿಗೆ ದೊಡ್ಡ ಸಂಭ್ರಮ. ಅಂತಹ ದೊಡ್ಡ ಕನಸು ಮುರಿದು ಬಿದ್ದಾಗ ಅಲ್ಲಿ ಹತಾಶೆ ಸೃಷ್ಟಿಯಾಗುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳ ಉತ್ಸಾಹ, ರೂಢಿ ಮತ್ತು ಕ್ರಿಯಾಶೀಲತೆ ಅಂಥವರನ್ನು ಬೇರೊಂದು ಉದ್ಯೋಗ ಮಾಡಲು ಮನಸ್ಸಿಲ್ಲದಂತೆ ಮಾಡುತ್ತದೆ. ಹೀಗಾದಾಗ ಸಹಜವಾಗಿ ಅಲ್ಲಿ ನಿರುದ್ಯೋಗ ಹುಟ್ಟುತ್ತದೆ. ಇದೇ ನಿರುದ್ಯೋಗವೇ ಆ ಆಕಾಂಕ್ಷಿಗಳ ಮೂಲಕ ಧರ್ಮದ ಹೆಸರಲ್ಲೋ, ಜಾತಿಯ ಹೆಸರಲ್ಲೋ ಅಥವಾ ಇನ್ನ್ಯಾವುದೋ ವಿಚಾರಗಳಲ್ಲಿ ಗದ್ದಲಗಳನ್ನು ಮಾಡುವವರನ್ನು ಹುಟ್ಟಿಸುತ್ತದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಸಾಮಾನ್ಯವಾಗಿ ನಮ್ಮ ರಾಜ್ಯದಲ್ಲಿ ಡಿಗ್ರಿ ಮುಗಿಸಿಕೊಂಡು ಕೂತ ವಿದ್ಯಾರ್ಥಿಗಳ ಮುಂದೆ ಎರಡು ಆಯ್ಕೆಗಳಿರುತ್ತವೆ. ಸರ್ಕಾರಿ ನೌಕರಿಗಾಗಿ ಓದಿಕೊಳ್ಳುವುದು, ಖಾಸಗಿ ಕಂಪನಿಗಳಲ್ಲಿ ಕೆಲಸ ಮಾಡುವುದು. ಡಿಗ್ರಿ ಮುಗಿಸಿ, ಕೆಎಎಸ್, ಐಎಎಸ್ ಮುಂತಾದ ಕುರಿತ ಕೋಚಿಂಗ್ ಮುಗಿಸಿಕೊಂಡು ತಮ್ಮ ಮನೆಯಲ್ಲಿ ಓದಿಕೊಳ್ಳುತ್ತಿರುವ ವಿದ್ಯಾರ್ಥಿಗಳಿಗೆ ವರ್ಷಾನುಗಟ್ಟಲೇ ಭರ್ತಿಗಾಗೀ ಕಾಯುವುದು ದೊಡ್ಡ ಸವಾಲು. ನೋಟಿಫಿಕೇಶನ್‌ಗಳು ಬಂದಾಗ, ವಿದ್ಯಾರ್ಥಿಗಳಿಗೆ ಮೀಸಲಾತಿ ಅಡ್ಡಗೋಡೆಯಾಗಿ ತಡೆಯೊಡ್ಡುತ್ತದೆ. ಅಂತಹದ್ದೇ ಕೆಲವು ವಿದ್ಯಾರ್ಥಿಗಳು ತಮ್ಮ ಕುಟುಂಬಕ್ಕೆ ಸಂಬಂಧಿಸಿದ ವ್ಯಾಪಾರಕ್ಕೆ ಬೀಳುತ್ತಾರೆ. ಕೆಲಸ-ಮನೆ ಮಾಡುವಷ್ಟರಲ್ಲಿ ರಾಜಕೀಯ ಬಾಧೆಗಳು ಅವರನ್ನು ಸೆಳೆಯುತ್ತವೆ. ಇದು ನಿರುದ್ಯೋಗ ಹೆಚ್ಚಿಸುತ್ತದೆ, ದಾಂದಲೆಗಳನ್ನು ಹೆಚ್ಚಿಸುತ್ತದೆ. ಅಂಥವರನ್ನು ನಮ್ಮ ರಾಜಕಾರಣಿಗಳು ಅಚ್ಚುಕಟ್ಟಾಗಿ ಬಳಸಿಕೊಳ್ಳುತ್ತಾರೆ.

ಇನ್ನು ಖಾಸಗಿ ನೌಕರಿಯ ವಿಚಾರಕ್ಕೆ ಬಂದರೆ, ಮಧ್ಯಮ ವರ್ಗದ ಯುವಕರು ತಮ್ಮ ಡಿಗ್ರಿ ಮುಗಿಸಿಕೊಂಡ ತಕ್ಷಣಕ್ಕೆ ಬೆಂಗಳೂರಿಗೆ ಹೊರಡುತ್ತಾರೆ. ನ ಖಾಸಗಿ ಉದ್ಯೋಗ ಮಾಡುವುದಕ್ಕಾಗಿ ತನ್ನೊಂದಿಗೆ ಡಿಗ್ರಿ ಸರ್ಟಿಫಿಕೇಟ್ ತರುವ ಆ ಯುವಕರಿಗೆ ಬೆಂಗಳೂರಿನ ತುಂಬಾ ಆವರಿಸಿಕೊಂಡಿರುವ ಉತ್ತರ ಭಾರತೀಯರು ತೀರಾ ತಲೆ ಕೆಡಿಸುತ್ತಾರೆ. ನಮ್ಮ ಯುವಕರ ನೌಕರಿ ನುಂಗಿ ಹಾಕಿದ್ದಾರೆ. ಅದಕ್ಕೊಂದು ಮಿತಿಯೇ ಇಲ್ಲ, ಅದರ ಬಗ್ಗೆ ದನಿ ಎತ್ತುವವರೂ ಇಲ್ಲ, ಇದೆ ಕಾರಣದಿಂದ ಯಾವುದೋ ಒಂದು ಕಂಪನಿಯ (ಸಾಹೇಬ್) ಆಗಬೇಕೆಂಬ ಯುವಕರ ಕನಸು ಬೆಂಗಳೂರಿನಲ್ಲಿ ತಲೆಗೂದಲಿನ ಜತೆಗೆ ಉದುರಿ ಹೋಗುತ್ತದೆ. ಸ್ವಂತ ರಾಜ್ಯದ ಕಂಪನಿಯನ್ನು ಆಳುವ ಕನ್ನಡಿಗರಿಗಿಂತ ಹಿಂದಿ ಮಾತನಾಡುವ ನಾರ್ತಿಗಳ ಕೆಳಗೆ ದುಡಿಯುವವರೇ ಹೆಚ್ಚಾಗಿದ್ದಾರೆ. ದೊಡ್ಡ ಕಂಪನಿಗಳಲ್ಲಿ ಕೆಲಸ ಬೇಕಾದರೆ ರೆಫರನ್ಸ್ ಬೇಕೇಬೇಕು. ರೆಫರನ್ಸ್ ನಮ್ಮವರಿಗೆ ಬೇರೆ ರಾಜ್ಯದವರಿಗೆ ಯಾಕೆ ಕೊಡ್ತಾರು? ಹಾಗೆಯೇ ಕ್ಯಾಂಪಸ್‌ನಲ್ಲಿ ಅವಕಾಶ ಸಿಗುವುದು ತೀರಾ ಕಷ್ಟ. ವಾಕಿನ್ ಮೂಲಕ ನೌಕರಿ ಪಡೆಯಲಿಕ್ಕೆ ಬೆಂಗಳೂರಿಗೆ ಬಂದವರಿದ್ದಾರೆ. ಆದರೆ ಅಲ್ಲಿ ಸಂದರ್ಶನ ತೆಗೆದುಕೊಳ್ಳುವವರು ನಾರ್ತಿಗಳು!. ಕರವೇ ಅಂತಹ ಕನ್ನಡ ಪರ ಸಂಘಟನೆಗಳು ಕನ್ನಡ ಮಾತನಾಡದಿರುವುದಕ್ಕೆ ಅವರನ್ನು ಥಳಿಸಿರುತ್ತಾರೆ. ಇದೆ ಸಿಟ್ಟು ಇಟ್ಟುಕೊಂಡ ಅವರು ಕನ್ನಡ ಮಾತನಾಡುವ ಅಭ್ಯರ್ಥಿಗಳು ಕಾಣಿಸಿಕೊಂಡರೆ ಸಾಕು ತಳ್ಳಿ ಹಾಕುತ್ತಾರೆ. ಥಳಿಸಲು ಬರುವ ಕನ್ನಡಪರ ಸಂಘಟನೆಗಳು ನೌಕರಿ ಕ್ರಾಂತಿಗೆ ಬಂದರಾ? ಊಹುಂ ಇಲ್ಲ.

ಬೆಂಗಳೂರಿನಲ್ಲಿರುವ ಐಟಿ ಕಂಪನಿಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ಸಿಗಬೇಕು ಎನ್ನುವ ವಿಚಾರ ಹೊಸದೇನಲ್ಲ, ಹಿಂದೆ ನಮ್ಮ ಸರ್ಕಾರ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಕನ್ನಡಿಗರಿಗಾಗಿ ಮೀಸಲಾತಿ ನೀಡುತ್ತೇವೆ ಎಂಬ ಘೋಷಣೆ ಮಾಡಿದ್ದರು. ಆದರೆ ಹಠಾತ್ ನಿಲುವು ಬದಲಿಸಿ ಕೆಲವು ದಿನಗಳಲ್ಲಿ ಚರ್ಚಿಸಿ ಮಾತನಾಡುತ್ತೇವೆ ಎಂದು ಸಮಯ ಕೇಳಿತ್ತು. ದುರಾದೃಷ್ಟವಶಾತ್ 2 ವರ್ಷವಾದರೂ ಆ ಸಮಯ ಮುಗಿದ ಇಲ್ಲ! ನೌಕರಿ ಕ್ರಾಂತಿಯಾಗಬೇಕಿರುವುದಕ್ಕೆ ಹತ್ತಾರು ಕಾರಣಗಳಿವೆ. ಧಾರವಾಡದ ಪ್ರತಿಭಟನೆ ಸರ್ಕಾರಿ ಹುದ್ದೆಗಳಿಗಷ್ಟೇ ಸೀಮಿತವಾಗದೆ ಖಾಸಗಿ ವಿಚಾರದಲ್ಲೂ ದನಿಯಾಗಬೇಕು. ಒಟ್ಟಿನಲ್ಲಿ ನಮ್ಮ ಯುವಕರಿಗೆ ನೌಕರಿ ಸಿಗಬೇಕು. ಇಲ್ಲವಾದರೆ ಅನಾಹುತವಾದೀತು.

ಕಿರುಸುದ್ದಿ

ಸ್ಲೋನ್ ವಾಲ್ವ್ ಹೂಡಿಕೆ, ವಿಸ್ತರಣೆಗೆ ರೂಪುರೇಷೆ

• **ಬೆಂಗಳೂರು:** ಸ್ಲೋನ್ ವಾಲ್ವ್ ಕಂಪನಿಯು ಭಾರತೀಯ ಪ್ಲಂಬಿಂಗ್ ಪರಿಹಾರಗಳ ಮಾರುಕಟ್ಟೆಯ ಮೇಲೆ ಗಮನ ನೀಡಿದ್ದು, ತನ್ನ ಅಂತಾರಾಷ್ಟ್ರೀಯ ಬೆಳವಣಿಗೆಯ ಕಾರ್ಯತಂತ್ರದ ಮೂಲಾಧಾರವಾಗಿ ಉತ್ಪಾದನಾ ಸಾಮರ್ಥ್ಯಗಳು, ಪ್ರಮುಖ ಅನುಭವ ಕೇಂದ್ರ ಮತ್ತು ಜಲ- ಸಮರ್ಥ ತಂತ್ರಜ್ಞಾನಗಳಲ್ಲಿ ಗಮನಾರ್ಹ ಹೂಡಿಕೆಗಳನ್ನು ಬಳಸಿಕೊಂಡು ಭಾರತದಲ್ಲಿ ತ್ವರಿತ ವಿಸ್ತರಣೆಯನ್ನು ಉತ್ತೇಜಿಸುತ್ತಿದೆ ಎಂದು ಸ್ಲೋನ್ ಅಧ್ಯಕ್ಷ ಮತ್ತು ಸಿಇಒ ಜಿಮ್ ಅಲೆನ್ ಹೇಳಿದ್ದಾರೆ. ಇದು ನಾವೀನ್ಯತೆ ಮತ್ತು ಉತ್ಪಾದನೆಗೆ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಅನುಭವ ಕೇಂದ್ರವು ಗ್ರಾಹಕರನ್ನು ನಮ್ಮ ತಂತ್ರಜ್ಞಾನಕ್ಕೆ ಆಹ್ವಾನಿಸುತ್ತದೆ ಮತ್ತು ಉತ್ಪಾದನಾ ವಲಯದ ಶಿಸ್ತು, ಕೌಶಲ ಮತ್ತು ಹೊಣೆಗಾರಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಬಣ್ಣಿಸಿದರು. ಸುಸ್ಥಿರತೆಗೆ ಕಂಪನಿಯ ಬದ್ಧತೆಯನ್ನು ಬಲಪಡಿಸುತ್ತಾ, ಕಾರ್ಯದಲ್ಲಿ ಹೊಣೆಗಾರಿಕೆಯ ಪುರಾವೆಯಾಗಿ ಸೌಲಭ್ಯದ ಎಲ್‌ಇಇಡಿ ಗೋಲ್ಡ್ ಪ್ರಮಾಣೀಕರಣವನ್ನು ಅಲೆನ್ ಗಮನಸೆಳೆದರು. ಗ್ರಾಹಕರ ವಿಶ್ವಾಸಾರ್ಹತೆಗೆ ಅಂತಹ ಮಾನದಂಡಗಳು ನಿರ್ಣಾಯಕವಾಗಿವೆ ಮತ್ತು ಭಾರತದ ಪ್ರಗತಿಪರ ಮೂಲಸೌಕರ್ಯ ಗುರಿಗಳೊಂದಿಗೆ ಹೊಂದಿಕೆಯಾಗುತ್ತವೆ ಎಂದು ಅವರು ಉಲ್ಲೇಖಿಸಿದರು. ನೀರು ಸಮುದಾಯಗಳು ಮತ್ತು ಆರ್ಥಿಕತೆಗಳನ್ನು ಸಂಪರ್ಕಿಸುತ್ತದೆ. ಆ ಸಂಪನ್ಮೂಲವನ್ನು ರಕ್ಷಿಸಲು ಶಿಸ್ತು, ನಾವೀನ್ಯತೆ ಮತ್ತು ದೀರ್ಘಕಾಲೀನ ಚಿಂತನೆಯ ಅಗತ್ಯವಿದೆ. ಸ್ಥಳೀಯ ಪರಿಣತಿ ಮತ್ತು ಸುಧಾರಿತ ತಂತ್ರಜ್ಞಾನದ ಮೂಲಕ ನೀರಿನ ದಕ್ಷತೆಯ ಮಾನದಂಡ ಗಳನ್ನು ಹೆಚ್ಚಿಸಲು ಭಾರತದಲ್ಲಿನ ಅವಕಾಶವನು ಅಲೆನ್ ಹೇಳಿದರು.

ಎಂಟಿಬಿ ಹೆಗಲ ಮೇಲೆ ಹೊತ್ತು ಮೆರೆದ ಅಭಿಮಾನಿ



ತಾವರೆಕೆರೆ: ಹೊಸಕೋಟೆ ತಾಲೂಕಿನ ಕಸಬಾ ಹೋಬಳಿಯ ಕಣ್ಣೂರಹಳ್ಳಿ ಗ್ರಾಮದಲ್ಲಿ ದೇವರ ಕಾರ್ಯಕ್ರಮಕ್ಕೆ ಆಗಮಿಸಿದ ವಿಧಾನ ಪರಿಷತ್ ಸದಸ್ಯ ಎಂಟಿಬಿ ನಾಗರಾಜ್ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು. ಅಭಿಮಾನಿಗಳು ಹೆಗಲಮೇಲೆ ಹೊತ್ತು ಸಂಭ್ರಮಿಸಿದರು.

ದಾರಿ ತಪ್ಪಿದ ವೃದ್ಧೆ: ಪತ್ತೆ ಹಚ್ಚಿದ ಪೊಲೀಸ್

• **ಬೆಂಗಳೂರು:** ವಿವೇಕನಗರದಲ್ಲಿ ದಾರಿ ತಪ್ಪಿ ನೀಲಸಂದ್ರದ ರಸ್ತೆಗಳಲ್ಲಿ ಅಲೆಯುತ್ತಿದ್ದ 80 ವರ್ಷದ ವೃದ್ಧೆ ಆದಿಲಕ್ಷ್ಮಿ ಎಂಬವರನ್ನು ಪೊಲೀಸರು ಪತ್ತೆಹಚ್ಚಿ, ಅವರ ಕುಟುಂಬದವರನ್ನು ಸಂಪರ್ಕಿಸಿ ಸುರಕ್ಷಿತವಾಗಿ ಮಗನ ವಶಕ್ಕೆ ಒಪ್ಪಿಸಿದ್ದಾರೆ. ಜೆ.ಜೆ. ನಗರ ಠಾಣಾ ವ್ಯಾಪ್ತಿಯಲ್ಲಿ ಆಟೋ ರಿಕ್ಷಾದಲ್ಲಿ ಇರಿಸಿದ್ದ ಮೊಬೈಲ್ ಫೋನ್ ಕಳುವಾದ ಬಗ್ಗೆ ದೂರು ಬಂದ ಕೇವಲ 8 ನಿಮಿಷಗಳಲ್ಲಿ ಪೊಲೀಸರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿ, ಆರೋಪಿಯನ್ನು ಬಂಧಿಸಿ ಮೊಬೈಲ್ ಅನ್ನು ಮಾಲೀಕರಿಗೆ ಹಿಂತಿರುಗಿಸಿದ್ದಾರೆ.

ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾಗೆ ನೇಮಕ



• **ಆನೇಕಲ್:** ಬೆಂಗಳೂರು ದಕ್ಷಿಣ ಜಿಲ್ಲೆ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಶ್ವೇತಾರಾಘವೇಂದ್ರ, ಅವರನ್ನು ನೇಮಕ ಮಾಡಿ ನೇಮಕ ಆದೇಶ ಪತ್ರವನ್ನು ಬಿಜೆಪಿ ಜಿಲ್ಲಾಧ್ಯಕ್ಷ ಮತ್ತು ಜಯನಗರ ಕ್ಷೇತ್ರದ ಶಾಸಕ ಸಿ.ಕೆ. ರಾಮಮೂರ್ತಿ ವಿತರಿಸಿದರು. ಇದೇ ಸಂದರ್ಭದಲ್ಲಿ, ನೂತನ ಜವಾಬ್ದಾರಿ ಸ್ವೀಕರಿಸಿದ ಶ್ವೇತಾ ಅವರನ್ನು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುನಿರಾಜುಗೌಡ ಸೇರಿದಂತೆ ಅನೇಕರು ಅಭಿನಂಧಿಸಿದರು.

ದೊಡ್ಡಬಳ್ಳಾಪುರದಲ್ಲಿ ಸಿರಿಧಾನ್ಯ ಹಬ್ಬ-ಕಿಸಾನ್ ಮೇಳ | ಅಪಾರ ಸಂಖ್ಯೆಯಲ್ಲಿ ರೈತರು, ವಿದ್ಯಾರ್ಥಿಗಳು ಭಾಗಿ

ಆರೋಗ್ಯ ವೃದ್ಧಿಸುವ ಶಕ್ತಿ ಸಿರಿಧಾನ್ಯ

• **ದೊಡ್ಡಬಳ್ಳಾಪುರ:** ಸಿರಿಧಾನ್ಯ ಪದಾರ್ಥಗಳಲ್ಲಿ ಆರೋಗ್ಯ ವೃದ್ಧಿಸುವಂತಹ ಶಕ್ತಿ ಅಡಗಿದೆ. ನಮ್ಮ ಆಹಾರ ಪದ್ಧತಿಯಲ್ಲಿ ಸಿರಿಧಾನ್ಯ ಪದಾರ್ಥವನ್ನು ಸೇವನೆ ಮಾಡಿ ಆರೋಗ್ಯ, ಆಯುಸ್ಸು ವೃದ್ಧಿಸಿಕೊಳ್ಳಬೇಕು ಎಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಅವರು ತಾಲ್ಲೂಕಿನ ಮೆಳೇಕೋಟೆ ಪಟ್ಟಣದ ಸರ್ಕಾರಿ ಪ್ರಾಥಮಿಕ ಶಾಲಾ ಆವರಣದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಕೃಷಿ ಇಲಾಖೆ ವತಿಯಿಂದ ಆಯೋಜಿಸಿದ್ದ ಸಿರಿಧಾನ್ಯ ಹಬ್ಬ ಮತ್ತು ಕಿಸಾನ್ ಮೇಳ-2026 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮುಂದಿನ ಪೀಳಿಗೆಗೆ ಗುಣಮಟ್ಟದ ಆಹಾರ ಒದಗಿಸುವುದು ನಮ್ಮೆಲ್ಲರ ಜವಾಬ್ದಾರಿ ಆಗಿರುತ್ತದೆ. ಹಾಗಾಗಿ ಗುಣಮಟ್ಟದ ಆಹಾರ ಉತ್ಪನ್ನವನ್ನು ಬೆಳೆಯಲು ರೈತರು ಸಾವಯವ ಕೃಷಿ ಪದ್ಧತಿಯ ಕಡೆಗೆ ಹೆಚ್ಚಿನ ಆದ್ಯತೆ ನೀಡಿ, ಕೊಟ್ಟಿಗೆ ಗೊಬ್ಬರದ ಸಾವಯವ ಪದ್ಧತಿ ಬಳಸಿ ಆಹಾರ ಉತ್ಪನ್ನಗಳನ್ನು ಬೆಳೆಯಬೇಕು. ರಾಸಾಯನಿಕ ಗೊಬ್ಬರ ಬಳಸಿದರೆ ಆಹಾರ ಉತ್ಪನ್ನಗಳಲ್ಲಿ ತಕ್ಷಣಕ್ಕೆ ರುಚಿ ಕೊಟ್ಟು, ಪೌಷ್ಟಿಕತೆ ಕಡಿಮೆ ಜತೆಗೆ ಆರೋಗ್ಯ ಕ್ಷೀಣಿಸಲು ನಾವೇ ದಾರಿ ಮಾಡಿಕೊಟ್ಟಂತೆ ಎಂದರು. ಸರ್ಕಾರವು ರೈತರ ಉತ್ಪನ್ನಗಳಿಗೆ ಬೆಲೆ ನೀಡಿ, ಉತ್ತಮ ಮಾರುಕಟ್ಟೆ ಕಲ್ಪಿಸುವ ಕೆಲಸ ಮಾಡಬೇಕು. ನಮ್ಮ ರೈತರು ಗುಣಮಟ್ಟದ ಬೆಳೆಗಳು ಬೆಳೆಯುತ್ತಿದ್ದು, ವಿದೇಶಗಳಿಗೆ ಆಹಾರ ಪದಾರ್ಥಗಳು ಹಾಗೂ ಸಿರಿಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಆಗುತ್ತಿದೆ ಎಂದರು.

ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಜಿ ಕಲಾವತಿ ಮಾತನಾಡಿ, ಕೃಷಿ ಇಲಾಖೆಯಿಂದ ಜಿಲ್ಲೆಯ ರೈತರಲ್ಲಿ



ಸಾವಯವ ಪದ್ಧತಿಯಲ್ಲಿ ಬೆಳೆ ಬೆಳೆಯಲು ಸಾಕಷ್ಟು ಜಾಗೃತಿ ಮೂಡಿಸಲಾಗುತ್ತಿದೆ. ಪ್ರತಿ ವರ್ಷ ಸಿರಿಧಾನ್ಯ ಹಬ್ಬ ಹಾಗೂ ಕಿಸಾನ್ ಮೇಳದಂತಹ ಕೃಷಿ ಕಾರ್ಯಕ್ರಮಗಳು ಆಯೋಜಿಸಿ, ಇಲಾಖೆ ಯೋಜನೆ, ಹೊಸ ಕೃಷಿ ಸಂಬಂಧ ಪರಿಕರದ ಪರಿಚಯ ಮಾಡಿಕೊಡಲಾಗುತ್ತಿದೆ. ಜಿಲ್ಲೆಯ ರೈತರು ಇದರ ಸದುಪಯೋಗಪಡೆಯಬೇಕು ಎಂದು ಹೇಳಿದರು. ಸಿರಿಧಾನ್ಯ ಹಬ್ಬ ಹಾಗೂ ಕಿಸಾನ್ ಮೇಳದಲ್ಲಿ ಸಿರಿಧಾನ್ಯದಿಂದ ಅಲಂಕರಿಸಲ್ಪಟ್ಟ ರಂಗೋಲಿಯು ಎಲ್ಲರ ಗಮನ ಸೆಳೆಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿವಿಧ ಭಾಗದಿಂದ ಜನ 'ಸಿರಿಧಾನ್ಯ ಹಾಗೂ ಮರೆತು ಹೋದ ಖಾದ್ಯಗಳ ಸ್ಪರ್ಧೆಯಲ್ಲಿ 45 ಜನ ಮಹಿಳೆಯರು ಭಾಗವಹಿಸಿ, ಪಾಕ ಸ್ಪರ್ಧೆಯಲ್ಲಿ ತಮ್ಮ ಕೈಚಳಕದಿಂದ ತಯಾರಿಸಿದ ರಾಗಿ ಉಪ್ಪಿಟ್ಟು, ಕರದಂಟು, ನವಣೆ ಪಲಾವ್, ಸಜ್ಜೆ ಲಾಡು, ಅಗಸೆಮಜ್ಜಿಗೆ, ಮೆಂತ್ಯೆ ಕಡುಬು ಮತ್ತು ಸಿರಿಧಾನ್ಯಗಳ ಪಾಯಸ ಸೇರಿದಂತೆ ವಿವಿಧ ಖಾದ್ಯಗಳನ್ನು ಪ್ರದರ್ಶಿಸಿದರು. ಪ್ರಥಮ ಬಹುಮಾನ ಹಣಬೆಯ ನಂದಿನಿ ಎರಡನೇ ಬಹುಮಾನ ದೊಡ್ಡಬಳ್ಳಾಪುರದ ಶಮಂತ್ ಹಾಗೂ ಮೂರನೇ ಬಹುಮಾನವನ್ನು ದೇವನಹಳ್ಳಿಯ ನಂದಿನಿ ಪಡೆದುಕೊಂಡರು. ಕಿಸಾನ್ ಮೇಳದಲ್ಲಿ ಹಿಂದಿನ ಕಾಲದಲ್ಲಿ ಪೂರ್ವಿಕರು ದಿನಬಳಕೆ ಮಾಡುತ್ತಿದ್ದ ಪಾರಂಪರಿಕ ವಸ್ತುಗಳು, ಲೋಹಗಳು, ಮಶೀನ್ ಗಳನ್ನು ಸೇರಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ರೇಷ್ಮೆ ಮತ್ತು ಮೀನುಗಾರಿಕೆ ಇಲಾಖೆ ಯೋಜನೆ ಕುರಿತು ಮಾಹಿತಿಯನ್ನೊಳಗೊಂಡ ವಸ್ತು ಪ್ರದರ್ಶನ ಗಮನ ಸೆಳೆಯಿತು. ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ ರೈತರಿಗೆ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಬಯಪ ಅಧ್ಯಕ್ಷ ವಿ.ಶಾಂತಕುಮಾರ್, ಘಾಟಿ ಸುಬ್ರಹ್ಮಣ್ಯ ಪ್ರಾಧಿಕಾರದ ಸದಸ್ಯರಂಗಪ್ಪ , ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ಆರ್. ರವಿಕುಮಾರ್ , ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಮುರುಳಿಧರ್, ಕೃಷಿ ಇಲಾಖೆ ಉಪ ನಿರ್ದೇಶಕಿ ಪಂಕಜ ಎಚ್, ಕೆಪಿಸಿಸಿ ಸದಸ್ಯ ಎಸ್. ಮುನಿರಾಜು, ತೂಬಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿಸಿದ್ದಪ್ಪ, ನಾಲ್ಕು ತಾಲೂಕಿನ ಕೃಷಿಕ ಸಮಾಜದ ಅಧ್ಯಕ್ಷರು, ಜನಪ್ರತಿನಿಧಿಗಳು, ಮುಖಂಡರು ಸೇರಿದಂತೆ ಜಿಲ್ಲೆಯ ರೈತರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು.

ಕೊಟ್ಟಿಗೆ ಗೊಬ್ಬರ ಹೆಚ್ಚಾಗಿ ಬಳಸಿ

ಕೊಟ್ಟಿಗೆ ಗೊಬ್ಬರದ ಸಾವಯವ ಪದ್ಧತಿ ಬಳಸಿ ಆಹಾರ ಉತ್ಪನ್ನವನ್ನು ಬೆಳೆಯಬೇಕು. ರಾಸಾಯನಿಕ ಗೊಬ್ಬರ ಬಳಸಿದರೆ ಆಹಾರ ಉತ್ಪನ್ನಗಳಲ್ಲಿ ತಕ್ಷಣಕ್ಕೆ ರುಚಿ ಕೊಟ್ಟು, ಪೌಷ್ಟಿಕತೆ ಕಡಿಮೆ ಜತೆಗೆ ಆರೋಗ್ಯ ಕ್ಷೀಣಿಸಲು ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ. ಗುಣಮಟ್ಟದ ಆಹಾರ ಉತ್ಪನ್ನವನ್ನು ಬೆಳೆಯಲು ರೈತರು ಸಾವಯವ ಕೃಷಿ ಪದ್ಧತಿಯ ಕಡೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ವಿದೇಶಕ್ಕೂ ಸಿರಿಧಾನ್ಯ ರಫ್ತು

ನಮ್ಮ ರೈತರು ಗುಣಮಟ್ಟದ ಬೆಳೆಗಳು ಬೆಳೆಯುತ್ತಿದೆ. ವಿದೇಶಗಳಿಗೆ ಆಹಾರ ಪದಾರ್ಥಗಳು ಹಾಗೂ ಸಿರಿಧಾನ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲಿ ರಫ್ತು ಆಗುತ್ತಿದೆ. ಸರ್ಕಾರ ರೈತರ ಉತ್ಪನ್ನಗಳಿಗೆ ಬೆಲೆ ನೀಡಿ, ಉತ್ತಮ ಮಾರುಕಟ್ಟೆ ಕಲ್ಪಿಸುವ ಕೆಲಸ ಮಾಡಬೇಕೆಂದು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಕದಿರಿ ಹುಣ್ಣಿಮೆ ಜಾತ್ರಾ ಮಹೋತ್ಸವ



• **ತಾವರೆಕೆರೆ:** ಕಳೆದ 60 ವರ್ಷದಿಂದ ಭಗವಂತಯಂಪ್ರಿನ ಕದಿರಿ ಹುಣ್ಣಿಮೆ ಜಾತ್ರಾ ಮಹೋತ್ಸವದ ವಾರ್ಷಿಕೋತ್ಸವ ಮಾ.2, 3ರಂದು ನಡೆಯಲಿದೆ ಎಂದು ಧರ್ಮದರ್ಶಿ ಚಂದ್ರಶೇಖರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಹೊಸಕೋಟೆ ತಾಲೂಕಿನ ಗೊಟ್ಟಿಪುರ ಗ್ರಾಮದಲ್ಲಿ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯ ಟ್ರಸ್ಟ್ ನಿಂದ ಹಮ್ಮಿಕೊಳ್ಳಲಾಗಿದೆ. ಕಳೆದ ಆರು ವರ್ಷದಿಂದ ಹಿಂದೆ ದಾನಿಗಳ ಸಹಕಾರ ದಿಂದ ಪುನರ್ ನಿರ್ಮಾಣ ಮಾಡಲಾಗಿದೆ. ಅದರ ವಾರ್ಷಿಕೋತ್ಸವದ ಅಂಗವಾಗಿ ಕದಿರಿಹುಣ್ಣಿಮೆ ಜಾತ್ರಾ ಮಹೋತ್ಸವವನ್ನು ಮಾರ್ಚ್ 2ರಿಂದ 3ರಂದು ಹಮ್ಮಿಕೊಳ್ಳಲಾಗಿದೆಂದರು. ಆಗಮಿಕರಾದ ಉಭಯವೇದ ಪರಿವರ್ತಕ ರಾಮಾನುಜ ಪೆರುಮಾಳ್ ಮಾತನಾಡಿ, ಮನುಷ್ಯ ಎಷ್ಟೇ ಗಳಿಸಿದರೂ ಕೂಡ ಆತ್ಮತೃಪ್ತಿ ಶಾಂತಿಗೆ ಭಗವಂತನ ಸೇವೆ ಮಾಡುವುದು ಅತಿಮುಖ್ಯವಾಗಿದೆಂದರು. ಗೊಟ್ಟಿಪುರ ಗ್ರಾಮದಲ್ಲಿ ಕದಿರಿಹುಣ್ಣಿಮೆ ಜಾತ್ರಾ ಮಹೋತ್ಸವದ ಪ್ರಯುಕ್ತ ಮಾ.2ರ ಸೋಮವಾರ ಸಂಜೆ ಗಂಗೆ , ಗೋ ಪೂಜೆ, ಕುಂಭಗಳ ಗ್ರಾಮ ಪ್ರದಕ್ಷಿಣೆ , ಹೋಮ ಮತ್ತು ಮಾ.3ರಂದು ಬೆಳಗ್ಗೆ ಸ್ವಾಮಿಗೆ ಅಭಿಷೇಕ, ಅಲಂಕಾರಗಳೊಂದಿಗೆ ಮಹಾ ಮಂಗಳಾರತಿ, ಮೂರುಸಾವಿರ ಭಕ್ತರಿಗೆ ಮುದ್ದೆ ಊಟದ ಪ್ರಸಾದ ವಿನಿಯೋಗ, ರಾತ್ರಿ 7ಗಂಟೆಗೆ ಮಂಗಳವಾದ್ಯ ವೀರಗಾಸೆಯೊಂದಿಗೆ ಲಕ್ಷ್ಮೀ ನರಸಿಂಹಸ್ವಾಮಿ ಉತ್ಸವ ಮೂರ್ತಿಯ ಮೆರವಣಿಗೆ ಮಾಡಲಾಗುತ್ತದೆ. ಆದ್ದರಿಂದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಭಾಗವಹಿಸಿ ತೀರ್ಥಪ್ರಸಾದವನ್ನು ಸ್ವೀಕರಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ಮನವಿ ಮಾಡಿಕೊಂಡರು.

ಗ್ರಾಪಂ ಸದಸ್ಯ ನಾರಾಯಣಸ್ವಾಮಿ, ಟ್ರಸ್ಟ್ ಸದಸ್ಯರಾದ ಆಂಜಿನಪ್ಪ, ಸುಬ್ಬರಾಜು, ನಾರಾಯಣಪ್ಪ, ಗೌಡರ ಗಣೇಶ್ ವೆಂಕಟರಮಣಪ್ಪ, ಮಂಜುನಾಥ್ ಸೇರಿದಂತೆ ಹಲವರಿದ್ದರು.

ಆಧ್ಯಾತ್ಮಿಕ ಜ್ಯೋತಿಗೆ ಶ್ರೀ ಆದಿಪರಾಶಕ್ತಿ ಭಕ್ತರ ಭಕ್ತಿ ಸಮರ್ಪಣೆ

ತಾವರೆಕೆರೆಯಲ್ಲಿ ಜ್ಯೋತಿ ಮೆರವಣಿಗೆ

• **ತಾವರೆಕೆರೆ:** ಇಲ್ಲಿನ ಆದಿಪರಾಶಕ್ತಿ ಭಕ್ತರಿಂದ 85ನೇ ಆಧ್ಯಾತ್ಮಿಕ ಜ್ಯೋತಿ ಬೀಳ್ಕೊಡುಗೆ ಸಮಾರಂಭ ಗ್ರಾಮದಲ್ಲಿ ಓಂ ಶಕ್ತಿ ಭಕ್ತರಿಂದ ಆರಂಭಗೊಂಡು ವರ್ತೂರಿನ ರಾಜಬೀದಿಯಲ್ಲಿ ಜ್ಯೋತಿಯ ಮೆರವಣಿಗೆ ಮುಖಾಂತರ ಮುಕ್ತಾಯಗೊಳ್ಳಲಿದೆ.

ಕಾರ್ಯಕ್ರಮದ ಆಯೋಜಕ ರವಿಚಂದ್ರ ಮಾತನಾಡಿ, ಆಧ್ಯಾತ್ಮಿಕ ಜ್ಯೋತಿ ಬೀಳ್ಕೊಡುಗೆ ಸಮಾರಂಭ ಪ್ರತಿವರ್ಷವೂ ಗ್ರಾಮದಲ್ಲಿ ಆಯೋಜನೆ ಮಾಡಲಾಗುತ್ತಿದೆಂದರು.

ಆಧ್ಯಾತ್ಮಿಕ ಜ್ಯೋತಿಯು (ದೀಪ) ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಿ ಜ್ಞಾನ, ಶಾಂತಿ, ಮತ್ತು ಸಕಾರಾತ್ಮಕತೆಯನ್ನು ತರುವ ಜ್ಞಾನದ ಸಂಕೇತವಾಗಿದೆ. ಇದು ಮನೆಯಲ್ಲಿ ಸಮೃದ್ಧಿ, ಆರೋಗ್ಯ, ಮತ್ತು ಪವಿತ್ರತೆಯನ್ನು ಹೆಚ್ಚಿಸುತ್ತದೆಂದು ಹೇಳಿದರು. ದೀಪವು ಮನಸ್ಸಿನ ನಕಾರಾತ್ಮಕತೆಯನ್ನು ನಾಶ ಮಾಡಿ ದೈವಿಕ ಶಕ್ತಿಯನ್ನು ಸಂಪರ್ಕಿಸುವ ಮೂಲಕ ಅಹಂಕಾರವನ್ನು ಕರಗಿಸುತ್ತದೆ. ಈ



ಪೂಜಾ ಕಾರ್ಯಕ್ರಮಕ್ಕೆ ತಾವರೆಕೆರೆ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಕೆಲ ಗ್ರಾಮಸ್ಥರು, ತಾಲೂಕಿನ ಕೆಲ ಗ್ರಾಮದವರು ಸೇರಿ ಸುಮಾರು 15ಗ್ರಾಮಕ್ಕೂ ಹೆಚ್ಚಿನ ಭಕ್ತರ ಸಮೂಹದೊಂದಿಗೆ ಪ್ರತಿ ವರ್ಷವೂ ಕಾರ್ಯಕ್ರಮ ನಡೆಯುತ್ತಿದೆಂದರು.

ಅದೇ ರೀತಿ ಶ್ರೀ ಓಂ ಶಕ್ತಿ ತಾಯಿಯ ಅದ್ದೂರಿ ಪಲ್ಲಕ್ಕಿ ಉತ್ಸವದೊಂದಿಗೆ ಜ್ಯೋತಿ ಬೀಳ್ಕೊಡುಗೆ ಸಮಾರಂಭ ನಡೆಯಿತು. ಗ್ರಾಮದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಬಳಿಕ ವರ್ತೂರಿನಲ್ಲಿ ಓಂ ಶಕ್ತಿ ಮಾಲಧಾರಿಗಳು ಹಾಗೂ ಭಕ್ತ ಸಮೂಹ ಸೇರಿ ಆಧ್ಯಾತ್ಮಿಕ ಜ್ಯೋತಿ ಬೀಳ್ಕೊಡುಗೆ ಸಮಾರಂಭಕ್ಕೆ ಸಕಲಪೂಜಾ ಕಾರ್ಯಕ್ರಮದ ಮೂಲಕ ತೆರೆ ಎಳೆಯಲಾಗುತ್ತದೆಂದು ತಿಳಿಸಿದರು. ಗ್ರಾಮದ ಮಹಿಳಾ ಓಂ ಶಕ್ತಿ ಭಕ್ತರು, ಹಿರಿಯ ಓಂ ಶಕ್ತಿ ಸ್ವಾಮೀಜಿ, ಗ್ರಾಮಸ್ಥರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬ್ಲ್ಯಾಕ್ ಸ್ಪಾಟ್ ನಿವಾರಣೆಗೆ ಕಾರ್ಯಾಚರಣೆ

• **ಬೆಂಗಳೂರು:** ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಆರು ವಿಧಾನಸಭಾ ಕ್ಷೇತ್ರಗಳ ವಿವಿಧ ಪ್ರದೇಶಗಳಲ್ಲಿ ವಿಶೇಷ ಸಾಮೂಹಿಕ ಸ್ವಚ್ಛತಾ ಅಭಿಯಾನ ಹಾಗೂ ಬ್ಲ್ಯಾಕ್ ಸ್ಪಾಟ್ ನಿವಾರಣಾ ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ಕೈಗೊಳ್ಳಲಾಗಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದ್ದಾರೆ.

ನಗರದ ವಿವಿಧ ಭಾಗದಲ್ಲಿ ಕಸದ ಸಂಗ್ರಹಣೆ ಹೆಚ್ಚಾಗಿರುವ ಸ್ಥಳವನ್ನು ಗುರುತಿಸಿ, ದೈನಂದಿನ ಸ್ವಚ್ಛತಾ ಕಾರ್ಯಗಳೊಂದಿಗೆ ವಿಶೇಷ ಸ್ವಚ್ಛತಾ ಕಾರ್ಯಗಳನ್ನು ನಿರಂತರವಾಗಿ ನಡೆಸುವ ಮೂಲಕ ನಾಗರಿಕರಿಗೆ ಸ್ವಚ್ಛ, ಆರೋಗ್ಯಕರ ಮತ್ತು ಸುಗಮ ಪರಿಸರ ಒದಗಿಸಲು ಕ್ರಮ ಕೈಗೊಳ್ಳಲಾಗಿದೆಂದು ಹೇಳಿದರು. ಸಂಗಮ್ ಸರ್ಕಲ್ ಹಾಗೂ ಪಾದರಾಯನಪುರ ರಸ್ತೆಯ ವ್ಯಾಪ್ತಿ, ವಾರ್ಡ್-118 ಎಚ್.ಸಿದ್ದಯ್ಯ ರಸ್ತೆ, ಅಕ್ಕಪಕ್ಕ ರಸ್ತೆಗಳು ಹಾಗೂ ಕೆಂಪೇಗೌಡನಗರ ಉಪ ವಿಭಾಗದ ಚಿಕ್ಕಪೇಟೆ ವಿಭಾಗ ರಸ್ತೆಗಳಲ್ಲಿ, ಕೆ.ಸಿ.ಜನರಲ್ ಆಸ್ಪತ್ರೆ ಎದುರು, ಆಂಜನೇಯ ದೇವಸ್ಥಾನ ರಸ್ತೆ 2ನೇ ಕ್ರಾಸ್ ಹಾಗೂ ರಾಜಶಂಕರ್ ಕುಳ್ಳ ಪಾರ್ಕ್ ಎದುರಿನ ರಸ್ತೆಗಳಲ್ಲಿ, ಎ.ಕೆ. ಕಾಲೋನಿ, ದೊಮ್ಮಲೂರು ವಾರ್ಡ್ ಉಪ ವಿಭಾಗ ಹಾಗೂ ಶಾಂತಿನಗರ ವಿಭಾಗದ ಸುತ್ತಮುತ್ತಲಿನ ಪ್ರದೇಶದಲ್ಲಿ, ರಸೆಲ್ ಮಾರ್ಕೆಟ್ ಮತ್ತು ಚಾಂದಿನಿ ಚೌಕ್



ಸುತ್ತಮುತ್ತಲಿನ ರಸ್ತೆ, ಕೋನೇನ ಅಗ್ರಹಾರ ಪ್ರದೇಶದ ಮುರುಗೇಶ್ ಪಾಳ್ಯ ಚರ್ಚ್ ಸ್ಟ್ರೀಟ್ ಮತ್ತು ಸಿಂಡಿಕೇಟ್ ಬ್ಯಾಂಕ್ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಯಿತು. ಬೆಂಗಳೂರು ಕೇಂದ್ರ ನಗರಪಾಲಿಕೆಯ ಅಭಿವೃದ್ಧಿ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆಗಳನ್ನು ಸಂಘಟಿಸಲಾಯಿತು. ಒಟ್ಟು 5.6 ಕಿ.ಮೀ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗಿದೆ. 07 ಜೆಸಿಬಿ ಮತ್ತು 35 ಟ್ರ್ಯಾಕ್ಟರ್‌ಗಳ ಸಹಾಯದಿಂದ ರಸ್ತೆ ಬದಿಯಲ್ಲಿ ಸಂಗ್ರಹವಾಗಿದೆ. 55 ಲೋಡ್ ತ್ಯಾಜ್ಯವನ್ನು ತೆರವುಗೊಳಿಸಲಾಯಿತು.

ಡಾ.ನಳಿನಿಗೆ ಆತ್ಮೀಯ ಬೀಳ್ಕೊಡುಗೆ



• **ಆನೇಕಲ್:** ತಾಲೂಕು ಪಟ್ಟಣದ ಸರ್ಕಾರಿ ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ನಳಿನಿ ಅವರ ಸೇವಾ ನಿವೃತ್ತಿ ಹಿನ್ನಲೆಯಲ್ಲಿ ಆಸ್ಪತ್ರೆಯ ಸಿಬ್ಬಂದಿ ಮತ್ತು ಸಾರ್ವಜನಿಕರಿಂದ ಬೀಳ್ಕೊಡುಗೆ ಸಮಾರಂಭ ಆಯೋಜಿಸಲಾಗಿತ್ತು. ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ಡಾ.ನಳಿನಿ ಅವರು ಸುಮಾರು 18 ವರ್ಷ ಕಾರ್ಯನಿರ್ವಹಿಸಿದ್ದಾರೆ. ಅವರು ತಮ್ಮ ಆಡಳಿತಾವಧಿಯಲ್ಲಿ ತಾಳ್ಮೆಯ ಸಾಕಾರ ಮೂರ್ತಿಯಾಗಿದ್ದುಕೊಂಡು ತನ್ನ ಸಹೋದ್ಯೋಗಿಗಳ, ಸಿಬ್ಬಂದಿ ಜತೆ ಸದಾ ಬೆಂಬಲವಾಗಿ ಇರುತ್ತಿದ್ದರು. ರೋಗಿಗಳೊಂದಿಗೆ ನಗುತ್ತಲೆ ಮಾತನಾಡಿಸುತ್ತಾ ಕುಶಲೋಪರಿ ವಿಚಾರಿಸುತ್ತಿದ್ದರು. ಅವರು ನಮ್ಮೆಲ್ಲರಿಗೂ ಮಾದರಿಯೆಂದು ತಿಳಿಸಿದರು. ಸನ್ಮಾನ ಸ್ವೀಕರಿಸಿ ಡಾ.ನಳಿನಿ ಮಾತನಾಡಿ, ತನ್ನ ಸೇವಾವಧಿಯಲ್ಲಿ ನನ್ನ ಸಹೋದ್ಯೋಗಿಗಳು ಸಂಪೂರ್ಣವಾಗಿ ಸಹಕರಿಸಿದ್ದಾರೆ. ಅದರಲ್ಲೂ ಆನೇಕಲ್ ಸಾರ್ವಜನಿಕ ಆಸ್ಪತ್ರೆಯಲ್ಲಿ ನನ್ನ 18 ವರ್ಷದ ಸೇವಾವಧಿ ತೃಪ್ತಿಕೊಟ್ಟಿದೆ. ತಾಲೂಕಿನ ಜನತೆ ನನಗೆ ಬಹಳ ಸಹಕರಿಸಿದ್ದಾರೆ ಎಂದು ಹೇಳಿದರು. ಆಸ್ಪತ್ರೆ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ಆಡಳಿತ ವೈದ್ಯಾಧಿಕಾರಿ ಡಾ. ಜ್ಞಾನಪ್ರಕಾಶ್, ಡಾ.ಕುಮಾರಸ್ವಾಮಿ, ಡಾ. ನವೀನ್ ಕುಮಾರ್, ಡಾ.ಮೃತ್ಯುಂಜಯ, ಡಾ.ರಮೇಶ್, ಡಾ.ಹರೀಶ್, ಡಾ.ರಾಕೇಶ್ ಉತ್ತಪ್ಪ, ಡಾ.ಪ್ರವೀಣ್, ಡಾ.ಹಂಸಲೇಖ, ಡಾ.ಗಿರಿಜಾ, ಡಾ.ರಾಘವೇಂದ್ರ, ಡಾ.ಚಂದ್ರಶೇಖರ್, ಡಾ.ರುಬಿನಾ ಹಾಗೂ ಸಿಬ್ಬಂದಿ ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿದ ಗಣ್ಯರು ಡಾ.ನಳಿನಿ ಅವರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಸೇವೆಯನ್ನು ಶ್ಲಾಘಿಸಿದ ಗಣ್ಯರು, ಒಡನಾಡಿಗಳು

ಪಿಯು ಪರೀಕ್ಷೆ ಸುಗಮ

• **ವಿಜಯಪುರ:** ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಪ್ರಗತಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಶನಿವಾರ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭಗೊಂಡಿದೆ. ಮೊದಲ ದಿನ ಕನ್ನಡ ಪರೀಕ್ಷೆಗೆ ಎರಡು ಪರೀಕ್ಷಾ ಕೇಂದ್ರಗಳಲ್ಲಿ ಪಟ್ಟಣದ ವಿವಿಧ ಕಾಲೇಜುಗಳ ಒಟ್ಟು 574 ಮಂದಿ ವಿದ್ಯಾರ್ಥಿಗಳು ಹಾಜರಾಗಿ ಪರೀಕ್ಷೆ ಬರೆದರು. ಯಾವುದೇ ಡಿಬಾರ್ ಪ್ರಕರಣಗಳು ವರದಿಯಾಗಿಲ್ಲ, ಕನ್ನಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಗತಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಒಟ್ಟು 265 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು. ಎಂಟು ಮಂದಿ ಗೈರಾಗಿ, ಉಳಿದ 257 ಮಂದಿ ವಿದ್ಯಾರ್ಥಿಗಳು ಹಾಜರಾಗಿ ಪರೀಕ್ಷೆ ಬರೆದಿದ್ದಾರೆ. ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ 318 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು. ಇದರಲ್ಲಿ ಓರ್ವ ವಿದ್ಯಾರ್ಥಿ ಗೈರಾಗಿದ್ದು, ಒಟ್ಟು 317 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಪಟ್ಟಣದ ಎರಡು ಪರೀಕ್ಷಾ ಕೇಂದ್ರಗಳಿಗೆ ಸಕಾಲಕ್ಕೆ ಆಗಮಿಸಿದ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಯಾವುದೇ ಪರೀಕ್ಷಾ ಕೇಂದ್ರದಲ್ಲಿ ಅಹಿತಕರ ಘಟನೆ ನಡೆಯದೆ ಸಂಪೂರ್ಣ ಶಾಂತಿಯುತವಾಗಿ ಪರೀಕ್ಷೆ ಮುಗಿದಿದೆ ಎಂದು ಪರೀಕ್ಷಾ ಉತ್ತರ ಪತ್ರಿಕೆಯ ಪಾಲಕರಾದ ಮುನಿರಾಜು ಮಾಹಿತಿ ನೀಡಿದ್ದಾರೆ.



ಪ್ರಗತಿ ಶಾಲೆಯಲ್ಲಿ ವಿಜ್ಞಾನ ವಸ್ತುಪ್ರದರ್ಶನ | ಗಮನ ಸೆಳೆದ ವಿದ್ಯಾರ್ಥಿಗಳ ಸಾಧನೆ

ವೈಜ್ಞಾನಿಕ ಅರಿವಿನಿಂದ ಸ್ಪರ್ಧೆಯಲ್ಲಿ ಗೆಲುವು

• **ವಿಜಯಪುರ:** ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಪಟ್ಟಣದ ಪ್ರಗತಿ ಪ್ರಾಥಮಿಕ ಆಂಗ್ಲ ಪಾಠಶಾಲೆಯಲ್ಲಿ 'ವಿಜ್ಞಾನ ವಸ್ತು ಪ್ರದರ್ಶನ ಮೇಳ' ಹಾಗೂ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ಪೋಷಕರಿಗೆ ಕ್ರೀಡಾಕೂಟ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಪ್ರಗತಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಸತೀಶ್ ಕುಮಾರ್ ಮಾತನಾಡಿ, ಇಂದಿನ ತೀವ್ರ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಜವಾಬ್ದಾರಿಯುತ ನಡವಳಿಕೆಯನ್ನು ಮೈಗೂಡಿಸಿಕೊಳ್ಳುವುದು ಅತ್ಯಂತ ಅಗತ್ಯ ಎಂದರು.

ಮಕ್ಕಳಿಗೆ ಕೇವಲ ಪಠ್ಯದ ಪಾಠ ಮಾತ್ರವಲ್ಲದೆ, ಸಾಮಾನ್ಯ ಜ್ಞಾನ ಮತ್ತು ವಿಜ್ಞಾನದ ಅರಿವು ಇರುವುದು ಇಂದಿನ ಕಾಲದ ಅನಿವಾರ್ಯತೆ ಎಂದು ಎಂದರು. ಶಾಲೆಯಲ್ಲಿ ಕಲಿತದ್ದನ್ನು ಪ್ರಾಯೋಗಿಕವಾಗಿ ತೋರ್ಪಡಿಸಲು ಇಂತಹ ಮೇಳಗಳು ಸಹಕಾರಿಯಾಗಿದೆ. ನಮಗೆ ತಿಳಿಯದ ಎಷ್ಟೋ ವಿಷಯಗಳನ್ನು ಮಕ್ಕಳು ಇಂದು ಪ್ರಾತ್ಯಕ್ಷಿಕೆ ಮೂಲಕ ವಿವರಿಸುತ್ತಿರುವುದು ಸಂತಸದ ಸಂಗತಿ. ಪೋಷಕರು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವುದರ ಜೊತೆಗೆ ಶಾಲಾ



ಆಡಳಿತ ಮಂಡಳಿಯೊಂದಿಗೆ ಉತ್ತಮ ಬಾಂಧವ್ಯ ಹೊಂದಿರಬೇಕು ಎಂದು ಹೇಳಿದರು. ಶಾಲಾ ಮುಖ್ಯಶಿಕ್ಷಕ ಪ್ರಕಾಶ್ ಮಾತನಾಡಿ, ತಂದೆ ತಾಯಿ ಜನ್ಮ ನೀಡಿದರೆ, ಗುರುಗಳು ಜೀವನದ ದಾರಿಯನ್ನು ತೋರಿಸುತ್ತಾರೆ. ಇಂದಿನ ವಿದ್ಯಾರ್ಥಿಗಳಿಗೆ ಆಧುನಿಕ ಸೌಲಭ್ಯಗಳು ಲಭ್ಯವಿದೆ. ಅವುಗಳನ್ನು ಸದುಪಯೋಗಪಡಿಸಿಕೊಂಡು ಉನ್ನತ ಸಾಧನೆ ಮಾಡಬೇಕು ಎಂದು ತಿಳಿಸಿದರು. ಮೇಳದಲ್ಲಿ ನೂರಕ್ಕೂ ಹೆಚ್ಚು ವೈಜ್ಞಾನಿಕ ಪ್ರಾತ್ಯಕ್ಷಿಕೆಯನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು. ಪ್ರಮುಖವಾಗಿ ರಸ್ತೆ ಅಪಘಾತಗಳ ತಡೆಗೆ ಎಐ ಮಾದರಿ ಬಳಕೆ, ಭೂಕಂಪ ಸೂಚನೆಯ ಗಂಟೆ, ವೈಜ್ಞಾನಿಕ ಕೃಷಿ ಕುರಿತು ಮಾಹಿತಿ, ಮಳೆ ಸಂವೇದಕ, ಜಾಗತಿಕ ತಾಪಮಾನ ಏರಿಕೆ ಕುರಿತು ಮಾಹಿತಿ, ಕ್ಷಿಪಣಿ ಉಡಾವಣಾ ವ್ಯವಸ್ಥೆ, ಆಧುನಿಕ ನಗರ, ಪೈಥಾಗೊರಸ್ ಪ್ರಮೇಯ, ಗಣಿತ ಆಧಾರಿತ ಪ್ರಯೋಗಗಳು, ಮ್ಯಾಥಮೆಟಿಕ್ಸ್ ಪಾರ್ಕ್, ಡಿಜಿಟಲ್ ಫೋಟೋ-ವಿಡಿಯೊ ಹೊಂದಿರುವ ಡ್ರೋಣ್ ಮಾದರಿಗಳು ಜನರ ಗಮನ ಸೆಳೆದವು.

ಖಾಸಗಿ ವಸತಿ ಶಾಲೆಯಲ್ಲಿ ಲೈಂಗಿಕ ದೌರ್ಜನ್ಯ | ಪೋಷಕರ ಜತೆ ಹೇಳಿಕೊಂಡ ಮಕ್ಕಳು

ಗರ್ಭಧರಿಸದಂತೆ ಪರಂಗಿ ತಿನ್ನಿಸಿದ ಕಿರಾತಕರು

• **ದೇವನಹಳ್ಳಿ:** ಅತ್ಯಾಚಾರ ಪ್ರಕರಣವನ್ನು ಮುಚ್ಚಿಹಾಕಲು ಖಾಸಗಿ ವಸತಿ ಶಾಲೆಯ ಮಾಲೀಕನ ಡಿ.ಎಸ್.ಧನಂಜಯನ ಪತ್ನಿ ಶೈಲಜಾ ಯತ್ನಿಸಿದ್ದಾಳೆ. ಅಲ್ಲದೆ, ಅತ್ಯಾಚಾರಕ್ಕೊಳಗಾದ ವಿದ್ಯಾರ್ಥಿನಿ ಗರ್ಭಧರಿಸದಿರಲಿ ಎಂದು ಪಾರಗಟ್ಟಲೆ ಪರಂಗಿ ಕಾಯಿಯನ್ನು ಬಲವಂತವಾಗಿ ತಿನ್ನಿಸಲು ಪ್ರಯತ್ನ ಮಾಡಿದ್ದಾಳೆಂದು ಮಕ್ಕಳು ಹಾಗೂ ಪೋಷಕರು ದೂರಿನಲ್ಲಿ ತಿಳಿಸಿದ್ದಾರೆ.

ಎರಡೂ ದಿನದ ಹಿಂದೆ ಪಾಲಕರು ಶಾಲೆಗೆ ಬಂದು ಮಕ್ಕಳನ್ನು ಭೇಟಿ ಮಾಡಲೇಬೇಕೆಂದು ಒತ್ತಾಯ ಮಾಡಿದಾಗ ಐದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಲಾಗಿದೆ. ಈ ವೇಳೆ ಮಕ್ಕಳು ನಡೆದ ಪ್ರಕರಣದ ಬಗ್ಗೆ ಅಳುತ್ತಾ ಪಾಲಕರಿಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ದೇವನಹಳ್ಳಿ ಠಾಣೆಯಲ್ಲಿ ಪೋಷಕರು ದೂರು ದಾಖಲಿಸಲಾಗಿದೆ. ಶಾಲೆ ಪ್ರಾಂಶುಪಾಲೆ ಶೈಲಜಾ ಸಂತ್ರಸ್ತೆಯ ಪೋಷಕರಿಗೆ ನಿಮ್ಮ ಮಕ್ಕಳನ್ನು ಮುಂದೆ ಚೆನ್ನಾಗಿ ಓದಿಸುತ್ತೇವೆ ಎಂದು ಆಮಿಷವೊಡ್ಡುವ ಪ್ರಯತ್ನ ಮಾಡಿದ್ದಾಳೆ. ಜತೆಗೆ ಯಾರಿಗಾದರೂ ವಿಷಯ ತಿಳಿಸಿದರೆ ನಿಮ್ಮ ಮಕ್ಕಳನ್ನು ಅನುತ್ತೀರ್ಣ ಗೊಳಿಸುತ್ತೇವೆ ಎಂಬುದು



ಸೇರಿದಂತೆ ಮತ್ತಷ್ಟು ಆಮಿಷ ಹಾಗೂ ಬೆದರಿಕೆವೊಡ್ಡಿ ಪ್ರಕರಣ ಮುಚ್ಚಿ ಹಾಕಲು ಯತ್ನಿಸಿರುವ ಆರೋಪ ಕೇಳಿ ಬಂದಿದೆ. ಕೊಠಡಿಗೆ ಬೋಲ್ಟ್ ಬೀಗ ಇಲ್ಲ, ವಿದ್ಯಾರ್ಥಿನಿಯರು ಮಲಗುತ್ತಿದ್ದ ಕೊಠಡಿಗೆ ಬೋಲ್ಟ್-ಬೀಗವೇ ಇರಲಿಲ್ಲ ಎಂಬುದು ತನಿಖೆಯಲ್ಲಿ ತಿಳಿದುಬಂದಿದೆ. ಆರೋಪಿ ಉದ್ದೇಶಪೂರ್ವಕವಾಗಿಯೇ ಕೊಠಡಿಯನ್ನು ಸುಲಭವಾಗಿ ಪ್ರವೇಶಿಸಲು ಈ ರೀತಿ ವ್ಯವಸ್ಥೆ ಮಾಡಿದ್ದ ಎಂಬ ಶಂಕೆ ವ್ಯಕ್ತವಾಗಿದೆ. ಅತ್ತೆಯನ್ನು ಮನೆಗೆ ಕಳುಹಿಸಿದ್ದ ಕಿರಾತಕ: ವಸತಿ ಶಾಲೆಯ ಮಾಲೀಕ ಧನಂಜಯ ತನ್ನ ಅತ್ತೆಯನ್ನು ವಸತಿ ಶಾಲೆಯ ವಾರ್ಡನ್ ಆಗಿ ಕೆಲಸಕ್ಕೆ ನೇಮಿಸಿಕೊಂಡಿದ್ದನು. ಆದರೆ, ಫೆ.9ರಂದು ಪತ್ನಿಗೆ ಆರೋಗ್ಯ ಸರಿಯಿಲ್ಲ ಎಂಬ ಕಾರಣ ಹೇಳಿ ಅತ್ತೆಯನ್ನು ಮನೆಗೆ ಕಳುಹಿಸಿದ್ದನು. ವಸತಿ ಶಾಲೆಯಲ್ಲಿ ಈತನೊಬ್ಬನೇ ಇದ್ದು, ಪೈಶಾಚಿಕ ಕೃತ್ಯಕ್ಕೆ ಸಂಚುರೂಪಿಸಿದ್ದ ಎನ್ನಲಾಗಿದೆ. ಪಾಲಕರ ಫೋನ್ ಕರೆಗೂ ಮಕ್ಕಳು ಸಿಗದಂತೆ ಅಡ್ಡಿಪಡಿಸಲಾಗಿದೆ. ಪ್ರವಾಸಕ್ಕೆ ಕಳುಹಿಸಿದ್ದೇವೆ. ಪರೀಕ್ಷೆಗಾಗಿ ಓದುತ್ತಿದ್ದಾರೆ ಎಂಬ ಕಾರಣ ಹೇಳುವ ಮೂಲಕ ವಿದ್ಯಾರ್ಥಿನಿಯರ ಪಾಲಕರೊಂದಿಗೆ ಮಕ್ಕಳ ಸಂಪರ್ಕ ಸಿಗದಂತೆ ಮಾಡಿದ್ದಾರೆಂದು ಪಾಲಕರು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಸಮಯದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ, ಎಸಿಪಿ ಶ್ರೀಹರ್ಷ, ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬೈಲಾಂಜನೇಯ, ಬಿಇಒ ಲಲಿತಮ್ಮ ಸೇರಿದಂತೆ ಭೇಟಿ ನೀಡಿ ಪರಿಶೀಲಿಸಿದರು. ಎಸಿಪಿ ಶ್ರೀಹರ್ಷ, ಪಿ.ಐ. ಉಮೇಶ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಬೈಲಾಂಜನೇಯ, ಬಿಇಒ ಲಲಿತಮ್ಮ ಇದ್ದರು..

ಯಾವುದೇ ಕ್ಷಮೆ ಇಲ್ಲ: ಪುಟ್ಟ ಮಕ್ಕಳ ಮೇಲೆ ಇಂತಹ ದುಷ್ಕೃತ್ಯ ನಡೆಸಿರುವುದು ನಮ್ಮ ಆಯೋಗದಿಂದ ಯಾವುದೇ ಕ್ಷಮೆ ಇಲ್ಲ . ಘಟನೆ ಸಂಬಂಧ ಕೂಲಂಕುಶವಾಗಿ ಪರಿಶೀಲಿಸಿ ಪೊಲೀಸ್ ಇಲಾಖೆಗೆ ಹಾಗೂ ಡಿಸಿಗೆ ಸೂಚನೆ ನೀಡಿದ್ದೇನೆಂದು ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ ತಿಳಿಸಿದರು.

ಮಾ.7ಕ್ಕೆ ದೇವನಹಳ್ಳಿಯಲ್ಲಿ ಸಮಾವೇಶ | ಅಪಾರ ಕಾರ್ಯಕರ್ತರು ಸೇರುವ ನಿರೀಕ್ಷೆ

ವಿಬಿ ಜಿ ರಾಮ್ ಜಿ ಬಗ್ಗೆ ಕೈ ತಪ್ಪು ಸಂದೇಶ

• ದೇವನಹಳ್ಳಿ: ರಾಜ್ಯ ಕಾಂಗ್ರೆಸ್ ಸರ್ಕಾರ ವಿ.ಬಿ.ರಾಮ್‌ಜಿ ಬಗ್ಗೆ ಜನರಿಗೆ ತಪ್ಪು ಸಂದೇಶ ನೀಡುತ್ತಿದೆ ಎಂದು ಬಿಜೆಪಿ ಬೆಂ.ಗ್ರಾ.ಜಿಲ್ಲಾ ಅಧ್ಯಕ್ಷ ರಾಮಕೃಷ್ಣಪ್ಪ ತಿಳಿಸಿದರು.

ಬಿಜೆಪಿ ಮಂಡಲ ಕಾರ್ಯಾಲಯದಲ್ಲಿ ಕರೆಯಲಾಗಿದ್ದ ಸಭೆಯಲ್ಲಿ ಮಾತನಾಡಿ, ಕಾಂಗ್ರೆಸ್ ಮನರೇಗ ಇದ್ದಾಗ ದುರುಪಯೋಗ ಪಡಿಸಿಕೊಂಡು ಹಣ ಲೂಟಿ ಮಾಡುತ್ತಿದ್ದರು. ಈಗ ಕೇಂದ್ರ ಸರ್ಕಾರ ಕಾಯ್ದೆಯನ್ನಾಗಿ ಮಾಡಿದ್ದರಿಂದ ನುಂಗಲಾರದ ತುತ್ತಾಗಿದೆ ಆದಕ್ಕಾಗಿ ವಿ.ಬಿ.ರಾಮ್‌ಜಿ ವಿರುದ್ಧ ಪ್ರತಿಭಟಿಸುತ್ತಿದ್ದಾರೆ ಎಂದು ಟೀಕಿಸಿದರು.

ಇತ್ತೀಚೆಗೆ ಚಿಕ್ಕಬಳ್ಳಾಪುರದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖಾಲಿ ಕುರ್ಚಿಗಳಿಗೆ ಭಾಷಣ ಮಾಡಿರುವ ವಿಷಯ ಎಲ್ಲರಿಗೂ ತಿಳಿದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು ಅಭಿವೃದ್ಧಿ ಕಡೆಗಣಿಸಿ ಜಮೀನು ಮಾಡುವ ಉನ್ನಾರ ಮಾಡುತ್ತಿದ್ದಾರೆ ಅವರಿಗೆ ಅವರ ಮಗ ಸಾಥ್ ನೀಡುತ್ತಿದ್ದಾರೆಂದು ಆರೋಪಿಸಿರು.

ದೇವನಹಳ್ಳಿಯ ಎಲ್ಲಾ ಮೋರ್ಚಾದ ಪದಾಧಿಕಾರಿಗಳೇ, ಮಾರ್ಚ್ 7 ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರದಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾದ ಬಿ.ವೈ.ವಿಜಯೇಂದ್ರ ರವರ ನೇತೃತ್ವದಲ್ಲಿ ನಡೆಯಲಿರುವ ವಿಬಿ ಜಿ ರಾಮ್ ಜೀ ಯೋಜನೆಯ ಕುರಿತಂತೆ ಸಮಾವೇಶದಲ್ಲಿ ರಾಜ್ಯ ಮಟ್ಟದ ಮುಖಂಡರು, ಜಿಲ್ಲೆಯ ನಾಲ್ಕು ತಾಲೂಕಿನಿಂದ ವಿವಿಧ ಮೋರ್ಚಾಗಳ ಮುಖಂಡರು ಕಾರ್ಯಕರ್ತರು ಭಾಗವಹಿಸಿ ಎಂದರು.

ನಿಷ್ಠಾವಂತ ಜಿಲ್ಲಾಧಿಕಾರಿಗಳನ್ನು ಎತ್ತಂಗಡಿ ಮಾಡಿದ್ದಾರೆ. ಅವರಿಗೆ ಯಾವುದೇ ಸ್ಥಳ ಕೂಡ ನೀಡದಿರುವುದು ಕಾಂಗ್ರೆಸ್ ಭ್ರಷ್ಟಾಚಾರಕ್ಕೆ ಹಿಡದ ಕೈಗನ್ನಡಿಯಾಗಿದೆ. ಆದ್ದರಿಂದ ಕಾಂಗ್ರೆಸ್ ಸರ್ಕಾರದ ವಿರುದ್ಧ ನಡೆಯುವ ಪ್ರತಿಭಟನಾ ರ್‍ಯಾಲಿಗೆ ಸಾವಿರಾರು ಜನ ಸೇರಲಿದ್ದಾರೆಂದರು.



ಸಭೆಯ ಅಧ್ಯಕ್ಷತೆ ವಹಿಸಿದ್ದ ಎನ್ .ಎಲ್ .ಅಂಬರೀಶ್ ಗೌಡ ಮಾತನಾಡಿ ಕಾಂಗ್ರೆಸ್ ವಿಬಿ ರಾಮ್‌ಜಿ ಬಗ್ಗೆ ಅಪಪ್ರಚಾರ ಮಾಡುತ್ತಿದ್ದು ಜನರು ತಪ್ಪು ತಿಳಿಯುವುದರಿಂದ ಜನರಿಗೆ ಮನದಟ್ಟು ಮಾಡುವ ಉದ್ದೇಶದಿಂದ ಸಮಾವೇಶ ಮಾಡ ಲಾಗುತ್ತಿದೆ, ತಾಲೂಕಿನ ವಿವಿಧ ಮೋರ್ಚಾಗಳ ಮುಖಂಡರು ಕಾರ್ಯಕರ್ತರು ಸೇರಿದಂತೆ 294 ಬೂತ್‌ನಿಂದ ಪ್ರತಿ ಬೂತ್‌ಗೆ ಕನಿಷ್ಠ 5 ಜನರಂತೆ ಭಾಗವಹಿಸಿ ಕಾಂಗ್ರೆಸ್ ವಿರುದ್ಧ ಪ್ರತಿಭಟಿಸೋಣ ಎಂದರು.

ಇದೇ ಸಮಯದಲ್ಲಿ ಬಿಜೆಪಿಯ ಹಿರಿಯ ಮುಖಂಡ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಹುಟ್ಟುಹಬ್ಬವನ್ನು ಕೇಕ್ ಕಟ್ ಮಾಡುವ ಮುಖಾಂತರ ಆಚರಿಸಲಾಯಿತು ಹಾಗೂ ಬೂತ್‌ಮಟ್ಟದ ಮುಖಂಡರ ಸಭೆಯನ್ನು ಮಾಡಿ ಕಾರ್ಯಕ್ರಮದಲ್ಲಿ ಹೆಚ್ಚು ಕಾರ್ಯಕರ್ತರು ಭಾಗವಹಿಸುವಂತೆ ಮನವಿ ಮಾಡಿದರು,

ವಿವಿಧ ಬಿಜೆಪಿ ಘಟಕಗಳಿಗೆ ಬಿ.ಟಿ.ಅನಿಲ್‌ಕುಮಾರ್, ಮುನೀಂದ್ರ, ವಿಜಯರಾಘವೇಂದ್ರ, ಮೋಹನ್‌ಗೌಡ, ಜಿ. ಯಶೋಧ, ರಾಜೇಶ್ವರಿ, ಸುಲೋಚನಾ, ದಿವ್ಯಾಶ್ರೀ, ಲಕ್ಷ್ಮೀಗೋಪಿಯವರನ್ನು ನೇಮಕ ಮಾಡಿ ಆದೇಶ ಪತ್ರ ನೀಡಲಾಯಿತು.

ಮಾಜಿ ಶಾಸಕ ಜಿ.ಚಂದ್ರಣ್ಣ, ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಎಂ.ರವಿಕುಮಾರ್, ನಾಗೇಶ್ ಬಾಬು, ಮನ್‌ಕಿ ಬಾತ್ ಸಂಚಾಲಕ ಆರುವನಹಳ್ಳಿ ವೆಂಕಟೇಗೌಡ, ಬುಳ್ಳಹಳ್ಳಿ ರಾಜಪ್ಪ, ಅನಿಲ್‌ಕುಮಾರ್, ತಾಲೂಕು ಉಪಾಧ್ಯಕ್ಷ ತಮ್ಮಯ್ಯ, ಶಿಲ್ಪಿ ಮಧುಸೂದನ್, ಗೋವಿಂದಪ್ಪ, ಅನಿಲ್ ಯಾದವ್, ಕದಿರಪ್ಪ, ದೇವರಾಜು, ಆವತಿ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ರವಿಕುಮಾರ್, ಶ್ರೀನಿವಾಸ್, ವಿಜಯರಾಘವೇಂದ್ರ, ನಾಗವೇಣಿ, ಪ್ರೇಮಾ, ಯಶೋದಮ್ಮ, ರಾಜೇಶ್ವರಿ, ಲಕ್ಷ್ಮಿ, ಸೇರಿದಂತೆ ಹಲವಾರು ಬೂತ್‌ಮಟ್ಟದ ಮುಖಂಡರು ಮತ್ತು ಕಾರ್ಯಕರ್ತರಿದ್ದರು.

ಭ್ರಷ್ಟಾಚಾರಕ್ಕೆ ಕಾಂಗ್ರೆಸ್ ಕೈಗನ್ನಡಿ

ನಿಷ್ಠಾವಂತ ಜಿಲ್ಲಾಧಿಕಾರಿಗಳನ್ನು ಎತ್ತಂಗಡಿ ಮಾಡಿದ್ದಾರೆ. ಅವರಿಗೆ ಯಾವುದೇ ಸ್ಥಳ ಕೂಡ ನೀಡದಿರುವುದು ಕಾಂಗ್ರೆಸ್ ಭ್ರಷ್ಟಾಚಾರಕ್ಕೆ ಹಿಡದ ಕೈಗನ್ನಡಿಯಾಗಿದೆ. ಆದ್ದರಿಂದ ಕಾಂಗ್ರೆಸ್ ಸರ್ಕಾರದ ವಿರುದ್ಧ ನಡೆಯುವ ಪ್ರತಿಭಟನಾ ರ್‍ಯಾಲಿಗೆ ಸಾವಿರಾರು ಜನ ಸೇರಲಿದ್ದಾರೆಂದು ಬಿಜೆಪಿ ಬೆಂ.ಗ್ರಾ.ಜಿಲ್ಲಾ ಅಧ್ಯಕ್ಷ ರಾಮಕೃಷ್ಣಪ್ಪ ತಿಳಿಸಿದರು.

ಬೂತ್‌ಮಟ್ಟದಲ್ಲಿ ಸಭೆ

ಬೂತ್‌ಮಟ್ಟದ ಮುಖಂಡರ ಸಭೆಯನ್ನು ಮಾಡಿ ಕಾರ್ಯಕ್ರಮದಲ್ಲಿ ಹೆಚ್ಚು ಕಾರ್ಯಕರ್ತರು ಭಾಗವಹಿ ಸುವಂತೆ ಎನ್ .ಎಲ್.ಅಂಬರೀಶ್‌ಗೌಡ ಅವರು ಮನವಿ ಮಾಡಿದರು.

ಕಿರುಸುದ್ದಿ

ಪೋಷಕರಿಗೆ ಕೃತಜ್ಞತಾ ದಿನಾಚರಣೆ



• ಕೊಡಿಗೇನಹಳ್ಳಿ: ಮನುಷ್ಯರಾದ ನಾವು ಪ್ರತಿ ವಿಷಯಕ್ಕೂ ಕೃತಜ್ಞತೆ ಸಲ್ಲಿಸುವುದು ಬಹಳ ಮುಖ್ಯ. ಇದು ಅಂತರಾಳದ ಭಾವನೆ ಮತ್ತು ಒಬ್ಬರ ಜೀವನವನ್ನು ಬದಲಾಯಿಸಲು ಸಹಾಯ ಮಾಡುತ್ತದೆ ಎಂದು ನಿಸರ್ಗ ಜ್ಞಾನ ಮಂದಿರ ಶಾಲೆಯ ಪ್ರಾಂಶುಪಾಲೆ ಜೆ.ಟಿ.ಕಲ್ಪನಾ ತಿಳಿಸಿದರು. ಗ್ರಾಮದ ನಿಸರ್ಗ ಜ್ಞಾನ ಮಂದಿರ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪೋಷಕರ ದಿನ, ಕೃತಜ್ಞತಾ ದಿನ ಹಾಗೂ ಮಕ್ಕಳ ವಾರ್ಷಿಕ ಸಾಂಸ್ಕೃತಿಕ ಸಂಭ್ರಮದ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಕೃತಜ್ಞತೆಯು ನಮ್ಮ ಜೀವನದ ಉತ್ಸಾಹ, ಉದಾರತೆ, ಸಹಾನುಭೂತಿಯನ್ನು ಹೆಚ್ಚಿಸುತ್ತದೆ. ಸಕಾರಾತ್ಮಕತೆಯನ್ನು ಗುರುತಿಸುವುದು, ಜೀವನದ ಅದ್ಭುತ ಅಂಶಗಳನ್ನು ಒಪ್ಪಿಕೊಳ್ಳುವ ಮತ್ತು ಶ್ಲಾಘಿಸುವ ಒಂದು ಮಾರ್ಗ ಎಂದರು. ಆಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀನಿವಾಸ ರೆಡ್ಡಿ ಮಾತನಾಡಿ ಏನೂ ಅರಿಯದ ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲೇ ಪಾಠ ಕಲಿಯಲು ಶಾಲೆಗೆ ಸೇರಿಸುತ್ತಾರೆ ಎಂದರು. ಮೆಡುಮಾ ಕಾರ್ಯದರ್ಶಿ ಎಸ್.ಮಧು ಮಾತನಾಡಿ ನಮಗೆ ತಿಳುವಳಿಕೆ ನೀಡಿ ಜ್ಞಾನ ವೃದ್ಧಿ ಮಾಡಲು ಸಹಾಯ ಮಾಡಿದ ಯಾವುದೇ ವ್ಯಕ್ತಿಗಾದರೂ ನಾವು ಗೌರವ ತೋರುವುದೇ ಕೃತಜ್ಞತೆ. ಕೃತಜ್ಞತೆ ಅರ್ಪಿಸುವುದರಿಂದ ದುಃಖ ಮತ್ತು ಚಿಂತೆಯ ಭಾವನೆಗಳನ್ನು ಕಡಿಮೆ ಮಾಡುತ್ತದೆ ಎಂದರು. ಜ್ಞಾನಸಿಂಧು ಶಾಲೆಯ ಕಾರ್ಯದರ್ಶಿ ಹನುಮಂತ್ರಾಯಪ್ಪ, ಮುಖ್ಯಶಿಕ್ಷಕಿ ಅಶ್ವತ್ಥವಲ್ಲಿ ಸುಶೀಲ, ಮಾಯಿನ್ ಸಾಮರಸ್ಯ, ಮಲ್ಲಿಕಾ, ವಸಂತಲಕ್ಷ್ಮಿ, ಕಲ್ಪನಾ, ಗೀತಾ, ಮಿಸ್ಬಾ ಹರೀಶ್, ರಾಜಪ್ಪ ,ನರೇಶ್ ನರೇಂದ್ರಸ್ವಾಮಿ ಮುಂತಾದವರು ಹಾಜರಿದ್ದರು.

ರೈಲು ಹಳಿ ಬಳಿ ಆತ್ಮಹತ್ಯೆಗೆ ಯತ್ನ: ತಾಯಿ-ಮಕ್ಕಳ ರಕ್ಷಣೆ

• ಬೆಂಗಳೂರು: ತಡರಾತ್ರಿ 1.33ರ ಸುಮಾರಿಗೆ ಸಂಪಿಗೆಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಗ್ರಹಾರದ ರೈಲು ಹಳಿಯ ಸಮೀಪ ಮಹಿಳೆಯೊಬ್ಬರು ಇಬ್ಬರು ಮಕ್ಕಳೊಂದಿಗೆ ಅಸಹಾಯಕರಾಗಿ ಕುಳಿತಿರುವುದನ್ನು ಸಾರ್ವಜನಿಕರು ಗಮನಿಸಿದ್ದರು.

ಕೂಡಲೇ 112ಗೆ ಮಾಹಿತಿ ನೀಡಲಾಗಿದೆ. ಹೊಯ್ಸಳ ಸಿಬ್ಬಂದಿ ಕೇವಲ 4 ನಿಮಿಷದಲ್ಲಿ ಸ್ಥಳಕ್ಕೆ ಧಾವಿಸಿದರು. ಬಿಹಾರ ಮೂಲದ ಈ ಮಹಿಳೆಯು ಕೌಟುಂಬಿಕ ಹಿಂಸೆಯಿಂದ ಮನನೊಂದು ಇಬ್ಬರು ಮಕ್ಕಳೊಂದಿಗೆ ಪ್ರಾಣತ್ಯಾಗ ಮಾಡಲು ಮುಂದಾಗಿದ್ದರು. ಪೊಲೀಸರು ಆಕೆಗೆ ಸಾಂತ್ವನ ಹೇಳಿ, ಪತಿಯನ್ನು ಪತ್ತೆಹಚ್ಚಿ ಎಚ್ಚರಿಕೆ ನೀಡಿ ಸುರಕ್ಷಿತವಾಗಿ ಮನೆಗೆ ಕಳುಹಿಸಿದ್ದಾರೆ.

ವಿಷ ಸೇವಿಸಿದ್ದ ಯುವತಿಗೆ ಮರುಜೀವ

ಬೆಂಗಳೂರು: ಮಹಿಳೆಯೊಬ್ಬರು ನೇಲ್ ಪಾಲಿಷ್ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ಫೆ.24ರಂದು ಮಧ್ಯಾಹ್ನ 3.51ಕ್ಕೆ ಮಲ್ಲೇಶ್ವರಂನ ಕೆ.ಬಿ. ನಗರದಲ್ಲಿ ನಡೆದಿದೆ. ಹೊಯ್ಸಳ ಸಿಬ್ಬಂದಿ ಕೇವಲ ಎರಡು ನಿಮಿಷದಲ್ಲಿ ಸ್ಥಳಕ್ಕೆ ತಲುಪಿ, 27 ವರ್ಷದ ಮಧುಶ್ರೀ ಎಂಬವರನ್ನು ಕೂಡಲೇ ಹತ್ತಿರದ ಆಸ್ಪತ್ರೆಗೆ ದಾಖಲಿಸಿದರು. ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ಕೊಡಿಸುವ ಮೂಲಕ ಯುವತಿಯ ಪ್ರಾಣ ಉಳಿಸಿದ್ದಾರೆ.

ಜ್ಯೋತಿಷಿ ಮಾತು ನಂಬಿದ ಯುವತಿ ಆತ್ಮಹತ್ಯೆಗೆ ಶರಣು

• ಬೆಂಗಳೂರು: ಜ್ಯೋತಿಷಿಯೊಬ್ಬರು ನುಡಿದ ಭವಿಷ್ಯವಾಣಿಯನ್ನು ನಂಬಿ, ಪ್ರೀತಿಸಿದ ಯುವಕನ ಜತೆಗೆ ಮದುವೆಗೆ ಸಿದ್ಧಳಾಗಿದ್ದ ಯುವತಿಯೋರ್ವಳು ಆತ್ಮಹತ್ಯೆಗೆ ಶರಣಾಗಿರುವ ದಾರುಣ ಘಟನೆ ನಗರದ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯ ಎಂಇಐ ಲೇಔಟ್‌ನಲ್ಲಿ ನಡೆದಿದೆ. ಮೃತ ಯುವತಿಯನ್ನು ವಿದ್ಯಾಜ್ಯೋತಿ (29) ಎಂದು ಗುರುತಿಸಲಾಗಿದೆ. ಮೂಲತಃ ಮಾಗಡಿ ತಾಲೂಕಿನವರಾದ ಈ ಕುಟುಂಬ



ಕಳೆದ ನಾಲ್ಕೈದು ವರ್ಷದಿಂದ ಬೆಂಗಳೂರಿನಲ್ಲಿ ನೆಲೆಸಿತ್ತು. ವಿದ್ಯಾಜ್ಯೋತಿ ಕೋರಮಂಗಲದ ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದು, ವರ್ಕ್ ಫ್ರಮ್ ಹೋಮ್ ಮಾಡುತ್ತಿದ್ದಳು. ತಾನು ಪ್ರೀತಿಸಿದ ಯುವಕನನ್ನೇ ಮದುವೆಯಾಗಲು ತಂದೆ-ತಾಯಿ ಒಪ್ಪಿಗೆ ನೀಡಿದ್ದರು.

ಇದೇ ಸಂದರ್ಭದಲ್ಲಿ, ದೋಷ ನಿವಾರಣೆಗಾಗಿ 9 ದಿನಗಳ ಕಾಲ ಮಾರಮ್ಮ ದೇವಿಗೆ ಪೂಜೆ ಮಾಡಿಸಬೇಕು ಎಂದು ಅವರು ಸೂಚಿಸಿದ್ದರು.

ಸ್ಟ್ರಿಂಗ್ ಫೀಲ್ಡ್ ಪಬ್ಲಿಕ್ ಸ್ಕೂಲ್‌ನಲ್ಲಿ ವಿಜ್ಞಾನ ವಸ್ತುಪ್ರದರ್ಶನ

ವಿದ್ಯಾರ್ಥಿಗಳ ಸೃಜನಶೀಲತೆಗೆ ಪ್ರೋತ್ಸಾಹಿಸಲಿ

• ಚನ್ನಪಟ್ಟಣ: ಪಟ್ಟಣದ ಹೊರವಲಯದ ಗೋವಿಂದೇಗೌಡನ ದೊಡ್ಡಿ ಗ್ರಾಮದಲ್ಲಿರುವ ಸ್ಟ್ರಿಂಗ್ ಫೀಲ್ಡ್ ಪಬ್ಲಿಕ್ ಸ್ಕೂಲ್ ನಲ್ಲಿರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಆಯೋಜಿಸಲಾಗಿದ್ದ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ವಿದ್ಯಾರ್ಥಿಗಳ ಸೃಜನಶೀಲತೆ, ವೈಜ್ಞಾನಿಕ ಮನೋಭಾವ ಹಾಗೂ ಸಂಶೋಧನಾ ಕೌಶಲವನ್ನು ಅನಾವರಣಗೊಳಿಸುವ ವೇದಿಕೆಯಾಗಿ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ಸ್ವತಃ ತಯಾರಿಸಿದ ವೈವಿಧ್ಯಮಯ ವೈಜ್ಞಾನಿಕ ಮಾದರಿಯನ್ನು ಪ್ರದರ್ಶಿಸಿ, ತಮ್ಮ ಪ್ರತಿಭೆಯನ್ನು ಮೆರೆದರು. ಮಳೆ ನೀರು ಸಂಗ್ರಹಣೆ ಮತ್ತು ಮರುಬಳಕೆ ಮಾದರಿ, ಸ್ಮಾರ್ಟ್ ವಾಟರ್ ನಿರ್ವಹಣಾ ವ್ಯವಸ್ಥೆ, ತ್ಯಾಜ್ಯ ನೀರು ಶುದ್ಧೀಕರಣ ಮಾದರಿ, ಸೌರಪ್ಯಾಡದ ಚಲನಾ ಮಾದರಿ, ರಾಕೆಟ್ ಮತ್ತು ಬಾಹ್ಯಾಕಾಶ ಸಂಶೋಧನಾ ಮಾದರಿ, ಬಾಹ್ಯಾಕಾಶ ಕ್ಷೇತ್ರದ ಉಪಕರಣಗಳ ರೂಪುರೇಷೆಗಳು, ಎಐ ತಂತ್ರಜ್ಞಾನ ಮಾದರಿ, ಸ್ಮಾರ್ಟ್ ಸಿಟಿ ಪರಿಕಲ್ಪನೆ ಹಾಗೂ ಅತ್ಯಾಧುನಿಕ ಡ್ರೋನ್ ಮಾದರಿ ಸೇರಿದಂತೆ ಅನೇಕ ಆಕರ್ಷಕ ಪ್ರದರ್ಶನಗಳು ಪೋಷಕರು ಹಾಗೂ ಅತಿಥಿಗಳ ಗಮನ ಸೆಳೆದವು.

ವಿದ್ಯಾರ್ಥಿಗಳು ಪ್ರತಿಯೊಂದು ಮಾದರಿಯ ಹಿಂದೆ ಇರುವ ವೈಜ್ಞಾನಿಕ ತತ್ತ್ವವನ್ನು ಸ್ಪಷ್ಟವಾಗಿ ವಿವರಿಸಿ, ತಮ್ಮ ಅಧ್ಯಯನ ಹಾಗೂ ಸಂಶೋಧನಾ ಮನೋಭಾವವನ್ನು ತೋರಿಸಿದರು. ಪರಿಸರ ಸಂರಕ್ಷಣೆ, ಜಲ ಸಂಪನ್ಮೂಲಗಳ ಸಮರ್ಪಕ ಬಳಕೆ, ನವೀನ ತಂತ್ರಜ್ಞಾನಗಳ ಅವಶ್ಯಕತೆ ಮತ್ತು ಭವಿಷ್ಯದ ನಗರ ಯೋಜನೆಗಳ ಕುರಿತು ಮಕ್ಕಳು ನೀಡಿದ ವಿವರಣೆಗಳು ಎಲ್ಲರ ಮೆಚ್ಚುಗೆಗೆ ಪಾತ್ರವಾದವು.




ಸನ್ ಸ್ಟಾರ್ ಪಬ್ಲಿಕೇಷನ್ ಹಾಗೂ ಶಾಲೆಯ ಮುಖ್ಯಸ್ಥ ಶೇಖರ್‌ರೆಡ್ಡಿ ಮಾತನಾಡಿ, 'ವಿಜ್ಞಾನ ವಸ್ತು ಪ್ರದರ್ಶನಗಳು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಚಿಂತನೆ, ಸೃಜನಶೀಲತೆ ಮತ್ತು ಕ್ರಿಯಾಶೀಲತೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಇಂತಹ ಕಾರ್ಯಕ್ರಮಗಳು ವಿಜ್ಞಾನ, ಗಣಿತ ಮತ್ತು ತಂತ್ರಜ್ಞಾನ ವಿಷಯಗಳತ್ತ ಮಕ್ಕಳಲ್ಲಿ ಆಸಕ್ತಿ ಹೆಚ್ಚಿಸಲು ನೆರವು ಎಂದು ಅಭಿಪ್ರಾಯಪಟ್ಟರು.

ಉಜ್ವಲ ಅಕಾಡೆಮಿ ನಿರ್ದೇಶಕ ಕೆ.ಯು.ಮಂಜುನಾಥ್ ಮಾತನಾಡಿ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವುದು, ಅವರ ಸೃಜನಶೀಲತೆ ಮತ್ತು ಕ್ರಿಯಾಶೀಲತೆಯನ್ನು ಹೊರಹಾಕುವುದು ವಿಜ್ಞಾನ ವಸ್ತುಪ್ರದರ್ಶನಗಳ ಮುಖ್ಯ ಉದ್ದೇಶವಾಗಿದೆ. ಇಂತಹ ಕಾರ್ಯಕ್ರಮಗಳು ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಪೂರಕವಾಗುತ್ತವೆಂದು ಹೇಳಿದರು.

ಶಾಲೆಯ ವ್ಯವಸ್ಥಾಪಕ ನಿರ್ದೇಶಕ ನಂಜುಂಡಸ್ವಾಮಿ, ನಿರ್ದೇಶಕರಾದ ಮುತ್ತುರೆಡ್ಡಿ ಮತ್ತು ದರ್ಶಿನಿ, ಪ್ರಾಂಶುಪಾಲೆ ಇಂದೂರಾಜ್, ಶಿಕ್ಷಕ ವರ್ಗ, ವಿದ್ಯಾರ್ಥಿಗಳು ಹಾಗೂ ಪೋಷಕರು ಕಾರ್ಯಕ್ರಮದಲ್ಲಿ ಮಕ್ಕಳ ಸಾಧನೆಯನ್ನು ಶ್ಲಾಘಿಸಿದರು.

ವಿವಿಧ ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆಗೆ ತರಬೇತಿ

• ಬೆಂಗಳೂರು: ಲಿಟ್ಟರ್ ಪಿಕ್ಕಿಂಗ್ ಯಂತ್ರ ಖರೀದಿ ಹಾಗೂ ಜಿಬಿಎ, ಬ್ಲ್ಯಾಕ್ ಸ್ಪಾಟ್ ನಿರ್ಮೂಲನೆಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದೆಂದು ಉತ್ತರ ನಗರ ಪಾಲಿಕೆ ಆಯುಕ್ತ ಪಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.



ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಉತ್ತರ ನಗರ ಪಾಲಿಕೆಯಲ್ಲಿ ಪ್ರಸ್ತುತ 72 ವಾರ್ಡ್‌ಗಳಿವೆ. ರಸ್ತೆಯಲ್ಲಿ ದೈನಂದಿನ ಸ್ವಚ್ಛತಾ ಕಾರ್ಯವನ್ನು ಪೌರಕಾರ್ಮಿಕರು ನಿರ್ವಹಿಸುತ್ತಿದ್ದಾರೆ. ಮನೆ-ಮನೆಗಳಿಂದ ತ್ಯಾಜ್ಯ ಸಂಗ್ರಹಣೆ ಕಾರ್ಯವನ್ನು 1018 ಆಟೋಟಿಪ್ಪರ್‌ಗಳ ಮೂಲಕ ನಡೆಸಲಾಗುತ್ತಿದೆ. ಬ್ಲ್ಯಾಕ್ ಸ್ಪಾಟ್‌ಗಳು ನಿರ್ಮಾಣವಾಗುತ್ತಿದೆ. ಅವುಗಳನ್ನು ಕೈಯಿಂದ ಸ್ವಚ್ಛಗೊಳಿಸುವುದು ಪೌರಕಾರ್ಮಿಕರಿಗೆ ಕಷ್ಟವಾಗುತ್ತಿದೆ. ಆದ್ದರಿಂದ ಪ್ರಾಯೋಗಿಕ ಬಳಕೆ ಮತ್ತು ವರದಿ ಆಧಾರದ ಮೇಲೆ ಪಾಲಿಕೆ ವ್ಯಾಪ್ತಿಯಲ್ಲಿ ಉಪಯೋಗಿಸುವ ಉದ್ದೇಶದಿಂದ ಲಿಟ್ಟರ್ ಪಿಕ್ಕಿಂಗ್ ಯಂತ್ರವನ್ನು ಖರೀದಿಸಲು ನಿರ್ಧರಿಸಿ, ಸದರಿ ಯಂತ್ರವನ್ನು 65,00,000 ರೂ. ವೆಚ್ಚದಲ್ಲಿ ಖರೀದಿಸಲಾಗಿದೆ ಎಂದು ತಿಳಿಸಿದ್ದಾರೆ.

ಲಿಟ್ಟರ್ ಪಿಕ್ಕಿಂಗ್ ವಾಹನ ಆಧುನಿಕ ಸಕ್ಷನ್ ತಂತ್ರಜ್ಞಾನವನ್ನು ಬಳಸಿ ಹೋಸ್ ಪೈಪ್ ಮುಖಾಂತರ ರಸ್ತೆ ಬದಿಯ ತ್ಯಾಜ್ಯವನ್ನು ಹೀರಿಕೊಂಡು ವಾಹನದಲ್ಲಿರುವ ಕಂಟೈನರ್‌ನಲ್ಲಿ ಸಂಗ್ರಹಿಸುತ್ತದೆ. ಜೊತೆಗೆ ರಸ್ತೆ ಬದಿಯ ಎಲೆಗಳು ಹಾಗೂ ಅರ್ಧ ದ್ರವ ತ್ಯಾಜ್ಯವನ್ನು ಸಹ ಸುಲಭವಾಗಿ ತೆರವುಗೊಳಿಸಲು ಸಾಧ್ಯವಾಗುತ್ತದೆ. ಪೌರಕಾರ್ಮಿಕರು ಪಾರಂಪರಿಕ ಪೊರಕೆಗಳಿಂದ ಸ್ವಚ್ಛತೆ ಮಾಡಲು ತೆಗೆದುಕೊಳ್ಳುವ ಸಮಯದ ಅರ್ಧಕ್ಕಿಂತ ಕಡಿಮೆ ಅವಧಿಯಲ್ಲಿ ತ್ಯಾಜ್ಯ ತೆರವು ಕಾರ್ಯವನ್ನು ಈ ಯಂತ್ರದ ಮೂಲಕ ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಮೆಡಿವಿಷನ್ ರಾಜ್ಯಸಮ್ಮೇಳನ-2026ಕ್ಕೆ ಚಾಲನೆ

ವೈದ್ಯರ ಸುರಕ್ಷತೆಗೆ ಸರಕಾರ ಮುಂದಾಗಲಿ

• ಬೆಂಗಳೂರು: ವೈದ್ಯಕೀಯ ಕ್ಷೇತ್ರದಲ್ಲಿ ಸಂಘರ್ಷದಿಂದ ಸೇವೆಯತ್ತ ಸಾಗುವ ಅಗತ್ಯವಿದೆ. ವೈದ್ಯರ ಸುರಕ್ಷತೆಯನ್ನು ಸರ್ಕಾರ ಮತ್ತು ಸಮಾಜ ಖಚಿತಪಡಿಸಿಕೊಳ್ಳಬೇಕು ಎಂದು ಬಿಜಿಎಸ್ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಕಾಶನಾಥ ಸ್ವಾಮೀಜಿ ಕರೆ ನೀಡಿದರು.

ನಗರದ ಬಿಜಿಎಸ್ ಗ್ಲೋಬಲ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನಲ್ಲಿ ಆಯೋಜಿಸಲಾಗಿದ್ದ ಮೆಡಿವಿಷನ್ ಕರ್ನಾಟಕ ರಾಜ್ಯ ಸಮ್ಮೇಳನ 2026 ಅನ್ನು ಉದ್ಘಾಟಿಸಿ ಮಾತನಾಡಿದ ಅವರು, ವೈದ್ಯರ ಸುರಕ್ಷತೆ, ಮಾನಸಿಕ ಆರೋಗ್ಯ ಮತ್ತು ಆರೋಗ್ಯ ಸೇವೆಯ ವಾಣಿಜ್ಯೀಕರಣದ ಕುರಿತು ಕಳವಳ ವ್ಯಕ್ತಪಡಿಸಿ, ವೈದ್ಯಕೀಯ ವೃತ್ತಿಯಲ್ಲಿ ನೈತಿಕತೆಯ ಕುಸಿತವು ವೈದ್ಯರು ಮತ್ತು ಸಮಾಜದ ನಡುವಿನ ನಂಬಿಕೆಯನ್ನು ದುರ್ಬಲಗೊಳಿಸಿದೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿದ್ದ ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಡಾ. ಎಂ. ಕೆ. ರಮೇಶ್ ಅವರು ವೈದ್ಯಕೀಯ ವೃತ್ತಿಯಲ್ಲಿ ನೈತಿಕತೆಯ ಕುಸಿತ ಮತ್ತು ಅತಿಯಾದ ವಾಣಿಜ್ಯೀಕರಣದ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಸಂಸದ ಡಾ. ಸಿ.ಎನ್. ಮಂಜುನಾಥ್ ಅವರು ಮಾತನಾಡಿ, ಯುವ ವೈದ್ಯರಿಗೆ ರೋಗಿ ಕೇಂದ್ರಿತ ಚಿಕಿತ್ಸೆ ಮತ್ತು ನೈತಿಕ ವೃತ್ತಿಪರತೆಯ ಬಗ್ಗೆ ಸ್ಫೂರ್ತಿ ತುಂಬಿದರು. ಈ ಸಂದರ್ಭದಲ್ಲಿ ಸಮ್ಮೇಳನದಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಬಳಕೆ, ನವೀನ ದಂತ ಇಂಪ್ಲಾಂಟಾಲಜಿ ಮತ್ತು ವೈದ್ಯಕೀಯ-ಕಾನೂನು ನೈತಿಕತೆಗಳ ಕುರಿತು ತಾಂತ್ರಿಕ ಚರ್ಚೆಗಳು ಹಾಗೂ ಕಾರ್ಯಾಗಾರಗಳು ನಡೆದವು.

ಎಬಿವಿಪಿ ಆಯೋಜಿಸಿದ್ದ ಈ ಕಾರ್ಯಕ್ರಮವು ಭಾರತದಲ್ಲಿ ಸುರಕ್ಷಿತ, ಸುಲಭದ ಮತ್ತು ಭವಿಷ್ಯಕ್ಕೆ ಸಿದ್ಧವಾಗಿರುವ ಆರೋಗ್ಯ ವ್ಯವಸ್ಥೆಯನ್ನು ನಿರ್ಮಿಸುವ ಗುರಿ ಹೊಂದಿದೆ. ಈ ಸಮ್ಮೇಳನದಲ್ಲಿ ರಾಜ್ಯದ 64 ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕಾಲೇಜುಗಳ 600ಕ್ಕೂ ಹೆಚ್ಚು ವಿದ್ಯಾರ್ಥಿಗಳು, ತಜ್ಞ ವೈದ್ಯರು ಮತ್ತು ಸಂಶೋಧಕರು ಪಾಲ್ಗೊಂಡಿದ್ದರು.



ಪೊಲೀಸ್ ಮಾಸಿಕ ಜನಸಂಪರ್ಕ ಸಭೆ: ಸಾರ್ವಜನಿಕರೊಂದಿಗೆ ಆಯುಕ್ತರ ಸಂವಾದ

ನಾಗರಿಕರ ಸುರಕ್ಷತೆ ನಮ್ಮ ಪ್ರಥಮ ಆದ್ಯತೆ



> ಪೊಲೀಸರು ಜನರ ಮನೆ ಬಾಗಿಲಿಗೆ ಹೋಗಿ ಸಮಸ್ಯೆಯನ್ನು ಕೇಳುವ ಪೊಲೀಸ್ ಉಪಕ್ರಮದ ಬಗ್ಗೆ ಜನರಿಂದ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಇದರಿಂದ ಡ್ರಗ್ಸ್ ಜಾಲದ ಬಗ್ಗೆ ಹೆಚ್ಚಿನ ಮಾಹಿತಿ ಲಭಿಸುತ್ತಿದೆ. ಈ ಕಾರ್ಯಕ್ರಮ ಸಮುದಾಯ ಮತ್ತು ಪೊಲೀಸರ ನಡುವಿನ ಅಂತರವನ್ನು ಕಡಿಮೆ ಮಾಡಿದೆ.
>
> ■ **ಸೀಮಂತ್ ಕುಮಾರ್ ಸಿಂಗ್,** ನಗರ ಪೊಲೀಸ್ ಆಯುಕ್ತ

• ಬೆಂಗಳೂರು: ಸಾರ್ವಜನಿಕರ ಸುರಕ್ಷತೆ ಮತ್ತು ನೆಮ್ಮದಿಯ ಜೀವನವೇ ನಮ್ಮ ಆದ್ಯತೆ. ಜನರ ದೈನಂದಿನ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯು ಸೇತುವೆಯಾಗಿ ಕೆಲಸ ಮಾಡಲಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಹೇಳಿದರು.

ಇಂದಿರಾನಗರದ ಇಎಸ್‌ಐಸಿ ನರ್ಸಿಂಗ್ ಕಾಲೇಜು ಸಭಾಂಗಣದಲ್ಲಿ ಶನಿವಾರ ನಡೆದ ಮಾಸಿಕ ಜನಸಂಪರ್ಕ ಮತ್ತು ಸಂಚಾರ ಸಂಪರ್ಕ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಾರ್ವಜನಿಕರೊಂದಿಗೆ ನೇರ ಸಂವಾದ ನಡೆಸಿ, ಪ್ರತಿಯೊಂದು ಅಹವಾಲನ್ನು ಆಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಥಳದಲ್ಲೇ ಸೂಚನೆಗಳನ್ನು ನೀಡಿದರು. ಮುಂಬರುವ ಐಪಿಎಲ್ ಕ್ರಿಕೆಟ್ ಸಂದರ್ಭದಲ್ಲಿ ನಡೆಯುವ ಅಕ್ರಮ ಬೆಟ್ಟಿಂಗ್ ಜಾಲಗಳ ಬಗ್ಗೆ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿ ಪ್ರಶ್ನೆಗಳನ್ನು ಕೇಳಿದರು. ಇದಕ್ಕೆ ಉತ್ತರಿಸಿದ ಅವರು, ಅಕ್ರಮ ಐಪಿಎಲ್ ಬೆಟ್ಟಿಂಗ್ ಆ್ಯಪ್‌ಗಳು ಕೇವಲ ಹಣ ದೋಚುವುದಲ್ಲದೆ, ಜನರ ವೈಯಕ್ತಿಕ ಮಾಹಿತಿ ಕದ್ದು ಸೈಬರ್ ವಂಚನೆಗೆ ದಾರಿ ಮಾಡಿಕೊಡುತ್ತಿವೆ. ಇಂತಹ ಆ್ಯಪ್‌ಗಳ ಮೇಲೆ ನಮ್ಮ ಸೈಬರ್ ಕ್ರೈಂ ವಿಭಾಗ ತೀವ್ರ ನಿಗಾ ಇರಿಸಿದೆ. ಸಾರ್ವಜನಿಕರು ಇಂತಹ ಆಮಿಷಗಳಿಗೆ ಬಲಿಯಾಗಬಾರದು ಎಂದು ಕರೆ ನೀಡಿದರು.

ಅಧಿಕಾರಿಗಳ ಸ್ಪಂದನೆ: ನಾಗರಿಕರ ಅಹವಾಲುಗಳನ್ನು ಆಲಿಸಿದ ಪೊಲೀಸ್ ಆಯುಕ್ತರು, ಪಾಲಿಕೆ ಮತ್ತು ಇತರ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸಲಾಗುವುದು ಎಂದು ಭರವಸೆ ನೀಡಿದರು. ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಕಾರ್ತಿಕ್ ರೆಡ್ಡಿ ಮಾತನಾಡಿ, ಇಂದಿರಾನಗರ ಭಾಗದ ಸಂಚಾರ ದಟ್ಟಣೆ ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಇಂದಿರಾ ನಗರ ಭಾಗದ ನೂರಾರು ನಾಗರಿಕರು ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಇಲಾಖೆಗಳ ಸಮನ್ವಯಕ್ಕೆ ಸೂಚನೆ

ರಸ್ತೆ ಗುಂಡಿಗಳು, ಫ್ಲೈಓವರ್ ಸಂಪರ್ಕ ಮತ್ತು ಬೀದಿನಾಯಿಗಳ ಹಾವಳಿಯಂತಹ ನಾಗರಿಕ ಸಮಸ್ಯೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ಈ ಸಮಸ್ಯೆಗಳು ನೇರವಾಗಿ ಪೊಲೀಸ್ ಇಲಾಖೆಗೆ ಸಂಬಂಧಿಸದಿದ್ದರೂ, ಜಿಬಿಎ ಸೇರಿದಂತೆ ಇತರ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅವುಗಳಿಗೆ ಶೀಘ್ರ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಆಯುಕ್ತರು ಭರವಸೆ ನೀಡಿದರು.

ಅಪಾರ ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ಆಚರಣೆ

ವೀರಾಂಜನೇಯ ಸ್ವಾಮಿ ಬ್ರಹ್ಮರಥೋತ್ಸವ

• ಆನೇಕಲ್: ಗೋಪಸಂದ್ರ, ಗೇಟ್ ಬಳಿಯಲ್ಲಿರುವ ಇತಿಹಾಸ ಪ್ರಸಿದ್ಧ ದೇವಾಲಯವಾದ ಶ್ರೀ ವೀರ ಆಂಜನೇಯ ಸ್ವಾಮಿಯ ದೇವಾಲಯದ ಆವರಣದಲ್ಲಿ ಶ್ರೀ ವೀರ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ , 7ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಅಪಾರ ಭಕ್ತರ ಸಮ್ಮುಖದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು.

ಇನ್ನು ಶ್ರೀ ವೀರ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ, 7ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ ಅಂಗವಾಗಿ ಶ್ರೀ ಸೀತಾ ರಾಮ ಕಲ್ಯಾಣೋತ್ಸವ, ಕೋಲಾಟ. ಮತ್ತು ಪೂರ್ಣ ಕುಂಭ ಕಳಸದೊಡನೆ, ಹಳ್ಳಿಕಾರ್ ಎತ್ತುಗಳ ಮೆರವಣಿಗೆಯೊಂದಿಗೆ ಶ್ರೀವೀರ ಆಂಜನೇಯ ಸ್ವಾಮಿಯ ಬ್ರಹ್ಮ ರಥೋತ್ಸವ ಶ್ರದ್ಧಾಭಕ್ತಿಯಿಂದ ನೆರವೇರಿತು.

ಜತೆಗೆ ಈ ಬಾರಿ ವಿಶೇಷವಾಗಿ 70 ಕೆಜಿ ವಿಭಾಗದ ರಾಜ್ಯ ಮಟ್ಟದ ಶ್ರೀವೀರಾಂಜನೇಯ ಸ್ವಾಮಿ ಕಬಡ್ಡಿ ಉತ್ಸವವನ್ನು ಆಯೋಜಿಸಲಾಗಿತ್ತು. ಇನ್ನು ಕಾರ್ಯಕ್ರಮದಲ್ಲಿ ಆನೇಕಲ್ ಕ್ಷೇತ್ರದ ಶಾಸಕ ಬಿ.ಶಿವಣ್ಣ, ಕೇಂದ್ರ ಮಾಜಿ ಸಚಿವ ಎ.ನಾರಾಯಣ ಸ್ವಾಮಿ, ಸಮಾಜ ಸೇವಕರಾದ ಹುಲ್ಲಹಳ್ಳಿ ಶ್ರೀನಿವಾಸ್, ದೂಪೇನ ಅಗ್ರಹಾರ ನರೇಂದ್ರಬಾಬು, ನ್ಯೂಟನ್ ರೆಡ್ಡಿ, ಎನ್ ಬಿವಿ ಸೋಮಶೇಖರ್‌ರೆಡ್ಡಿ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಶ್ರೀವೀರಾಂಜನೇಯ ಸ್ವಾಮಿ ದೇವಾಲಯದ ಭಕ್ತ ಮಂಡಳಿಯವರು ಹಾಗೂ ಭಕ್ತರು ಮತ್ತು ಗ್ರಾಮಸ್ಥರು ಹಾಜರಿದ್ದರು.



ಪಾಲಿಕೆಯಲ್ಲಿ ಜನಸಂಪರ್ಕ ಸಭೆ | ಕಡ್ಡಾಯ ಅಳವಡಿಕೆಗೆ ಆಯುಕ್ತರ ಸೂಚನೆ

ಉದ್ಯಾನವನದಲ್ಲಿ ಎಲೆ ಸಂಸ್ಕರಣ ಘಟಕ

• ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ಯಾನದಲ್ಲಿ ಎಲೆ ಸಂಸ್ಕರಣ ಘಟಕವನ್ನು ಕಡ್ಡಾಯವಾಗಿ ಅಳವಡಿಸಲು ಕ್ರಮ ಕೈಗೊಳ್ಳುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯಲ್ಲಿ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಮಾತನಾಡಿ, ಉದ್ಯಾನವನಗಳಲ್ಲಿ ಮರಗಳು ಮತ್ತು ಸಸಿಗಳಿಂದ ಉದುರುವ ಎಲೆಗಳನ್ನು ಮೂಲದಲ್ಲಿಯೇ ಸಂಸ್ಕರಿಸಿ ಗೊಬ್ಬರ ತಯಾರಿಸಿ, ಅದೇ ಉದ್ಯಾನವನಗಳ ನಿರ್ವಹಣೆಗೆ ಬಳಸಿಕೊಳ್ಳಬಹುದಾಗಿದೆ. ಈ ನಿಟ್ಟಿನಲ್ಲಿ ಜಿಬಿಎ ವ್ಯಾಪ್ತಿಯ ಎಲ್ಲಾ ಉದ್ಯಾನವನಗಳಲ್ಲಿ ಕಡ್ಡಾಯವಾಗಿ ಎಲೆ ಸಂಸ್ಕರಣ ಘಟಕಗಳನ್ನು ಸ್ಥಾಪಿಸಲು ಸೂಚನೆ ನೀಡಿದರು.

ಶೇ.60ರಷ್ಟು ದೂರುಗಳು ವಾರದೊಳಗೆ ಇತ್ಯರ್ಥ: ಸಾರ್ವಜನಿಕ ಸಂಪರ್ಕ ಸಭೆಯಲ್ಲಿ ಕಸದ ಸಮಸ್ಯೆ, ಪಾದಚಾರಿ ಮಾರ್ಗ ದುರಸ್ತಿ, ಅನಧಿಕೃತ ಪಾರ್ಕಿಂಗ್, ಡಾಂಬರೀಕರಣ, ಬಿಡಾಡಿ ಹಸುಗಳ ನಿಯಂತ್ರಣ, ವಿದ್ಯುತ್ ದೀಪಗಳ ನಿರ್ವಹಣೆ, ಪಾರ್ಕ್ ನಿರ್ವಹಣೆ, ಅನಧಿಕೃತ ಕಟ್ಟಡ ನಿರ್ಮಾಣ ಸೇರಿದಂತೆ ವಿವಿಧ ದೂರುಗಳು ದಾಖಲಾಗಿವೆ. ಸ್ವೀಕರಿಸಲಾದ ದೂರುಗಳಲ್ಲಿ ಶೇ.60 ರಷ್ಟು ದೂರುಗಳನ್ನು ವಾರದೊಳಗಾಗಿ ಇತ್ಯರ್ಥಗೊಳಿಸಲಾಗುವುದು. ಉಳಿದ ಶೇ.40 ರಷ್ಟು ದೂರುಗಳು ದೀರ್ಘಕಾಲಿಕ ಸಮಸ್ಯೆಗಳಾಗಿರುವುದರಿಂದ ಅವುಗಳನ್ನು ಆದ್ಯತೆಯ ಮೇರೆಗೆ ತ್ವರಿತವಾಗಿ ಬಗೆಹರಿಸಲು ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿದರು.

ನಗರದಲ್ಲಿ ಕಸ ಸಂಗ್ರಹಣೆಗಾಗಿ ಕಾರ್ಯನಿರ್ವಹಿಸುತ್ತಿರುವ ಕಾಂಪ್ಯಾಕ್ಟರ್‌ಗಳು ವಾಣಿಜ್ಯ ಮಳಿಗೆಗಳಿಂದ ಬಲ್ಕ್ ವೇಸ್ಟ್ ಸಂಗ್ರಹಣೆ ಮಾಡುತ್ತಿಲ್ಲ ಎಂಬ ದೂರುಗಳು ಬಂದ ಹಿನ್ನೆಲೆಯಲ್ಲಿ, ಪ್ರತ್ಯೇಕ ಇಂಜಿನಿಯರ್‌ಗಳನ್ನು ನಿಯೋಜಿಸಿ ಸಮಗ್ರ ಪರಿಶೀಲನೆ ನಡೆಸಿ ಮುಂದಿನ ವಾರದಲ್ಲಿ ವರದಿ ಸಲ್ಲಿಸಲು ಸೂಚನೆ ನೀಡಿದರು.



ತಿಂಗಳ ನಂತರ ಮತ್ತೆ ಸಭೆ

ಇಂದು ನಡೆದ ಸಾರ್ವಜನಿಕ ಸಂಪರ್ಕ ಸಭೆಯಲ್ಲಿ 65ಮಂದಿ ನಾಗರಿಕರು ಭಾಗವಹಿಸಿ ತಮ್ಮ ಅಹವಾಲುಗಳನ್ನು ಸಲ್ಲಿಸಿದರು. ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಲು ಸೂಚನೆ ನೀಡಲಾಯಿತು. ಮಾರ್ಚ್ 26ರಂದು ಮತ್ತೊಮ್ಮೆ ಸಾರ್ವಜನಿಕ ಸಂಪರ್ಕ ಸಭೆ ನಡೆಸಲಾಗುವುದು. ನಾಗರಿಕರ ಸಮಸ್ಯೆಗಳು ಬಗೆಹರಿಯದಿದ್ದಲ್ಲಿ ಮತ್ತೆ ಸಭೆಯಲ್ಲಿ ಹಾಜರಾಗಿ ದೂರು ಸಲ್ಲಿಸಲು ಸೂಚನೆ ನೀಡಲಾಯಿತೆಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ತಿಳಿಸಿದರು.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಓ.ಮಿಸ್. ಸಂ. 145/2026

[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಓ.ಮಿಸ್. ಸಂ. 146/2026

[illegible]

ಸಾರ್ವಜನಿಕ ಪ್ರಕಟಣೆ

[illegible]

ನ್ಯಾಯಾಲಯದ ಆದೇಶದ ಮೇರೆಗೆ

ಶಿರಸ್ತೇದಾರರು, ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ದೊಡ್ಡಬಳ್ಳಾಪುರ

[illegible]

IN THE COURT OF THE PRINCIPAL CIVIL JUDGE AND JMFC AT SIDLAGHATTA

Crl. Misc. No: 104/2026.

BETWEEN : 1. Smt. Shivamma W/o Late Anjinappa, Aged about 45 years,
2. Sri. Ambarish S/o Late Anjinappa. Aged about 22 years, **3. Sri. Anand** S/o Late Anjinappa Aged about 19 years, All R/a Dabaragananahalli Village, Kasaba Hobli, Sidlaghatta Taluk. | PETITIONERS

AND

V/S

The Tahasilder Sidlaghatta, Sidlaghatta Taluk. | RESPONDENT

DRAFT PAPER PUBLICATION

That the Petitioners herein filed the above petition against the respondent to obtain the death certificate of the Father-in-law of Petitioner No.1, Grandfather of Petitioner No.2 and 3 by namely **Sri. Govindappa** S/o Late Hanumanthappa demised **on : 03.05.1967** at Dabaraganahalli Village, Kasaba Hobli, Sidlaghatta Taluk, Chikkaballapur District. This Hon'ble Court issued notice/Summons to respondent. If any other persons have interest or concerned to this person, So, you are hereby directed to present before the Hon'ble Court **on : 02.04.2026** at 11 a.m. either in persons or through pleader and file defense if require or else considering your absence failing which the matter will be heard ex-parte. Given under my hand on this 28th Feb 2026.

By Order of the Court
Sheristadar,
Civil Judge & JMFC Sidlaghatta.

Advocate for Petitioners : **Sri. A. Narayanaswamy,** B.Com., LL.B. Advocate Sidlaghatta Sidlaghatta Date : 21.02.2026

BEFORE THE HON'BLE II ADDL DISTRICT AND SESSIONS JUDGE AT KOLAR.

P & SC. NO.12/2026.

PETITIONERS : 1. Sri. Narasimha Reddy S/o late Chikka Narasimha Gowda Aged about 28 years, **2. Smt. Jayalakshmamma** W/o late. Narayanaswamy Aged about 56 years, **3. Naveena Kumari** D/o late Narayanaswamy Aged about 40 years, **4. Chaithra** D/o late Narayanaswamy, Aged about 36 years, **5. Kishore** S/o late Narayanaswamy Aged about 33 years, **6. Chandana** D/o late Narayanaswamy Aged about 30 years, All are R/at. Dinnehosahalli Village, Narasapura Hobli, Kolar Taluk.

V/S

RESPONDENTS : 1. Sri. Ramakrishnappa S/o late Nanjundappa Aged about 70 Years, **2. Smt. Rathnamma** D/o late Nanjundappa and Chokkamma W/o Sriramappa, Aged about 66 Years, **3. Smt. Sowbhagyamma** D/o late Nanjundappa and Chokkamma W/o Venkataswami reddy, Aged about 68 Years, **4. Smt. Sumithra** D/o late Nanjundappa and Chokkamma W/o Munivenkatareddy Aged about 64 Years, **5. Smt. Sarojamma** D/o late Nanjundappa and Chokkamma W/o Ramappa Aged about 60 Years, All are R/at. Chowdadenahalli Village, Narasapura Hobli, Kolar Taluk.

COURT NOTICE TO THE PERSON/S WHOM SO IT CONCERN

Whereas, the petitioner has filed the above petition prayer to pass an order of probate in respect of registered will No. KLR-3-00118-2015-16 dated 03-12-2015 same as registered **on : 03-12-2015,** executed by Smt. Chokkamma W/o late. Nanjundappa, R/o. Chodadenahalli Village, Narasapura Hobli, Kolar Taluk and Dist. In favour of the petitioner No.1 and 2nd petitioner Husband and Petitioner No.3 to 6 father in respect of the petition schedule properties. The said Smt. Chokkamma W/o late Nanjundappa was died on 14-12-2018.

Take notice that the case has been adjurned to **08-04-2026** for appearance of the person/s who are having any interest over in this court in person/s are here by summoned to appear on 11 'O' clock. To answer the claim and you are directed to produce on that day all the documents upon which intend or rely in support of your defence. Take notice that in default of your appearance on the day above mentitioned, the petition will be heard and detemined in your absence.

Given under my hand and the seal of the Court, this the day of 27th February 2026.

SCHEDULE

1. The Property bearing Sy.No.213 Total Measuring 3 acres 25 guntas out of it 28 guntas Situated at Narasapura Village, Narasapura Hobli, Kolar Taluk and District. East By : Kere Angala and land of Besthara Narayanappa, West By : Land of Pilleppa North By : Road, South By : Land of Pilleppa.

BY ORDER OF THE COURT,
Chief Administrative Officer
Pri. District & Sessions Court Kolar.

Advocate for petitioners :
S. KIRAN KUMAR, Kolar.
Place: Kolar. Date: 24/2/2026.

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಓ.ಮಿಸ್. ಸಂಖ್ಯೆ 858/2026

[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಓ.ಮಿಸ್. ಸಂಖ್ಯೆ 72/2026

[illegible]

ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಓ.ಮಿಸ್. ಸಂಖ್ಯೆ 116/2026

[illegible]

ಮಾನ್ಯ 1ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ದೊಡ್ಡಬಳ್ಳಾಪುರ

ಓ.ಮಿಸ್. ಸಂಖ್ಯೆ 115/2026

[illegible]

ಸಿ.ಮಿಸ್. ಸಂಖ್ಯೆ : 206/2026

[illegible]

ಸಿ.ಮಿಸ್. ಸಂಖ್ಯೆ : 345/2026

[illegible]

ಜಾಹೀರಾತಿಗಾಗಿ ಸಂಪರ್ಕಿಸಿ:

9845438807 / 9611755391

IN THE COURT OF THE HON'BLE SMALL CAUSES COURT AT BANGALORE (SCCH-7)

S.C. No. 174/2025

BETWEEN : THE STATE BANK OF INDIA
SUDHAMNAGAR Branch, No.110/5, Lalbhag Road, Sudhamnagar, Bengaluru-560027. Represented by its Manger Pragathi
...PLAINTIFF

AND : Mr. BHAITI BORI ...DEFENDANT

SUMMONS TO DEFENDANT BY WAY OF PAPER PUBLICATION

Mr. BHAITI BORI, S/o. Powali Bori, Aged about 36 years, No. 205, 4th Cross, Sudhamnagar, M/s TRAIL BLAZER PVT LTD, Lalbagh Road, Bangalore - 560027. Ph:8892970869.
...DEFENDANT

Whereas, the Plaintiff has filed a suit Recovery of money instituted the present suit, for sum of **Rs.1,97,842/- (Rupees One Lakhs Ninety Seven Thousand Eight Hundred and Forty Two Rupees Only),** and future interest at contractual rate together with other applicable expenses, charges from the date of NPA till closure of loan. Hence you are hereby summoned to appear before court, person or through a Pleader **on 09.04.2026 at 11 A.M.** to answer the same failing which suit will be disposed off ex-parte.

Given under my hand and the seal of the Court this 26th day of February 2026.

By order of the Court, Assistant Registrar, Court of Small Causes, Bangalore.

J. SATHISH KUMAR, Advocate
EWS, 16/2, 1st Cross, 2nd Main, 2nd Stage, KHB (AD Halli), Basaveshwaranagar, Bengaluru - 560 079. Mob. : 9448448238
Email : gsnadvocates@yahoo.com

ಮಾನ್ಯ ಪ್ರಧಾನ (ಹಿರಿಯ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ

ಆರ್.ಎ.ನಂ: 22/2025

[illegible]

DRAFT PAPER PUBLICATION IN THE COURT OF THE I ADDL SENIOR CIVIL JUDGE AT KOLAR.

RA No.48/2019.

Between : Munivenkatappa and others. ...Appellants

And

Smt. V. Manjula and others. ...Respondents

Gandhinagar Gangappa S/o Nandamballi Venkataravanappa, Aged about 60 years, Care of Thambanna, Arabikothanur Village, Vokkaleri Hobli, Kolar Taluk. ...**Respondent No.3**

NOTICE TO RESPONDENT NO.3, THROUGH PAPER PUBLICATION AS PER UNDER ORDER 5 RULE 20 OF CPC.

Whereas, the plaintiffs have preferred the above suit against the Respondent challenging the judgement and decree passed in the OS No.631/2013 dated **02/11/2018,** on the file of III Addl Civil Judge and JMFC at Kolar. This Hon'ble court has been posted the above case **on : 07.04.2026** for your appearance either personally or through counsel at about, before this Hon'ble court. If you failed to appear before this Hon'ble court, you will be placed exparte and case will be proceed in your absence.

Given under my seal and signature on this 28th day February of 2026 at Kolar.

By order of the court
Shirastehdar,
Pri Senior Civil Judge & CJM, At Kolar.

Advocate for Plaintiffs :
A. Lakshminarayana, Kolar, Dated:

PUBLIC NOTICE

Under the instructions of my client Mr. Srikantha Sri Srinivasa Kumar Meesala, the Owner of the building bearing No. Site No. 52 1/2, 18th Cross Road, Rajiv Gandhi Nagar, H.S.R Layout, Bommanahalli, Bengaluru - 560102, Mobile: 9845779584, Email: Srikantha.m@gmail.com, It is hereby notified to the general public and in particular to all occupants, residents, licensees, vendors, service providers, and any person dealing with the Said Premises that the Operations / Management Agreement dated June 2025 and the special power of attorney executed Owner Mr. Srikantha Sri Srinivasa Kumar Meesala in favour of M/s COLIFE ADVISORY Pvt. Ltd. has been lawfully revoked and terminated vide legal notice dated 12-02-2026 on account of Material breaches of contractual terms by M/s. Colife Advisory Pvt. Ltd.,

With immediate effect from the date of this Notice:

M/s COLIFE ADVISORY Pvt. Ltd., its directors, officers, employees, agents, representatives, or any person claiming through or under them have no right, title, interest, or authority whatsoever in respect of the "Colive 1264 Richmond PG" building bearing No. Site No. 52 1/2, 18th Cross Road, Rajiv Gandhi Nagar, H.S.R Layout, Bommanahalli, Bengaluru – 560102, hereinafter referred as Said Premises. They are specifically restrained from: Collecting rent, deposits, maintenance charges, or any other amounts; Entering into, renewing, or representing any tenancy / leave and license / accommodation arrangements; Representing themselves as authorized agents of the Owner; Interfering in the possession, management, or administration of the Said Premises. Any transaction entered into with them after issuance of this Notice shall be void ab initio and at the sole risk, cost, and consequence of the concerned party.

The general public, financial institutions, vendors, and all concerned are hereby cautioned not to enter into any transaction with M/s COLIFE ADVISORY Pvt. Ltd. in respect of the Said Premises. The Owner shall not be liable for any loss or damages arising from unauthorized dealings.

ANUPAMA M.V, B.A.L., L.L.M, Advocate
No. G-5, Gokula Residency, G.S. Palya Main Road, Konappana Agrahara Village, Electronic City Post, Bengaluru - 560 100
PH-9901423129 Date: 01/03/2026

BEFORE THE MOTOR ACCIDENTS CLAIMS TRIBUNAL AT BANGALORE (SCCH-06)

M.V.C 4661/2025

PETITIONER: Naruddin Ghazi and another

-V/s -

RESPONDENTS: Muthu Parasuraman and others

To, **Muthu Parasuraman,** S/o Parasuraman Beeman, R/a No. 10, Parvathi Nagar, Attibele, Anekal Taluk, Bangalore district. ... **RESPONDENT No.1**

NOTICE TO FIRST RESPONDENT

Whereas the petitioner above named has filed the above case against you for claiming compensation of Rs. 50,00,000/- for the death of Mohd. Kaif in a road traffic accident which was occured on 05.03.2025 at about 5:00 A.M. on NH-48, near Channayyanahatti gate, Chitradurga taluk and district, and you are the R.C. owner of Lorry bearing Reg. No. KA-51-D-3195 involved in the said accident. Hence, you are hereby summoned to appear before SCCH-06, M.A.C.T. Bangalore, in person or through a pleader on **06/04/2026 at 11:00 A.M.** to answer the claim and if you are fails to appear on the above said date of hearing the matter will be hear in your absence without any further notice.

Issued under my hand and seal of this Hon'ble court on this 28/02/2026.

By order of the Court, Assistant Registrar, Court of Small Causes, Bangalore

B.S. MANJUNATH, Advocate
No. 7, HMS complex, Cubbonpet Main Road, Bangalore-02

BEFORE THE MOTOR ACCIDENT CLAIMS TRIBUNAL AT BENGALURU (SCCH-05)

MVC No. 9052/2024

PETITIONER: VEDAVATHI and OTHERS. -V/s-

RESPONDENTS : Mohammed Tameem and another.

NOTICE TO RESPONDENT No.1

R1. MOHAMMED TAMEEM, S/o Mohammed Shafeeq, R/ at #1312 EWS, 3rd Cross, Rajiv Nagar, St.Pauls, School, Mysore-570019.

NOTICE

Whereas the petitioner's had filed the above claim petition against you for compensation of death of KUMAR in a road accident occurred on 28/11/2024 at about 8:30.PM at SH-33 TM Road at Haramapura gate, Kasaba Hobli, Kunigal Taluk, Tumkur Dist. Deceased was riding the bike bearing reg No: KA-02-ET-6771, at that time, the driver of Lorry dashed against the Deceased bike, your lorry bearing reg No. KL-55-A-1327, for compensation of Rs 50,00,000/- (Rupees Fifty lakhs only) and it stands posted to **06-04-2026.**

You are hereby summoned to appear before this Hon'ble court (SCCH-05) in person by an advocate duly instructed able to answer to all material question relating to the claim at 11:00 A.M on **06-04-2026** To answer the claim. Hence, there in default of your Appearance on the said date and time the petition will be heard and determined in your absence.

Given under my hand and the seal of this court on 25-02-2026 at Bengaluru.

By order of the Court, Assistant Registrar, Court of Small Causes, Bengaluru.

G. P. SHIVAPRASAD, Advocate,
Opp. Court, B.M. Road, Kunigal, Tumkur Dist.

ಗೌರವಾನ್ವಿತ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ...

ಅರ್.ಮಿಸ್.ನಂ.30/2026

[illegible]

PUBLIC NOTICE

FOR LOST DOCUMENT

This is informing the general public notice that my client **Mr. Yusuf Lanewala,** son of Mr. Taherali J Lanewala, R/a: Flat No. F-0224, Amber, Brigade Lake Front, Sonnenahalli Village, Seetharampalya, Whitefield, Bengaluru-560048, has irretrievable **lost the original Sale Deed dated** 15-02-2016, Registered as Document No. vide Document No.MDP-1-12747/2018-2019 of Book No. I, stored in CD No. MDPD281, registered before the sub Registered Mahadevapura, Bangalore. My client has Lodged a Police Complaint for lost article on 01-02-2026 under acknowledgment issued by the Bengaluru City Police, Lost Report No. 2038773/2026.

If anybody is having any objection, claim, interest, dispute for the above intended sale transaction, he/she/they may contact the undersigned with the documentary proof substantiating his/her/their objections/claims/details of dispute/s with in seven (A) days from the date of this publication, failing which, my client will proceed to complete the sale transaction with the above owners as if there are no third party claims/objections/disputes in respect of the Schedule B and C Property and thereafter no claims/objections/disputes will be entertained.

SCHEDULE 'A' PROPERTY (DESCRIPTION OF ENTIRE PROPERTY)

All that piece and parcel of the property bearing joint BBMP khatha No 161(Earlier) bearing (1) Survey Number 27, measuring 3 Acres 37 Guntas, (2) Survey Number 28, measuring 4 Acres 27.16 Guntas, (3) Survey Number 29 measuring 5 Acres and (4) Survey Number 30, measuring 6 Acres 34 Guntas all situated at Sonnenahalli Village, K.R. Puram Hobli, Bangalore East Taluk, Bangalore District and (5) Plot No 5-C of Doddanekkundi 1st phase, Industrial Area situated in Survey Number 73 (part) of Doddanekkundi village, K.R Puram Hobli, Bangalore East Taluk, Bangalore District measuring 7.91 Guntas), measuring in total 20 Acres 26.07 Guntas, situated at Sonnenahalli Village, K. R. Puram Hobli, Bangalore East Taluk, Bangalore District, converted for non-agricultural purposes by the following Official Memoranda.

BBMP Khata No.	Survey No.	Extent	Official Memorandum No.	Date
525	Part 5 C	801 Sq.Mtrs		
157 & 157/1	Sy.No.27	3 acres 37 guntas	Bis.ALN(E)SR:(KH):210/06-07	04-11-2008
162	Sy.No.28	4 acres 30 guntas	Bis.ALN(E)SR:(KH):98/08-09	15-12-2008
163	Sy.No.29	5 acres 03 guntas	Bis.ALN(E)SR:(KH):99/08-09	15-12-2008
161	Sy.No.30	6 acres 34 guntas	Bis.ALN(E)SR:(KH):97/08-09	15-12-2008

The Above Property is bounded on the - **East By :** Seetharampalya Road, Lake & Part of Sy.No.30, **West By :** Doddanakundi Village Boundary, **North by :** Sy. Nos. 31 & part of Sy. No. 30, **South by :** ITPL Main Road.

After excluding land relinquished for Park & Open Spaces and RMP Road, balance area available for UDS is 16.898 Acres which is distributed among apartment owners.

SCHEDULE 'B' PROPERTY : (UNDIVIDED INTEREST AGREED TO BE SOLD)

485.83 Sq.ft., of undivided share, right tile interest and ownership in the land in Schedule "A" Property

SCHEDULE 'C' PROPERTY : (DESCRIPTION OF THE APARTMENT)

All the Residential Apartment bearing **Flat No. F-0224,** in Second Floor of **"F"** Wing in Block **"Amber"** of the Project **"BRIGADE LAKEFRONT"** in the Schedule "A "Property and measuring **1330 Sq.ft.,** of super built-up area with vitrified tile flooring and proportionate share in common areas such as passages, lobbies, lifts, staircases and other areas of common use with exclusive right to use One Top Covered Car Parking space at Basement Levels and Apartment is bounded on the - **East By :** Open Space; **West By :** Apartment No. E-0223, **North by :** Open Space; **South by :** Apartment No. F-0221.

Bangalore
Date: 28-02-2026

B.R. NETRAVATHI, Advocate
OFF: No.11, 1st Floor, S.L.V.Complex, Near Axis Bank, Hoodi Circle, Mahadevapura Post ITPL Main Road and Whitefield Main Road, Bangalore - 560 048. Phone : 9980330509

IN THE COURT OF XXXI ADDL CITY CIVIL & SESSIONS JUDGE AT BANGALORE

P & SC No 73 of 2026 (CCH No.14)

1. Sri. R. Narayana Murthy, S/o Late P.K. Ramaiah Shetty and Dhanalakshmamma aged about 73 years, **2. Smt. Narayana Murthy Sashikala,** W/o R. Narayana Murthy, aged about 58 years. **3. Karthik. N,** S/o R. Narayana Murthy, aged about 43 years, Residents of No 169, 7th cross, 7th Main, 2nd block, Jayanagar, Bangalore South, Bangalore- 560 011. Phone No: 9845287654

...Petitioners -V/s-

-NIL- ...Respondents.

PUBLIC NOTICE

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ **New e-Auction Bidding user manual** ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು **https://kppp.karnataka.gov.in** ವೆಬ್‌ಸೈಟ್ ನಿಂದ ನಿಗದಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ನಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ICICI** ಬ್ಯಾಂಕ್‌ಗೆ **DEBIT CARD/CREDIT CARD/NET BANKING** ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MDA Mysore, Bank of Baroda, Account No.89260100004660 (IFSC Code No. BARB0VJMUDA,** 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು **https://kppp.karnataka.gov.in** ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) "ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಶೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಶಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಶಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ.

19 "ನಿವೇಶನಗಳ ಸ್ಥಳದ (**Location**), ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –
ಅ) ವಲಯ ಕಛೇರಿ–1 – 1. ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ – ಶ್ರೀಮತಿ.ರೂಪಶ್ರೀ, ಸಾ.ಅ., ಮೊಬೈಲ್ ನಂ.9740029156. ಆ) ವಲಯ ಕಛೇರಿ–2– ದಟ್ಟಗಳ್ಳಿ 3ನೇ ಹಂತ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಈ) ವಲಯ ಕಛೇರಿ–4– ಹೆಬ್ಬಾಳು 2ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್.,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಊ) ವಲಯ ಕಛೇರಿ–6 – ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಲಲಿತಾದ್ರಿನಗರ (ದಕ್ಷಿಣ) – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಋ) ವಲಯ ಕಛೇರಿ–8 – ಸಾತಗಳ್ಳಿ 2ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ, ವಸಂತನಗರ – ಶ್ರೀಮತಿ. ಮೇಘನ, ಕಿ.ಅ., ಮೊಬೈಲ್ ನಂ.9480884440. 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/02/KSMCA/992/2025-26

ಮಳೆ ನೀರು ಸರಾಗವಾಗಿ ಹರಿಯಲು ವ್ಯವಸ್ಥೆ ಮಾಡಿ



»» ಮಳೆಗೂ ಮೊದಲೇ ಬಾಕಿ ಕಾಮಗಾರಿ ಪೂರ್ಣಗೊಳಿಸಲಿ: ಪೂರ್ವ ನಗರ ಆಯುಕ್ತರ ಸೂಚನೆ

• **ಬೆಂಗಳೂರು:** ನಗರದಲ್ಲಿ ಮಳೆಗಾಲದ ಸಮಯದಲ್ಲಿ ಜಲಾವೃತ ಸಮಸ್ಯೆಯನ್ನು ತಡೆಯಲು ಹಾಗೂ ಮಳೆನೀರು ಸರಾಗವಾಗಿ ಹರಿಯುವಂತೆ ವ್ಯವಸ್ಥೆ ಮಾಡುವ ಉದ್ದೇಶದಿಂದ ಕೈಗೊಳ್ಳಲಾಗುತ್ತಿರುವ ಕಾಮಗಾರಿಗಳಲ್ಲಿ ಬಾಕಿ ಇರುವ ಕೆಲಸವನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕೆಂದು ಪೂರ್ವ ನಗರ ಪಾಲಿಕೆ ಆಯುಕ್ತರಾದ ಡಿ.ಎಸ್.ರಮೇಶ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿರುವ ಬೃಹತ್ ಮಳೆ ನೀರು ಕಾಲುವೆ ತಡೆಗೋಡೆ ನಿರ್ಮಾಣ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದ ಅವರು, ಗೆದ್ದಲಹಳ್ಳಿ ರೈಲ್ವೆ ವೆಂಟ್ ಕಾಮಗಾರಿ ಸಂಬಂಧ ರೈಲ್ವೆ ಇಲಾಖೆಗೆ ಪಾವತಿಸಬೇಕಿರುವ ಬಾಕಿ ಹಣವನ್ನು ತ್ವರಿತವಾಗಿ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದ್ದು, ಈಗಾಗಲೇ ಕಾಸ್ಟಿಂಗ್ ಮಾಡಿರುವ 1-ಬಾಕ್ಸ್ ಪುಶಿಂಗ್ ಕಾರ್ಯವನ್ನು ಮತ್ತು ಬಾಕಿ ಇರುವ 1-ಬಾಕ್ಸ್ ಕಾಸ್ಟಿಂಗ್ ಕಾಮಗಾರಿಯನ್ನು ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಬಿಡಬ್ಲ್ಯೂಎಸ್‌ಎಸ್‌ಬಿ ಎಸ್‌ಟಿಪಿ ಪ್ಲಾಂಟ್ ಸಮೀಪ ಯಲಹಂಕ ಮತ್ತು ಸರ್ವಜ್ಞನಗರ ಭಾಗಗಳಿಂದ ಬಂದು ಕಲ್ಕೆರೆಗೆ ಸೇರುವ ರಾಜಕಾಲುವೆ ರಿಟೈನಿಂಗ್ ವಾಲ್ ನಿರ್ಮಾಣ ಕಾಮಗಾರಿ ಹಾಗೂ ಕೊತ್ತನೂರು ಕಡೆಯಿಂದ ಬರುವ ರಾಜಕಾಲುವೆಯ ಜೋಡಣೆ ಕಾಮಗಾರಿಯನ್ನು ಪರಿಶೀಲಿಸಿದ ಆಯುಕ್ತರು ಒತ್ತುವರಿಯನ್ನು ತೆರವುಗೊಳಿಸಿ ಕಾಮಗಾರಿ ಶೀಘ್ರದಲ್ಲಿ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

ಬೆಳಗೆರೆ ಎಸ್‌ಟಿಪಿ ಪ್ಲಾಂಟ್ ಬಳಿ ರಾಜಕಾಲುವೆ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಬೆಳಗೆರೆ ರಾಜಕಾಲುವೆ ಒತ್ತುವರಿಗಳನ್ನು ತೆರವುಗೊಳಿಸಿ ಮಾರ್ಚ್ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ನಿರ್ದೇಶನ ನೀಡಿದರು. ಸಿದ್ದಾಪುರ ರಾಜಕಾಲುವೆ ಮಾರ್ಗದಲ್ಲಿನ ಅತಿಕ್ರಮಣ ತೆರವುಗೊಳಿಸಿ ನಿರ್ಮಿಸಿರುವ ರಿಟೈನಿಂಗ್ ವಾಲ್ ಕಾಮಗಾರಿಯನ್ನು ಪರಿಶೀಲಿಸಲಾಯಿತು. ಈ ಕಾಲುವೆಯು ಸಿದ್ದಾಪುರ ಕೆರೆಯಿಂದ ವರ್ತೂರು ಕೆರೆಯವರೆಗೆ ಸಂಪರ್ಕ ಹೊಂದಿದ್ದು, ಜಲಾವೃತ ತಡೆಯಲು ಮಹತ್ವದ ಪಾತ್ರ ವಹಿಸುತ್ತದೆ ಎಂದು ವಿವರಿಸಿದರು.

ಪ್ರೆಸ್ಟೀಜ್ ಓಜೋನ್ (ವರ್ತೂರು) ಬಳಿ ನಿರ್ಮಾಣವಾಗುತ್ತಿರುವ ರಾಜಕಾಲುವೆ ಕಾಮಗಾರಿಯ ಪ್ರಗತಿಯನ್ನು ಪರಿಶೀಲಿಸಿ, ಬಾಕಿ ಇರುವ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು, ರಾಮಪುರ ಕೆರೆಗೆ ಸಂಪರ್ಕ ಕಲ್ಪಿಸುವ ಬಿಳಿಶಿವಾಲೆ ರಾಜಕಾಲುವೆ ಕಾಮಗಾರಿಯನ್ನು ಏಪ್ರಿಲ್ ಒಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಮಳೆಗಾಲದ ವೇಳೆ ಜಲಾವೃತ ಸಮಸ್ಯೆ ತಡೆಯುವ ಉದ್ದೇಶದಿಂದ ರಾಜಕಾಲುವೆ ಕಾಮಗಾರಿಗಳಿಗೆ ಆದ್ಯತೆ ನೀಡಲಾಗುತ್ತಿದ್ದು, ಸಾರ್ವಜನಿಕರ ಸುರಕ್ಷತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ನಗರ ಪಾಲಿಕೆ ಬದ್ಧವಾಗಿದೆ ಎಂದು ತಿಳಿಸಿದರು. ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಹಾಜರಿದ್ದರು.

ಉದ್ಘಾಟನೆ



ಸಿರಿಧಾನ್ಯ ಉತ್ಪನ್ನಗಳ ಬಳಕೆಯನ್ನು ಪ್ರೋತ್ಸಾಹಿಸುವ ದಿಸೆಯಲ್ಲಿ ಯಲಹಂಕದಲ್ಲಿರುವ ಸಿಆರ್‌ಪಿಎಫ್ , ಬೆಂಗಳೂರು ಗುಂಪು ಕೇಂದ್ರ ಹಾಗೂ ಕೃಷಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀ ಅನ್ನ ಆಹಾರ ಮೇಳವನ್ನು ಸಿಆರ್‌ಪಿಎಫ್ ಕರ್ನಾಟಕ ವಿಭಾಗದ ಡಿಐಜಿ ಡಾ.ವಿಪಿನ್ ಕುಮಾರ್ ಉದ್ಘಾಟಿಸಿದರು.

ಕಿರುಸುದ್ದಿ

ಮಾ.4ರಂದು ಅಕ್ಕ ಸಂಸ್ಥೆ ರಜತ ಮಹೋತ್ಸವ

• **ಬೆಂಗಳೂರು:** ಅಮೆರಿಕದ ಕನ್ನಡಿಗರ ಅತೀ ದೊಡ್ಡ ಸಂಘಟನೆಯಾದ ಅಕ್ಕ ಸಂಸ್ಥೆಯಿಂದ ಅಮೆರಿಕದ ಫಿಲಡೆಲ್ಫಿಯಾ ನಗರದಲ್ಲಿ ಮಾ.4ರಂದು 25ನೇ ವರ್ಷದ ರಜತ ಮಹೋತ್ಸವವನ್ನು ಆಯೋಜಿಸಲಾಗಿದೆ. ಅಕ್ಕ ಸಂಸ್ಥೆಯ ಕಳೆದ 25 ವರ್ಷಗಳಿಂದ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ ಹಾಗೂ ಕನ್ನಡ ಸೇವೆಯನ್ನು ಉತ್ತೇಜಿಸುವ ಮಹತ್ವದ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದೆ. ಈ ಬೆಳ್ಳಿ ಹಬ್ಬದ ಸಂಭ್ರಮವು ವಿಶ್ವದ ಕನ್ನಡಿಗರ ಏಕತೆಯ ಪ್ರತೀಕವಾಗಿದ್ದು, ಅಮೇರಿಕಾದ ವಿವಿಧ ರಾಜ್ಯಗಳಿಂದ ಹಾಗೂ ಕರ್ನಾಟಕ ಸೇರಿದಂತೆ ಅನೇಕ ಕಡೆಗಳಿಂದ ಕನ್ನಡಾಭಿಮಾನಿಗಳು ಭಾಗವಹಿಸಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾಣಿಜ್ಯ ಹಾಗೂ ಉದ್ಯಮಿಗಳ ಸಮ್ಮೇಳನ, ವಿಶೇಷ ಪ್ರದರ್ಶನ ಮಳಿಗೆಗಳು, ಕನ್ನಡ ಸಿನಿಮಾಗಳು, ನಾಟಕಗಳ ಪ್ರದರ್ಶನಗಳು ಸೇರಿದಂತೆ ಹಲವು ವೈವಿಧ್ಯಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಕ್ಯಾನ್ಸರ್ ವಿರುದ್ಧ ಹೋರಾಟ ಸೀಮಿತವಲ್ಲ

• **ಕೆಂಗೇರಿ:** ಕ್ಯಾನ್ಸರ್ ವಿರುದ್ಧದ ಹೋರಾಟ ಕೇವಲ ಆಸ್ಪತ್ರೆಯ ಗೋಡೆಗಳ ಮೇಲೆ ಸೀಮಿತವಾಗಬಾರದು ಶಿಕ್ಷಣ, ಜಾಗೃತಿಯ ಮೂಲಕ ಜನರಿಗೆ ತಲುಪಿಸುವ ಕೆಲಸ ಆಗಬೇಕು ಎಂದು ಗ್ಲೆನೀಗಲ್ಸ್ ಬಿಜಿಎಸ್ ಆಸ್ಪತ್ರೆಯ ಸಿಒಒ ರವಿ ಬಾಗಲಿ ಹೇಳಿದರು. ಕೆಂಗೇರಿ-ಉತ್ತರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಗ್ಲೆನೀಗಲ್ಸ್ ಬಿಜಿಎಸ್ ಪ್ರೋಟೀನ್ ಅಂಗಸಂಸ್ಥೆ ಸಹಯೋಗದಲ್ಲಿ ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಆಯೋಜಿಸಿದ್ದ ದಿ ಹೀಲಿಂಗ್ ಸಿಂಫನಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಕ್ಯಾನ್ಸರ್ ಬಗ್ಗೆ ಎಚ್ಚರ ವಹಿಸಿ ಕ್ಯಾನ್ಸರ್ ಗುಣಲಕ್ಷಣಗಳ ಕಂಡರೆ ಹಾರ್ಮೋನ್ ಸಮಸ್ಯೆ ಎಂದು ನಿರ್ಲಕ್ಷ್ಯ ತೋರದೆ ಪ್ರಾಥಮಿಕ ಹಂತದಲ್ಲಿಯೇ ಚಿಕಿತ್ಸೆ ಪಡೆದುಕೊಳ್ಳಿ ಎಂದು ತಿಳಿಸಿದರು. ಕ್ಯಾನ್ಸರ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮುಂದಾಗಬೇಕು, ಕೇವಲ ಆಸ್ಪತ್ರೆಯ ಗೋಡೆಗಳ ಮೇಲೆ ಮತ್ತು ಕೊಠಡಿಯಲ್ಲಿ ಜಾಗೃತಿ ಮೂಡಿಸಿದರೆ ಸಾಲದು ಶಿಕ್ಷಣದ ಪಠ್ಯಕ್ರಮ, ಬೀದಿ ನಾಟಕ ಮಾಡುವ ಮೂಲಕ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಕ್ಯಾನ್ಸರ್ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕ್ಯಾನ್ಸರ್ ರೋಗಿಗಳ ಮಾನಸಿಕ ಉಲ್ಲಾಸ ನೀಡಲು ಸರಿಗಮಪ ಖ್ಯಾತಿಯ ಗಾಯಕರಿಂದ ಸಂಗೀತ ರಸಸಂಜೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಡಾ.ರಾಜೀವ್, ಡಾ. ಮಾತಂಗಿ, ಡಾ.ಸಿಂಧೂ, ಡಾ.ಧರ್ಮ, ಡಾ. ಕಿರಣ್, ಡಾ.ಗೋವಿಂದ ಡಾ. ಪ್ರೇರಣಾ ನೆಸರ್ಗಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಸಂಪರ್ಕ ರಸ್ತೆ ಅಭಿವೃದ್ಧಿಗೆ ಜಾಗ ವಶ

• **ಬೆಂಗಳೂರು:** ಓಆರ್‌ಆರ್-ಪಿಆರ್‌ಆರ್ ನಡುವೆ ಆರ್‌ಎಂಪಿ 24 ಮೀ.ಅಗಲದ ಸಂಪರ್ಕ ರಸ್ತೆ ಅಭಿವೃದ್ಧಿಗಾಗಿ 2-ಎಕರೆ ಜಾಗವನ್ನು ನಗರ ಪಾಲಿಕೆ ವಶಕ್ಕೆ ಪಡೆಯಲಾಯಿತು ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಹೇಳಿದರು. ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪರಿಷ್ಕೃತ ಮಹಾಯೋಜನೆ-2015ರ ಪ್ರಕಾರ ಹೊರ ವರ್ತುಲ ರಸ್ತೆಯಿಂದ ಪೆರಿಫೆರಲ್ ರಿಂಗ್ ರೋಡ್‌ಗೆ ಸಂಪರ್ಕ ಕಲ್ಪಿಸುವ ಪ್ರಸ್ತಾಪಿತ 24 ಮೀ. ಅಗಲದ ರಸ್ತೆ ಅಗಲೀಕರಣ ಕಾರ್ಯವನ್ನು ಅನುಷ್ಠಾನಗೊಳಿಸುವ ಸಲುವಾಗಿ ಅಗತ್ಯ ಭೂಸ್ವಾಧೀನ ಮತ್ತು ಆರ್‌ಡಿ ಸ್ವತ್ತು ವಶಕ್ಕೆ ಪಡೆಯಲು ಜಾರಿ ತಂಡ ರಚಿಸಲಾಗಿದೆ ಎಂದು ತಿಳಿಸಿದರು.

ರಾಜಾಜಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಕೆಡಿಪಿ ಸಭೆ: ಅಧಿಕಾರಿಗಳು ಭಾಗಿ

ನಾಗರಿಕರಿಗೆ ಮೂಲ ಸೌಲಭ್ಯ ದೊರಕಲಿ





• **ಬೆಂಗಳೂರು:** ರಾಜಾಜಿನಗರದ ವಿಧಾನಸಭಾ ವ್ಯಾಪ್ತಿಯ ವಾರ್ಡ್‌ಗಳಿಗೆ ಸಂಬಂಧಿಸಿದ ಸಮಸ್ಯೆ ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿ ಸಾರ್ವಜನಿಕರಿಗೆ ಪಾಲಿಕೆಯಿಂದ ಅಗತ್ಯ ಸೌಲಭ್ಯ ವಿಳಂಬವಿಲ್ಲದೆ ದೊರಕುವಂತಾಗಬೇಕು ಎಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ ಅಧಿಕಾರಿಗಳಿಗೆ ನಿರ್ದೇಶಿಸಿದರು.

ರಾಜಾಜಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಹಾಗೂ ಅಭಿವೃದ್ಧಿ ಕಾರ್ಯಗಳ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ಕಂದಾಯ ವಸೂಲಿಗೆ ಸೂಕ್ತ ಕ್ರಮ: ಅಧಿಕಾರಿಗಳು ಕ್ರಮಬದ್ಧ ವಾಗಿ ಕಂದಾಯ ಸಂಗ್ರಹ ಕಾರ್ಯವನ್ನು ನಿರ್ವಹಿಸಿ, ಆಸ್ತಿಗಳಿಗೆ ತಪ್ಪಾಗಿ ಕಂದಾಯ ಪಾವತಿಸಿರುವ ಪ್ರಕರಣ ಗಳನ್ನು ಪರಿಶೀಲಿಸಿ ಪರಿಷ್ಕರಿಸಿ ಕಂದಾಯವನ್ನು ವಸೂಲಿ ಮಾಡಬೇಕು. ಇದಲ್ಲದೆ, ದಾಖಲಾತಿಗಳನ್ನು ಡಿಜಿಟಲೀಕರಣ ಮಾಡುವ ಕಾರ್ಯಕ್ಕೆ ಹೆಚ್ಚಿನ ವೇಗ ನೀಡುವುದರೊಂದಿಗೆ, ನಿಗದಿತ ಅವಧಿಯಲ್ಲಿ ಅದನ್ನು ಪೂರ್ಣಗೊಳಿಸಬೇಕೆಂದು ನಿರ್ದೇಶನ ನೀಡಿದರು.

ಸಮರ್ಪಕ ಮೂಲಸೌಕರ್ಯ ಒದಗಿಸುವಿಕೆ: ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಸುರಕ್ಷತೆಯನ್ನು ಮತ್ತಷ್ಟು ಬಲಪಡಿಸುವ ಜೊತೆಗೆ ನಾಗರಿಕರಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದಕ್ಕೆ ಆದ್ಯತೆ ನೀಡುವಂತೆ ಹಾಗೂ ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

ಇ-ಖಾತಾ ಪ್ರಕ್ರಿಯೆ ಸರಳೀಕರಣ ಮತ್ತು ತ್ವರಿತ ವಿತರಣೆ

ಇ-ಖಾತಾ ನೀಡುವ ಪ್ರಕ್ರಿಯೆಯನ್ನು ಸರಳಗೊಳಿಸಿ ನಾಗರಿಕರಿಗೆ ಯಾವುದೇ ವಿಳಂಬವಿಲ್ಲದೆ ಇ-ಖಾತಾ ವಿತರಿಸಬೇಕೆಂದು ಕಂದಾಯ ವಿಭಾಗದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ಹೆಚ್ಚುವರಿ ಆಯುಕ್ತ ದಿಗ್ವಿಜಯ್ ಬೋಡ್ಕೆ, ಹೆಚ್ಚುವರಿ ಆಯುಕ್ತ (ಕಂದಾಯ ಹಾಗೂ ಆಡಳಿತ) ಮಂಜುನಾಥ್ ಸ್ವಾಮಿ, ಮುಖ್ಯ ಅಭಿಯಂತರ ವಿಶ್ವನಾಥ್ ಮತ್ತಿತರು ಹಾಜರಿದ್ದರು.

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಖಾಲಿ ಜಾಗಗಳಲ್ಲಿ ಕಸ ಎಸೆಯುವವರನ್ನು ಗುರುತಿಸಿ ದಂಡ ವಸೂಲಿ ಮಾಡಬೇಕು ಹಾಗೂ ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

■ **ಡಾ.ರಾಜೇಂದ್ರ ಕೆ.ವಿ., ಪಶ್ಚಿಮ ನಗರ ಪಾಲಿಕೆ ಆಯುಕ್ತ**

ಬ್ಲ್ಯಾಕ್ ಸ್ಪಾಟ್ ತೆರವಿಗೆ ಕ್ರಮ

ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಮರ್ಪಕ ಘನತ್ಯಾಜ್ಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ಎಜಿಎಂಗಳವರು ಯೋಜಿತ ಕಾರ್ಯಯೋಜನೆ ರೂಪಿಸಿ, ಆರೋಗ್ಯ ನಿರೀಕ್ಷಕರು, ಆರೋಗ್ಯ ಮೇಲ್ವಿಚಾರಕರ ಮೇಲ್ವಿಚಾರಣೆಯಲ್ಲಿ ಬ್ಲ್ಯಾಕ್ ಸ್ಪಾಟ್‌ಗಳನ್ನು ಸಂಪೂರ್ಣವಾಗಿ ತೆರವುಗೊಳಿಸುವಂತೆ ಹಾಗೂ ಅವು ಮರುಕಳಿಸದಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಪಶ್ಚಿಮ ನಗರ ಪಾಲಿಕೆ ಆಯುಕ್ತ ಡಾ.ರಾಜೇಂದ್ರ ಕೆ.ವಿ ಸೂಚನೆ ನೀಡಿದರು.

ಸಭೆಯಲ್ಲಿ ಸೂಚಿಸಿದ ಪ್ರಮುಖ ಅಂಶ

- ರಸ್ತೆ ಸುರಕ್ಷತೆಗೆ ಅಗತ್ಯವಾದ ಎಲ್ಲ ಕ್ರಮವನ್ನು ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ.
- ಉದ್ಯಾನಗಳಲ್ಲಿ ಅಳವಡಿಸಿರುವ ಪರಿಕರಗಳ ದುರಸ್ತಿ ಕೈಗೊಳ್ಳಲು ಹಾಗೂ ಒಣಗಿರುವ ಗಿಡವನ್ನು ಗುರುತಿಸಿ ಸೂಕ್ತ ಕ್ರಮ ವಹಿಸಬೇಕು.
- ರಸ್ತೆ ಬದಿಗಳಲ್ಲಿರುವ ಅಪಾಯಕರ ಮರ, ಕೊಂಬೆಯನ್ನು ಗುರುತಿಸಿ ಅಗತ್ಯವಿದ್ದಲ್ಲಿ ಕತ್ತರಿಸಿ, ನಂತರ ಸ್ಥಳವನ್ನು ಸಮರ್ಪಕವಾಗಿ ಸ್ವಚ್ಛಗೊಳಿಸಲು ಸೂಚನೆ.
- ಮಳೆ ಮುಂಜಾಗ್ರತಾ ದೃಷ್ಟಿಯಿಂದ ರಾಜಕಾಲುವೆ ಸ್ವಚ್ಛತಾ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳಲು ಸೂಚನೆ.
- ರಸ್ತೆಗಳಲ್ಲಿ ಅಗತ್ಯವಿರುವ ವಿದ್ಯುತ್ ದೀಪಗಳ ವ್ಯವಸ್ಥೆ ಮತ್ತು ಸಮರ್ಪಕ ನಿರ್ವಹಣೆಗೆ ಕ್ರಮವಹಿಸಬೇಕು.

ಗಮನ ಸೆಳೆದ ಸಾವಯವ ಉತ್ಪನ್ನಗಳು



»» ಜಿಕೆವಿಕೆ ಆವರಣದಲ್ಲಿ ರೈತ ಸಂತೆ: ಬೇಯಿಸಿದ ಹುರುಳಿಕಾಳು, ಗ್ರೀನ್ಸ್ ತರಕಾರಿ ಸಲಾಡ್

• **ಬೆಂಗಳೂರು:** ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ ರೈತ ಸಂತೆಯಲ್ಲಿ ಹುರುಳಿಕಾಳು ಕಟ್ಟಿನ ಪಾನೀಯ, ಬೇಯಿಸಿದ ಮೆಕ್ಕೆಜೋಳ, ಹಲಸಿನ ಹಣ್ಣು, ಮೈಕ್ರೋ ಗ್ರೀನ್ಸ್ ತರಕಾರಿ ಸಲಾಡ್ ಮತ್ತು ಸಾಂಪ್ರದಾಯಿಕ ಸಾವಯವ ಉತ್ಪನ್ನವನ್ನು ನೋಡುಗರ ಗಮನ ಸೆಳೆದವು.

ಜಿಕೆವಿಕೆ ಯಲ್ಲಿ ರೈತ ಸಂತೆಯನ್ನು ವಿಭಿನ್ನವಾಗಿ ಆಯೋಜಿಸುವ ಮೂಲಕ ಸಾವಿರಾರು ಜನರನ್ನು ಆಕರ್ಷಿಸಿತು. ಈ ಬಾರಿಯ ರೈತ ಸಂತೆ ಹಲವು ಹೊಸತನಗಳಿಗೆ ಸಾಕ್ಷಿಯಾಗಿತ್ತು. ಬೇಸಿಗೆ ನಿಮಿತ್ತ ಮರದ ತೋಪಿನಲ್ಲಿ ಈ ಬಾರಿಯ ಸಂತೆಯನ್ನು ವಿಭಿನ್ನವಾಗಿ ಆಯೋಜಿಸಲಾಯಿತು. ಈ ಸಂತೆಯಲ್ಲಿ ಮಾರಾಟಗೊಂಡ ಹುರುಳಿಕಾಳು ಕಟ್ಟಿನ ಪಾನೀಯ, ಬೇಯಿಸಿದ ಮೆಕ್ಕೆಜೋಳ, ತಾಜಾ ಹಲಸಿನ ಹಣ್ಣು, ತರಕಾರಿ ಸಲಾಡ್ ಮತ್ತು ಸಾಂಪ್ರದಾಯಿಕ ಸಾವಯವ ಉತ್ಪನ್ನಗಳು ವಿಶೇಷ ಆಕರ್ಷಣೆಯಾಗಿದ್ದವು. ಸುಮಾರು 25 ಸಾವಿರಕ್ಕೂ ಹೆಚ್ಚು ಸಾರ್ವಜನಿಕರು ಈ ಸಂತೆಯಲ್ಲಿ ಭಾಗವಹಿಸಿದ್ದರು.

ರೈತ ಸಂತೆ ದಿನದಿಂದ ದಿನಕ್ಕೆ ಹೆಚ್ಚು ಜನಪ್ರಿಯವಾಗುತ್ತಿದ್ದು, ಸಂತೆಯಲ್ಲಿ ರೈತರ ನೇರ ಮಾರುಕಟ್ಟೆಗೆ ಉತ್ತಮ ಅವಕಾಶಗಳಿದ್ದು, ಹಿಂದಿನ ದಿನಗಳಲ್ಲಿ ನಡೆಸುತ್ತಿದ್ದ ವಾರದ ಸಂತೆಗಳನ್ನು ಮಹಿಳಾ ಸ್ವಸಹಾಯ ಸಂಘಗಳ ಮೂಲಕ ವಿಶೇಷವಾಗಿ ಸಾವಯವ ಉತ್ಪನ್ನಗಳಿಗೆ ಹೆಚ್ಚು ಅಗತ್ಯತೆಯನ್ನು ನೀಡಲಾಗಿದೆ. ಇದರಿಂದಾಗಿ ಕೃಷಿಕರಿಗೆ ಉತ್ತಮ ಲಾಭಾಂಶದ ಜತೆಗೆ ಗ್ರಾಹಕರಿಗೆ ತಾಜಾ ಉತ್ಪನ್ನಗಳನ್ನು ಒದಗಿಸಬಹುದಾಗಿದೆ.

■ **ಡಾ.ಎಸ್.ವಿ.ಸುರೇಶ್, ಕುಲಪತಿ, ಜಿಕೆವಿಕೆ**

ರೈತ ಸಂತೆ ಗ್ರಾಮೀಣರ ಆರ್ಥಿಕತೆಗೆ ಬಲಕ್ಕೆ ಪ್ರೇರಣೆ

ಹೂವಿನ ವಿಭಾಗದಲ್ಲಿ ಪೂಜೆ ಹಾಗೂ ಅಲಂಕಾರಕ್ಕೆ ಬಳಸುವ ಸುಗಂಧಮಯ ಚೆಂಡು ಹೂವು ಹೆಚ್ಚು ಪ್ರಮಾಣದಲ್ಲಿ ಮಾರಾಟವಾಯಿತು. ಇದಲ್ಲದೇ ವಿವಿಧ ರೀತಿಯ ಸಾವಯವ ಉತ್ಪನ್ನಗಳು ಧಾನ್ಯಗಳು, ಗೊಜ್ಜುಗಳು, ಮಸಾಲೆಗಳು, ಗಾಣದ ಎಣ್ಣೆಗಳು ಮತ್ತು ಮನೆಮದ್ದು ಪದಾರ್ಥಗಳು - ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ಪಡೆದವು. ಈ ರೈತ ಸಂತೆಯಲ್ಲಿ ಗ್ರಾಹಕರು ಮಧ್ಯವರ್ತಿಗಳಿಲ್ಲದೇ ನೇರವಾಗಿ ರೈತರಿಂದ ಖರೀದಿ ಮಾಡುವ ಅವಕಾಶ ಪಡೆದರು. ಇದರಿಂದ ರೈತರಿಗೆ ಉತ್ತಮ ಬೆಲೆ ದೊರಕಿದರೆ, ಗ್ರಾಹಕರಿಗೆ ತಾಜಾ, ಸುರಕ್ಷಿತ ಮತ್ತು ಗುಣಮಟ್ಟದ ಉತ್ಪನ್ನಗಳು ಲಭ್ಯವಾಯಿತು. ಇಂತಹ ರೈತ ಸಂತೆ ಗ್ರಾಮೀಣ ಆರ್ಥಿಕತೆಗೆ ಬಲ ನೀಡುವುದರ ಜತೆಗೆ, ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿದೆ.

ಮಾ.6ರಂದು ಗುತ್ತಿಗೆದಾರರ ಧರಣಿ



• **ಕೆಂಗೇರಿ:** ಕಳೆದ ಮೂರು ವರ್ಷದಿಂದ ಬಾಕಿ ಇರುವ ಗುತ್ತಿಗೆದಾರರ ಬಿಲ್ ಪಾವತಿಗೆ ಆಗ್ರಹಿಸಿ ಮಾ.6ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

ಬೆಂಗಳೂರು ದಕ್ಷಿಣ ತಾಲೂಕು ಅಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಆರ್.ಜೆ.ಸಾರಥಿ ಸೆಲೆಬ್ರೇಷನ್ ಸೆಂಟರ್‌ನಲ್ಲಿ, ಬೆಂಗಳೂರು ನಗರ ಜಿಲ್ಲಾ ಗುತ್ತಿಗೆದಾರರ ಸಂಘ ವತಿಯಿಂದ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಗುತ್ತಿಗೆದಾರರ ಕೊಡುಗೆ ಅಪಾರವಾಗಿದೆ. ಸರ್ಕಾರ ಮಲತಾಯಿ ಧೋರಣೆ ತೋರುತ್ತಿರುವ ಹಿನ್ನಲೆಯಲ್ಲಿ ಮಾ.6ರಂದು ಫ್ರೀಡಂ ಪಾರ್ಕಿನಲ್ಲಿ 10 ರಿಂದ 15ಸಾವಿರ ಗುತ್ತಿಗೆದಾರರು ಪ್ರತಿಭಟನೆ ಮಾಡಲು ನಿರ್ಧರಿಸಲಾಗಿದೆ. ಸರ್ಕಾರ ಇದಕ್ಕೆ ಸ್ಪಂದಿಸದಿದ್ದರೆ ಏಪ್ರಿಲ್‌ನಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಿ ಕಾಮಗಾರಿ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಲಾಗುವುದು ಎಂದು ಎಚ್ಚರಿಸಿದರು. ರಾಜ್ಯದಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಗುತ್ತಿಗೆದಾರರಿಗೆ ರಾಜ್ಯ ಸರ್ಕಾರದಿಂದ ಸುಮಾರು 37 ಸಾವಿರ ಕೋಟಿ ರೂ.ಬಿಲ್ ಬಾಕಿಯಿದೆ. ಸರ್ಕಾರದಿಂದ ಬಿಲ್ ಬಾಕಿ ಉಳಿಸಿಕೊಳ್ಳುವ ಪ್ರವೃತ್ತಿ ಮುಂದುವರೆದಿದೆ. ಗುತ್ತಿಗೆದಾರರು ದಿವಾಳಿ ಅಂಚಿಗೆ ತಲುಪಿದ್ದಾರೆ. ಸಾಲಬಾಧೆ ತಾಳಲಾರದೆ ಸುಮಾರು 10ಕ್ಕೂ ಹೆಚ್ಚು ಮಂದಿ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರು ವಿರೋಧಪಕ್ಷದ ನಾಯಕರಾಗಿದ್ದ ವೇಳೆ ಪ್ಯಾಕೇಜ್ ವ್ಯವಸ್ಥೆ ವಿರೋಧಿಸುತ್ತಿದ್ದರು. ಆದರೆ ಈಗ ಅದನ್ನು ಮರೆತಿದ್ದಾರೆ. ಹೊರ ರಾಜ್ಯದ ಗುತ್ತಿಗೆದಾರರಿಗೆ ಟೆಂಡರ್ ವಹಿಸಲಾಗುತ್ತಿದೆ. ಒಂದು ಕೋಟಿ ರೂ.ಗಿಂತ ಹೆಚ್ಚಿನ ಮೊತ್ತದಲ್ಲಿ ಪ್ಯಾಕೇಜ್ ಟೆಂಡರ್‌ಗೆ ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ಮುಖ್ಯಮಂತ್ರಿ ಅದಕ್ಕೆ ಅನುಮೋದನೆ ನೀಡುತ್ತಿದ್ದಾರೆ ಎಂದರು.

ಬೆಂಗಳೂರು ನಗರ ಜಿಲ್ಲಾ ಗುತ್ತಿಗೆದಾರ ಸಂಘದ ಅಧ್ಯಕ್ಷ ಎಸ್.ಮಂಜುನಾಥ್, ಉಪಾಧ್ಯಕ್ಷ ಜೈ ಪ್ರಕಾಶ್, ರಮೇಶ್, ಪ್ರಧಾನ ಕಾರ್ಯದರ್ಶಿ ಆರ್.ರಮೇಶ್, ಗುರುಸಿದ್ದಪ್ಪ, ಅನಿಲ್‌ಕುಮಾರ್, ಮಹೇಶ್‌ಕುಮಾರ್, ಪರಮಶಿವಯ್ಯ ಹಾಗೂ ಎಲ್ಲಾ ಗುತ್ತಿಗೆದಾರರು ಉಪಸ್ಥಿತರಿದ್ದರು.

ರೌಡಿಶೀಟರ್ ಪವನ್ ಕೊಲೆ ಪ್ರಕರಣ| ಸಂಪಿಗೆಹಳ್ಳಿ ಠಾಣೆ ಪೊಲೀಸ್ ಕಾರ್ಯಾಚರಣೆ

ಆರೋಪಿ ಕಾಲಿಗೆ ಪೊಲೀಸ್ ಗುಂಡು



• **ಬೆಂಗಳೂರು:** ರೌಡಿಶೀಟರ್ ಪವನ್ ಕುಮಾರ್ ಕೊಲೆ ಪ್ರಕರಣದ ಆರೋಪಿ ರಂಜನ್ ಕಾಲಿಗೆ ಗುಂಡು ಹಾರಿಸುವ ಮೂಲಕ ಸಂಪಿಗೆಹಳ್ಳಿ ಠಾಣೆ ಪೊಲೀಸರು ಆತನನ್ನು ಶನಿವಾರ ವಶಕ್ಕೆ ಪಡೆದಿದ್ದಾರೆ.

ಬಾಗಲೂರು ಸಮೀಪದ ನಿರ್ಜನ ಪ್ರದೇಶವೊಂದರಲ್ಲಿದ್ದ ರಂಜನ್‌ನನ್ನು ವಶಕ್ಕೆ ಪಡೆಯಲು ಬೆಳಗ್ಗೆ ಸಂಪಿಗೆಹಳ್ಳಿ ಪೊಲೀಸರು ತೆರಳಿದ್ದರು. ಈ ವೇಳೆ ಆರೋಪಿ ಮಾರಕಾಸ್ತ್ರ ಬಳಸಿ ಪೊಲೀಸರ ಮೇಲೆಯೇ ಹಲ್ಲೆ ಮಾಡಲು ಯತ್ನಿಸಿದ್ದ, ತಕ್ಷಣ ಎಚ್ಚೆತ್ತ ಇನ್ಸ್‌ಪೆಕ್ಟರ್ ವೆಂಕಟೇಶ್, ಆರೋಪಿಯ ಕಾಲಿಗೆ ಗುಂಡು ಹಾರಿಸಿದ್ದಾರೆ. ಗುಂಡೇಟು ತಿಂದ ರಂಜನ್‌ನನ್ನು ಕೂಡಲೇ ವಶಕ್ಕೆ ಪಡೆದು, ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಫೆ.25ರಂದು ರಾತ್ರಿ ಥಣಿಸಂದ್ರ ಸಮೀಪದ ಅಮರಜ್ಯೋತಿ ಲೇಔಟ್‌ನಲ್ಲಿ ಪವನ್ ಕುಮಾರ್ (28)ನನ್ನು ಮಾರಕಾಸ್ತ್ರಗಳಿಂದ ಹೊಡೆದು ಬರ್ಬರವಾಗಿ ಹತ್ಯೆ ಮಾಡಲಾಗಿತ್ತು. ಹೆಲ್ಮೆಟ್ ಧರಿಸಿ ಮೂರು ದ್ವಿಚಕ್ರ ವಾಹನಗಳಲ್ಲಿ ಬಂದಿದ್ದ ಆರು ಮಂದಿ ದುಷ್ಕರ್ಮಿಗಳು, ಪವನ್ ಕುಮಾರ್‌ನನ್ನು ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಗಿದ್ದರು.

ಡಿ.ಜೆ. ಹಳ್ಳಿ ಠಾಣೆ ವ್ಯಾಪ್ತಿಯ ರೌಡಿಶೀಟರ್ ಆಗಿದ್ದ ಪವನ್‌ಕುಮಾರ್, ಮೂರು ವರ್ಷಗಳ ಹಿಂದೆ ನಡೆದಿದ್ದ ರೌಡಿಶೀಟರ್ ಕಪಿಲ್ ಹತ್ಯೆ ಪ್ರರಣದಲ್ಲಿ ಬಂಧಿತನಾಗಿದ್ದ, ಕಳೆದ ಮೇ ತಿಂಗಳಲ್ಲಿ ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಯಾಗಿ, ಒಂದೂವರೆ ತಿಂಗಳ ಹಿಂದಷ್ಟೇ ಬೇಕರಿಯನ್ನು ಆರಂಭಿಸಿದ್ದ. ಆದರೆ, ಕಪಿಲ್‌ನ ಹತ್ಯೆಯಾದ ಮಾದರಿಯಲ್ಲೇ ಹೆಲ್ಮೆಟ್ ಧರಿಸಿದ್ದ ತಂಡ ಪವನ್ ಕುಮಾರ್‌ನನ್ನು ಸಹ ಹತ್ಯೆಗೈದು ಪರಾರಿಯಾಗಿದ್ದರು.

ಮಗನನ್ನು ನನ್ನಿಂದ ರಕ್ಷಿಸಲಾಗಲಿಲ್ಲ

ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿದ್ದ ನನ್ನ ಮಗ 8 ತಿಂಗಳ ಹಿಂದೆಯಷ್ಟೇ ಬಿಡುಗಡೆಯಾಗಿದ್ದ. ಒಂದೂವರೆ ತಿಂಗಳ ಹಿಂದೆಯಷ್ಟೇ ಬೇಕರಿ ಆರಂಭಿಸಿದ್ದ. ರಾತ್ರಿ ಬೇಕರಿ ಬಂದ್ ಮಾಡಿ ಬರ್ತಾ ಇದ್ದೀನಿ ಎಂದು ಫೋನ್‌ನಲ್ಲಿ ನನಗೆ ಹೇಳಿದ್ದನು. ಬೈಕ್‌ನಲ್ಲಿ ಚೇಜ್ ಮಾಡಿಕೊಂಡು ಬಂದು ಗೇಟ್ ಮುಂದೆಯೇ ಚುಚ್ಚಿಚುಚ್ಚಿ ಕೊಂದಿದ್ದಾರೆ. ನನ್ನ ಕಣ್ಣು ಮುಂದೆಯೇ ನನ್ನ ಮಗನನ್ನು ಹೊಡೆದುಹಾಕಿದರು, ನನಗೆ ಮಗನನ್ನು ಕಾಪಾಡಲು ಆಗಲಿಲ್ಲ, ಮೂರು ಬೈಕ್‌ನಲ್ಲಿ ಆರು ಜನ ಹೆಲ್ಮೆಟ್ ಹಾಕೊಂಡು ಬಂದು ಹತ್ಯೆ ಮಾಡಿದ್ದಾರೆ. ಹಳೆಯ ದ್ವೇಷ ಇಟ್ಟುಕೊಂಡು ಈ ಕೃತ್ಯ ಎಸಗಿದ್ದಾರೆ. ಪ್ರೇಮ್‌ಎಂಬಾತ ನನ್ನ ಮೇಲೆ ದಾಳಿ ಮಾಡಿಸುತ್ತಿದ್ದಾನೆ ಎಂದು ನನ್ನ ಮಗ ಹೇಳುತ್ತಿದ್ದನು. ಆದಕ್ಕಾಗಿ ಕೆಲ ತಿಂಗಳು ಬೇರೆ ಊರಲ್ಲಿನ ಸಂಬಂಧಿಕರ ಮನೆಯಲ್ಲಿ ಇಟ್ಟಿದ್ದೇನು. ಇತ್ತೀಚೆಗಷ್ಟೇ ಕರೆದುಕೊಂಡು ಬಂದಿದ್ದೇನೆಂದು ಪವನ್ ಕುಮಾರ್ ತಾಯಿ ಕೋಮಲಾ ಮಾಧ್ಯಮಗಳಿಗೆ ಹೇಳಿದ್ದರು.

ಬೊಮ್ಮನಹಳ್ಳಿ ವಲಯದಲ್ಲಿ ಹರಾಜು ಪ್ರಕ್ರಿಯೆ

27ಲಕ್ಷ ರೂ. ತೆರಿಗೆ ಪಾವತಿ



• **ಬೆಂಗಳೂರು:** ಬೊಮ್ಮನಹಳ್ಳಿ ವಲಯದಲ್ಲಿ ಹರಾಜು ಪ್ರಕ್ರಿಯೆಗೂ ಮುನ್ನವೇ 14 ಸುಸ್ತಿದಾರರಿಂದ ಒಟ್ಟು 27,62,525 ರೂ. ಆಸ್ತಿ ತೆರಿಗೆ ಪಾವತಿಯಾಗಿದೆ ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ. ಎನ್. ರಮೇಶ್ ಹೇಳಿದರು.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ಬೊಮ್ಮನಹಳ್ಳಿ ವ್ಯಾಪ್ತಿಯ ಒಟ್ಟು 50 ಆಸ್ತಿಗಳ ಬೇಬಾಕಿ ಮೊತ್ತ 1,08,43,444 ರೂ. ಆಗಿದ್ದು, ಹರಾಜು ಪ್ರಕ್ರಿಯೆಗೆ ಒಳಪಡಿಸಲು ವ್ಯಾಪಕ ಪ್ರಚಾರ ನೀಡಿ ಹರಾಜು ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಈ ಪೈಕಿ 14 ಬೇ-ಬಾಕಿ ಆಸ್ತಿದಾರರು ಹರಾಜು ಪ್ರಕ್ರಿಯೆಗೂ ಮುನ್ನವೇ ಚಲನ್ ಅಥವಾ ಆನ್‌ಲೈನ್ ಮೂಲಕ ಪಾವತಿ ಮಾಡಿರುವುದಾಗಿ ಸಹಾಯಕ ಕಂದಾಯ ಅಧಿಕಾರಿಗಳು ವಿವರ ನೀಡಿರುತ್ತಾರೆ. ಅದರಂತೆ 14 ಬೇ-ಬಾಕಿದಾರರಿಂದ ಒಟ್ಟಾರೆ 27,62,525 ರೂ. ಮೊತ್ತದ ಕಂದಾಯವನ್ನು ಹರಾಜು ಪ್ರಕ್ರಿಯೆಗೂ ಮುನ್ನ ಪಾವತಿ ಮಾಡಿದ್ದು, ಅಂತಹ ಬೇಬಾಕಿದಾರರಿಗೆ ಹರಾಜು ಪ್ರಕ್ರಿಯೆಯಿಂದ ಅವರ ಆಸ್ತಿಯನ್ನು ಕೈಬಿಟ್ಟಿರುವ ಬಗ್ಗೆ ನಿಯಮಾನುಸಾರ ಹಿಂಬರಹ ಜಾರಿ ಮಾಡಲು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಇನ್ನುಳಿದ 36 ಬೇ-ಬಾಕಿದಾರರು ಇಲ್ಲಿಯವರೆಗೂ ಪಾವತಿಸಿರುವುದಿಲ್ಲ ಮತ್ತು ಈ ಆಸ್ತಿಗಳ ಹರಾಜು ಕರೆಯಲಾಗಿದ್ದು, ಸ್ಥಳದಲ್ಲಿ ಹಾಜರಿದ್ದ ಕೆಲವು ಸಾರ್ವಜನಿಕರು ಠೇವಣಿ ಮೊತ್ತ ಪಾವತಿಸಿ ಬಿಡ್ ಮಾಡಲು ಸಿದ್ಧರಾಗಿರಲಿಲ್ಲ ಮತ್ತು ಈ ಹರಾಜು ಪ್ರಕ್ರಿಯೆಯನ್ನು ಮುಂದುವರೆಸಲಾಗಿ ಬೇರೇ ಯಾವುದೇಸಾರ್ವಜನಿಕರುಹರಾಜುಈಪ್ರಕ್ರಿಯೆಯಲ್ಲಿ ಭಾಗವಹಿಸಿ ಬಿಡ್ ಮಾಡಲು ಮುಂದೆ ಬಾರದುದರಿಂದ ಉಳಿದ 36 ಬೇ-ಬಾಕಿದಾರರ ಆಸ್ತಿಗಳನ್ನು ಮುಂದಿನ ದಿನಗಳಲ್ಲಿ ಮರು ಹರಾಜು ಪ್ರಕ್ರಿಯೆಗೆ ಒಳಪಡಿಸಲು ಸಿದ್ಧತೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಇಂದು ನಗರದಲ್ಲಿ...

- 3ನೇ ಆವೃತ್ತಿಯ ಪೊಲೀಸ್ ರನ್ ಮ್ಯಾರಥಾನ್
- ಸ್ಥಳ: ವಿಧಾನ ಸೌಧ
- ಬೆಳಗ್ಗೆ 6.30

- ಮರುಹುಟ್ಟು ಕವನಗುಚ್ಛ ಲೋಕಾರ್ಪಣೆ
- ಸ್ಥಳ: ಕನ್ನಡ ಸಾಹಿತ್ಯ ಪರಿಷತ್
- ಬೆಳಗ್ಗೆ 10.30

- ಬಿಎಂಎಸ್ ತಾಂತ್ರಿಕ ಮಹಾವಿದ್ಯಾಲಯದಿಂದ ಪದವಿ ಪ್ರಧಾನ
- ಸ್ಥಳ: ಬಿಎಂಎಸ್ ಮಹಾವಿದ್ಯಾಲಯ, ಬಸವನಗುಡಿ
- ಬೆಳಗ್ಗೆ 11

- ರೇಣುಕಾಚಾರ್ಯ ಜಯಂತಿ
- ಸ್ಥಳ: ರವೀಂದ್ರ ಕಲಾ ಕ್ಷೇತ್ರ
- ಬೆಳಗ್ಗೆ 11

ಕಿರುಸುದ್ದಿ

ಚೆಸ್: ಗುಕೇಶ್‌ಗೆ ಸೋಲು

• **ಹೊಸದಿಲ್ಲಿ:** ಎರಡು ಪಂದ್ಯಗಳಲ್ಲಿ ಸತತ ಡ್ರಾ ಸಾಧಿಸಿದ್ದ ವಿಶ್ವಚಾಂಪಿಯನ್, ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ. ಗುಕೇಶ್ ಪ್ರಾಗ್ ಚೆಸ್ ಪಂದ್ಯಾವಳಿಯ ಮೂರನೇ ಪಂದ್ಯದಲ್ಲಿ ಅಚ್ಚರಿಯ ಸೋಲು ಕಂಡಿದ್ದಾರೆ. ಭಾರತದ ಮತ್ತೋರ್ವ ಗ್ರ್ಯಾಂಡ್‌ಮಾಸ್ಟರ್, ಹಾಲಿ ಚಾಂಪಿಯನ್ ಅರ್ವಿಂದ್ ಚಿತಂಬರಂ ಡ್ರಾ ಸಾಧಿಸಿದರು. ಭಾರತ ಮೂಲದ ಇಬ್ಬರು ಮಾತ್ರ ಭಾಗವಹಿಸಿರುವ ಈ ಕೂಟದಲ್ಲಿ ಸತತ ಡ್ರಾ ಫಲಿತಾಂಶ ಪಡೆದ ಗುಕೇಶ್‌ಗೆ ಹಿನ್ನಡೆಯಾಗಿದೆ. ಹಾಲೆಂಡ್‌ನ ಜಾರ್ಡನ್ ವ್ಯಾನ್ ಫಾರೆಸ್ಟ್ ಅವರನ್ನು ಎದುರಿಸಿದ್ದ ಗುಕೇಶ್ ನಿರಾಶಾದಾಯಕ ಸೋಲು ಕಂಡರು. ಅರ್ವಿಂದ್ ಇರಾನಿನ ಪರ್ಹಮ್ ಅವರೊಂದಿಗೆ ಡ್ರಾ ಮಾಡಿಕೊಂಡಿದ್ದಾರೆ. ಕರಿ ಕಾಯಿಗಳೊಂದಿಗೆ ಆಡಿದ ಗುಕೇಶ್ ಆರಂಭಿಕ ಹಿನ್ನಡೆ ಅನುಭವಿಸಿದರು. ರುಯ್ ಲೋಪೇಝ್ ಮೂಲಕ ಆರಂಭದಲ್ಲೇ ಗುಕೇಶ್‌ನ ಬಿಶಪ್ ಪಡೆದುಕೊಂಡರು. ಚೇತರಿಸಿಕೊಳ್ಳುವುದಕ್ಕೆ ಗುಕೇಶ್‌ಗೆ ಸಮಯ ಬೇಕಾಯಿತು. ಹತ್ತಾರು ಪ್ರಯತ್ನಗಳನ್ನು ಮಾಡಿ ಮರಳುವಷ್ಟರಲ್ಲಿ ಗುಕೇಶ್‌ಗೆ ಸಮಯದ ಹಿನ್ನಡೆ ಕೂಡ ಆಯಿತು. ಕೊನೆಯಲ್ಲಿ ಜಾರ್ಡನ್ ಗೆಲುವು ಸಾಧಿಸಿದರು. ಅರ್ವಿಂದ್ ಕೂಡ ಆರಂಭಿಕ ಹಿನ್ನಡೆ ಅನುಭವಿಸಿದ್ದರು. ಆದರೆ ಮರಳಿದ ಅವರು ಡ್ರಾ ಸಾಧಿಸಿದರು. ಚಾಲೆಂಜರ್ಸ್ ವಿಭಾಗದಲ್ಲಿ ದಿವ್ಯಾ ದೇಶಮುಖ್ ಜೆನ್ನರ್ ಅವರೊಂದಿಗೆ, ಸೂರ್ಯಶೇಖರ ಗಂಗೂಲಿ ನೆಮೆಕ್ ಅವರೊಂದಿಗೆ ಸೋತರು.

ಐಟಿಎಫ್ ಕಲಬುರಗಿ ಲೋಗೋ ಬಿಡುಗಡೆ

• **ಕಲಬುರಗಿ:** ಮೊಟ್ಟ ಮೊದಲ ಬಾರಿಗೆ ಕಲಬುರಗಿಯೂ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಪಂದ್ಯಾವಳಿಗಳಿಗೆ ಸಾಕ್ಷಿಯಾಗಲಿದ್ದು, ಭಾನುವಾರ ನಗರದ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ಡಬ್ಲ್ಯು 35 ಮಟ್ಟದ ಮಹಿಳಾ ಟೆನಿಸ್ ಟೂರ್ನಿ ಪ್ರಾರಂಭವಾಗಲಿದೆ. ಈ ಹಿನ್ನೆಲೆ ಶನಿವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಲೋಗೋ ಬಿಡುಗಡೆ ಮಾಡಲಾಯಿತು. ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಲೋಗೋ ಬಿಡುಗಡೆಗೊಳಿಸಿ, ಯುಎಸ್ಡಿ 30 ಬಹುಮಾನ ಮೊತ್ತದ ಈ ಟೂರ್ನಿ ಐಟಿಎಫ್ ಮಹಿಳಾ ವಿಶ್ವ ಟೆನಿಸ್ ಟೂರ್ನಿಯಾಗಿದ್ದು, ಮಾರ್ಚ್ 1 ರಿಂದ 8ರವರೆಗೆ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಮುಖ್ಯ ಡ್ರಾ ಪಂದ್ಯಗಳು ಮಾರ್ಚ್ 3 ರಿಂದ ಆರಂಭವಾಗಲಿವೆ ಎಂದರು. ಐಟಿಎಫ್ ಅಂತಾರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯಲ್ಲಿ 32 ಆಟಗಾರರ ಸಿಂಗಲ್ಸ್ ಮುಖ್ಯ ಡ್ರಾ ಇರಲಿದ್ದು, ಭಾನುವಾರದಿಂದ 32 ಆಟಗಾರ್ತಿಯರ ಅರ್ಹತಾ ಸುತ್ತು (ಕ್ವಾಲಿಫೈಯರ್ ಡ್ರಾ) ನಡೆಯಲಿದೆ. ಜೊತೆಗೆ 16 ಜೋಡಿಗಳ ಡಬಲ್ಸ್ ಡ್ರಾ ಕೂಡ ಆಯೋಜಿಸಲಾಗಿದೆ. ಮಾರ್ಚ್ 3ರಿಂದ ಆರಂಭವಾಗುವ ಮುಖ್ಯ ಡ್ರಾ ಪಂದ್ಯಗಳಲ್ಲಿ 11ಕ್ಕೂ ಅಧಿಕ ದೇಶದ ಟೆನಿಸ್ ಆಟಗಾರ್ತಿಯರು ಟೂರ್ನಿಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ITF ಕಲಬುರಗಿ
KALABURAGI OPEN
WOMEN'S WORLD TENNIS TOUR

ಶೂಟಿಂಗ್: ಫೈನಲ್‌ಗೆ ಟ್ರಿಗರ್, ಬೆಂಗಳೂರು

• **ಬೆಂಗಳೂರು:** ಟ್ರಿಗರ್ ಟ್ಯಾಕ್ಟಿಶನ್ಸ್, ಬೆಂಗಳೂರು, ಹುಬ್ಬಳ್ಳಿ ಮತ್ತು ಕ್ಯಾಲಿಬರ್ ಕ್ಯಾಪಿಟಲ್ಸ್ ತಂಡಗಳು ಕರ್ನಾಟಕ ಶೂಟಿಂಗ್ ಲೀಗ್ ಕೂಟದ ಫೈನಲ್‌ಗೇರಿದವು. ಇದೇ ಮೊದಲ ಬಾರಿಗೆ ಆಯೋಜಿಸಲಾದ ಫ್ರಾಂಚೈಸಿ ಮಾದರಿಯ ಶೂಟಿಂಗ್ ಕೂಟವು ಶನಿವಾರದಂದು ಆರಂಭಗೊಂಡಿದ್ದು, ಅರ್ಹತಾ ಸುತ್ತಿನ ಪಂದ್ಯಗಳು ನಡೆದವು. ಮೊದಲ ಗುಂಪಿನಲ್ಲಿ ಮೊದಲ ಸ್ಥಾನ ಪಡೆದ ಟ್ರಿಗರ್ ಟ್ಯಾಕ್ಟಿಶನ್ಸ್, ಎರಡನೇ ಸ್ಥಾನದ ಬೆಂಗಳೂರು ಬ್ರಿಗೇಡ್ ತಂಡಗಳು ಸ್ನೈಪರ್ ಸ್ಕ್ವಾಡ್ ಮತ್ತು ರೆಡ್ರಮ್ ತಂಡಗಳಿಗಿಂತ ಹೆಚ್ಚಿನ ಸ್ಕೋರ್‌ಗಳೊಂದಿಗೆ ಫೈನಲ್‌ಗೇರಿದವು. 18 ಇವೆಂಟ್‌ಗಳಲ್ಲಿ ಟ್ರಿಗರ್ 11 ಗೆಲುವುಗಳೊಂದಿಗೆ 22 ಅಂಕ ಗಳಿಸಿತು. ಬೆಂಗಳೂರು 9 ಗೆಲುವು ಮತ್ತು 2 ಡ್ರಾಗಳೊಂದಿಗೆ 20 ಅಂಕ ಗಳಿಸಿತು. ಎರಡನೇ ಗುಂಪಿನಲ್ಲಿ 10 ಇವೆಂಟ್‌ಗಳಲ್ಲಿ ಮಿಂಚಿದ ಕ್ಯಾಲಿಬರ್ 21 ಅಂಕಗಳೊಂದಿಗೆ ಮೊದಲ ಸ್ಥಾನ ಗಳಿಸಿದರೆ, ಹುಬ್ಬಳ್ಳಿ ಶೂಟಿಂಗ್ ಸ್ಟಾರ್ಸ್ 9 ಗೆಲುವು 2 ಡ್ರಾಗಳೊಂದಿಗೆ 20 ಅಂಕ ಗಳಿಸಿ ಎರಡನೇ ಸ್ಥಾನ ಗಳಿಸಿತು. ಫೈನಲ್ ಪಂದ್ಯಗಳು ಭಾನುವಾರದಂದು ನಡೆಯಲಿವೆ.

ಕರ್ನಾಟಕಕ್ಕೆ ಅವಕಾಶ ನಿರಾಕರಿಸಿದ ಪ್ರವಾಸಿ ತಂಡ | ರಣಜಿ ಟ್ರೋಫಿ ಮೇಲೆ ಒಡೆತನ ಸಾಧಿಸಿದ ಕಾಶ್ಮೀರ

ಕಾಶ್ಮೀರ ಕ್ಲಾಸ್ ಆಟಕ್ಕೆ ರಣಜಿ ಕಿರೀಟ

ಚಿತ್ರಗಳು: ಮಂಜುನಾಥ ಜರತಾರಘರ



- ಪಂದ್ಯ ಡ್ರಾ, ಜಮ್ಮು ಕಾಶ್ಮೀರ ಮೊದಲ ಇನ್ನಿಂಗ್ಸ್ ಆಧಾರದ ಮೇಲೆ ಜಯ
- ಕರ್ನಾಟಕಕ್ಕೆ ತವರಿನಲ್ಲೇ ಆಘಾತ: ಮೊದಲ ಬಾರಿಗೆ ಪ್ರಶಸ್ತಿ ಗೆದ್ದ ಕಾಶ್ಮೀರ

▸ ವಿಜಯಕುಮಾರ ಬೆಳ್ಳೇರಿಮಠ

• **ಹುಬ್ಬಳ್ಳಿ:** ನಿರೀಕ್ಷೆಯಂತೆ ರಣಜಿ ಟ್ರೋಫಿ ಫೈನಲ್ ಪಂದ್ಯದ 5ನೇ ದಿನ ಔಪಚಾರಿಕತೆಗೆ ಸಾಕ್ಷಿಯಾಯಿತು. 8 ಬಾರಿಯ ಚಾಂಪಿಯನ್, ಆತಿಥೇಯ ಕರ್ನಾಟಕ ಪುಟಿದೇಳಲು ಅವಕಾಶವನ್ನೇ ನೀಡದ ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡ ಇದೇ ಮೊದಲ ಬಾರಿಗೆ ಪ್ರಶಸ್ತಿ ಮೇಲೆ ಒಡೆತನ ಸಾಧಿಸಿತು. ದೇಶವೇ ತಿರುಗಿ ನೋಡುವಂತಹ ಇತಿಹಾಸ ನಿರ್ಮಿಸಿತು.

ನಾಲ್ಕನೇ ದಿನದಾಟದ ಅಂತ್ಯಕ್ಕೆ 57 ಓವರ್‌ಗಳಿಗೆ 4 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿ, 477 ರನ್‌ಗಳ ಬೃಹತ್ ಮುನ್ನಡೆ ಕಾಯ್ದುಕೊಂಡಿದ್ದ ಕಾಶ್ಮೀರ, ಕೊನೆಯ ದಿನವೂ ಕರ್ನಾಟಕ ಬೌಲರ್‌ಗಳ ಮೇಲೆ ಸವಾರಿ ನಡೆಸಿತು.

ಕಾಶ್ಮೀರ ಆಡಿದ್ದೇ ಆಟ: ಮೊದಲ ದಿನ 94 ರನ್‌ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದ ಕಾಶ್ಮೀರ ಪರ 24 ವರ್ಷ ವಯಸ್ಸಿನ ಯುವ ಆಟಗಾರ ಕಮ್ರಾನ್ ಇಕ್ಬಾಲ್ (ಅಜೇಯ 160, 311 ಎಸೆತ, 16 ಬೌಂಡರಿ, 3 ಸಿಕ್ಸರ್), ಪ್ರಥಮ ದರ್ಜೆ ಪಂದ್ಯಗಳಲ್ಲಿ 2ನೇ ಶತಕ ಸಿಡಿಸಿದರು. ಶುಕ್ರವಾರ 32 ರನ್ ಗಳಿಸಿದ್ದ ಸಾಹಿಲ್ ಲೋಥ್ರಾ, (ಅಜೇಯ 101, 226 ಎಸೆತ, 8 ಬೌಂಡರಿ, 3 ಸಿಕ್ಸರ್) ಸಹ ಶತಕ ಪೂರೈಸಿ ಕೊನೆಯ ದಿನದಾಟದಲ್ಲಿ ಮತ್ತೆ ಕರ್ನಾಟಕದ ಬೌಲರ್‌ಗಳ ಬೆವರಿಳಿಸಿದರು. ಈ ಜೋಡಿಯ 5ನೇ ವಿಕೆಟ್‌ನ ಮುರಿಯದ 197 ರನ್ (415 ಎಸೆತ) ಜೊತೆಯಾಟವು ರಾಜ್ಯದ ಪ್ರಮುಖ ಬ್ಯಾಟರ್‌ಗಳಾದ ಕರುಣ್ ನಾಯರ್, ಮಯಾಂಕ್ ಅಗರ್‌ವಾಲ್ ಹಾಗೂ ಕೆ.ಎಲ್. ರಾಹುಲ್ ಅವರು ಸೇರಿ 8 ಜನ ಬೌಲ್ ಮಾಡಿದರೂ ಜಗ್ಗದೇ ಮುಂದುವರಿಯಿತು. ಈ ಹಿನ್ನೆಲೆಯಲ್ಲಿ ಆತಿಥೇಯ ತಂಡದ ಹಿನ್ನಡೆಯಿಂದ ಮೈದಾನದಲ್ಲಿದ್ದ ಪ್ರೇಕ್ಷಕರು ಮೌನಕ್ಕೆ ಶರಣಾದರು. 113 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡ 342 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತಾದರೂ, ನಂತರದ ಆಟದಿಂದ ಪ್ರಯೋಜನವಿಲ್ಲ ಎಂಬುದನ್ನು ಅರಿತ ಕರ್ನಾಟಕ ಡ್ರಾಗೆ ಒಪ್ಪಿ ಮತ್ತೆ ಬ್ಯಾಟಿಂಗ್ ಮಾಡಲಿಲ್ಲ.

ಸಂಭ್ರಮದಲ್ಲಿ ಮಿಂದೆದ್ದ ಕಾಶ್ಮೀರ: ಈ ನಿರ್ಧಾರ ಹೊರ ಬೀಳುತ್ತಿದ್ದಂತೆಯೇ ಪ್ರವಾಸಿ ತಂಡದ ಆಟಗಾರರು ಮತ್ತು ಬೆಂಬಲಿಗರ ಕೇಕೆ ಮುಗಿಲುಮುಟ್ಟಿತು. ಭಯೋತ್ಪಾದನೆಯಿಂದ ಸದ್ದು ಮಾಡುತ್ತಿದ್ದ ಕಣಿವೆ ರಾಜ್ಯದ ಕ್ರಿಕೆಟ್‌ನ ಹೊಸ ಯುಗ ಈ ಮೂಲಕ ಆರಂಭವಾದಂತಾಯಿತು. ಪಂದ್ಯ ಡ್ರಾ ಆಗುತ್ತಲೇ ಮೈದಾನಕ್ಕೆ ಇಳಿದ ಜಮ್ಮು ಕಾಶ್ಮೀರದ ಆಟಗಾರರ ಸಂಭ್ರಮಕ್ಕೆ ಪಾರವೇ ಇರಲಿಲ್ಲ. ಎಲ್ಲ ಆಟಗಾರರೂ ನರ್ತಿಸಿ ಸಂಭ್ರಮಿಸಿದರು. ಮೊದಲ ಬಾರಿ ಟ್ರೋಫಿ ಹಿಡಿದ ಆಟಗಾರರು ಕುಣಿದು ಕುಪ್ಪಳಿಸಿದರು.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 1 ನೇ ಇನ್ನಿಂಗ್ಸ್;
584/10(173.1)
ಕರ್ನಾಟಕ 1ನೇ ಇನ್ನಿಂಗ್ಸ್;
293/10(93.3)
ಜಮ್ಮು ಕಾಶ್ಮೀರ 2 ನೇ ಇನ್ನಿಂಗ್ಸ್;
342/4(113)
ಕಮರಾನ್ ಇಕ್ಬಾಲ್ ಬ್ಯಾಟಿಂಗ್; 160 ರನ್, 311 ಎ,16 ಬೌ, 3 ಸಿ, ಸಾಹಿಲ್ ಬ್ಯಾಟಿಂಗ್; 101 ರನ್, 226 ಎ, 8ಬೌ.3 ಸಿ. ಬೌಲಿಂಗ್; ಪ್ರಸಿದ್ಧ ಕೃಷ್ಣ; 2 ವಿ, 12 ಓ, 42 ರನ್,ವೈಶಾಕ್; 1 ವಿ, 10 ಓ, 30 ರನ್,

ಪಂದ್ಯ ಶ್ರೇಷ್ಠ;
ಶುಂಭಸಿಂಗ್ ಪುಂಡಿರ್

ಸರಣಿ ಶ್ರೇಷ್ಠ;
ಅಕೀಬ್ ನಬಿ ದಾರ
60 ವಿಕೆಟ್

ಜಮ್ಮು ಕಾಶ್ಮೀರ ನಡೆದು ಬಂದ ಹಾದಿ

1859-60ರಲ್ಲಿ ಜಮ್ಮು ಕಾಶ್ಮೀರ ತಂಡ ಮೊದಲ ರಣಜಿ ಪಂದ್ಯ ಆಡಿತ್ತು. ಇದಾದ 23 ವರ್ಷದ ಬಳಿಕ 1982-83ನೇ ಋತುವಿನಲ್ಲಿ ಸರ್ವಿಸ್‌ನ ವಿರುದ್ಧ ಮೊದಲ ಜಯಗಳಿಸಿತ್ತು. 2013-14ರಲ್ಲಿ ರಣಜಿ ಟ್ರೋಫಿಯ ಕ್ವಾರ್ಟರ್ ಫೈನಲ್‌ನ ವರೆಗೂ ತಲುಪಿತ್ತು. ಜಮ್ಮು ಕಾಶ್ಮೀರದ ಪರ್ವೇಜ್ ರಸೂಲ್ ಹಾಗೂ ಉಮ್ರಾನ್ ಮಲಿಕ್ ಮಾತ್ರ ಈವರೆಗೆ ರಾಷ್ಟ್ರೀಯ ತಂಡದಲ್ಲಿ ಆಡಿದ್ದು, ಆಲ್‌ರೌಂಡರ್ ಅಬ್ದುಲ್ ಸಮದ್ ಅವರೊಂದಿಗೆ ರಸಿಕ್ ಸಲಾಂ ದಾರ್ ಮತ್ತು ಯುಧ್‌ವೀರ್ ಸಿಂಗ್ ಚರಕ್ ಐಪಿಎಲ್‌ನಲ್ಲಿ ಆಡಿದ್ದಾರೆ.

ಜಮ್ಮು-ಕಾಶ್ಮೀರ ಸರ್ಕಾರದಿಂದ ಬಹುಮಾನ

ರಣಜಿ ಟ್ರೋಫಿ ಗೆದ್ದ ಜಮ್ಮು ಮತ್ತು ಕಾಶ್ಮೀರ ತಂಡಕ್ಕೆ 2 ಕೋಟಿ ರೂ. ಬಹುಮಾನ ನೀಡುವುದಾಗಿ ಅಲ್ಲಿನ ಸರ್ಕಾರ ಘೋಷಣೆ ಮಾಡಿದೆ. ಗೆಲುವು ಖಾತ್ರಿಯಾದಂತೆ ಸ್ವಹಿತಾಸಕ್ತಿಯಿಂದ ಹುಬ್ಬಳ್ಳಿಗೆ ಬಂದು ಕೊನೆಯ ದಿನದ ಆಟವನ್ನು ವೀಕ್ಷಿಸಿದ ಜಮ್ಮು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ತಮ್ಮ ತಂಡದ ಆಟಗಾರ ನಡುವೆ ಕುಳಿತು ಪಂದ್ಯ ವೀಕ್ಷಿಸುವುದರ ಜೊತೆಗೆ ಆಟಗಾರರಿಗೆ ಪ್ರೋತ್ಸಾಹಿಸಿದರು. ಪಂದ್ಯ ಮುಗಿದ ಬಳಿ ಸ್ವತಃ ಮೈದಾನಕ್ಕೆ ಆಗಮಿಸಿ ವಿಜೇತ ತಂಡಕ್ಕೆ ಅಭಿನಂದನೆ ಸಲ್ಲಿಸಿ, ಫೋಟೋ ತೆಗೆಸಿಕೊಂಡರು. ಇದಲ್ಲದೆ ಪಂದ್ಯಾವಳಿ ಮುಕ್ತಾಯದ ನಂತರ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ, ನಿಮ್ಮ ಬಗ್ಗೆ ನಮಗೆ ಹೆಮ್ಮೆಯಿದೆ. ಸರ್ಕಾರದಿಂದ ನಾವು 2 ಕೋಟಿ ರೂ. ಬಹುಮಾನ ಘೋಷಿಸುತ್ತೇವೆ ಎಂದು ಬರೆದುಕೊಂಡಿದ್ದಾರೆ. ಅವರಷ್ಟೇ ಅಲ್ಲದೆ, ಶನಿವಾರದಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಸಂಸದ ಜಗದೀಶ ಶೆಟ್ಟರ, ಶಾಸಕ ಮಹೇಶ ಟೆಂಗಿನಕಾಯಿ ಸಹ ಪಂದ್ಯ ವೀಕ್ಷಿಸಿ ಆಟಗಾರಿಗೆ ಅಭಿನಂದಿಸಿದರು.

ಪ್ರಧಾನಿ ಮೋದಿ ಸೇರಿದಂತೆ ಗಣ್ಯರಿಂದ ಅಭಿನಂದನೆ

ಪಂದ್ಯ ಮುಕ್ತಾಯಗೊಳ್ಳುತ್ತಿದ್ದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಕಾಶ್ಮೀರ ತಂಡಕ್ಕೆ ಅಭಿನಂದನೆ ಸಲ್ಲಿಸಿದರು. ಗೃಹ ಮಂತ್ರಿ ಅಮಿತ್ ಶಾ, ಸಚಿನ್ ತೆಂಡೂಲ್ಕರ್ ಸೇರಿದಂತೆ ಮಾಜಿ ಕ್ರಿಕೆಟಿಗರು, ರಾಜಕಾರಣಿಗಳು ಹಾಗೂ ಬೇರೆ ಬೇರೆ ಕ್ಷೇತ್ರದ ಗಣ್ಯರು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ ತಂಡಕ್ಕೆ ಅಭಿನಂದಿಸಿದರು.



ನಾವು ಪ್ರಶಸ್ತಿ ಪಡೆದಿರುವುದು ಇಡೀ ರಾಜ್ಯಕ್ಕೆ ಹೆಮ್ಮೆಯ ವಿಷಯ. ಕಳೆದ ವರ್ಷ ನಮ್ಮ ತಂಡ ಕ್ವಾರ್ಟರ್ ಫೈನಲ್ಸ್ ಪ್ರವೇಶಿಸಿದ್ದಾಗಲೇ ಮುಂದೊಂದು ದಿನ ನಮ್ಮಲ್ಲಿ ಪ್ರಶಸ್ತಿ ಗೆಲ್ಲುವ ಸಾಮರ್ಥ್ಯವಿದೆ ಎಂಬ ವಿಶ್ವಾಸ ಮೂಡಿತ್ತು. ಅದು ಇಂದು ಈಡೇರಿದೆ. ಈಗ ರಾಜ್ಯದ ಅಲ್ಲಿಯ ಯುವ ಆಟಗಾರರಿಗೆ ಪ್ರೇರಣೆ ಆಗಲಿದೆ. ಈ ಪಂದ್ಯದಲ್ಲಿ ನಾವು ಸಂಪೂರ್ಣ ತೊಡಗಿಕೊಂಡಿದ್ದೇವು. ಈ ವಿಜಯದಲ್ಲಿ ಪ್ರತಿಯೊಬ್ಬರೂ ಕೊಡುಗೆ ನೀಡಿದ್ದಾರೆ. ಬಲಿಷ್ಠ ಕರ್ನಾಟಕ ತಂಡದ ವಿರುದ್ಧ ಚಾಂಪಿಯನ್ ಆಗಿದ್ದು ತಂಡದ ವಿಶ್ವಾಸವನ್ನು ವೃದ್ಧಿಸಿದೆ.

■ ಪಾರಸ್ ಡೋಗ್ರಾ,
ನಾಯಕ, ಜಮ್ಮು-ಕಾಶ್ಮೀರ.


ಸೆಮಿಗೇರಲು ಮುಖಾಮುಖಿ | ಸೋತವರಿಗೆ ವಿಶ್ವಕಪ್‌ನಿಂದ ಗೇಟ್‌ಪಾಸ್

ಇಂದು ವಿಂಡೀಸ್-ಭಾರತ ಕ್ವಾರ್ಟರ್

• **ಕೋಲ್ಕತ್ತಾ:** ಮಾಡು ಇಲ್ಲವೇ ಮಡಿ ಪಂದ್ಯದಲ್ಲಿ ಭಾರತ ಹಾಗೂ ವಿಂಡೀಸ್ ತಂಡಗಳು ಭಾನುವಾರದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ವಿಶ್ವಕಪ್ ಕ್ವಾರ್ಟರ್‌ಫೈನಲ್ ಮಾದರಿ ಹೊಂದಿಲ್ಲ. ಲೀಗ್ ಹಂತದಲ್ಲಿ ಗೆದ್ದು ಬಂದ ತಂಡಗಳು ಸೂಪರ್-8ರ ಪಂದ್ಯಗಳಲ್ಲಿ ಮುಖಾಮುಖಿಯಾಗುತ್ತವೆ. ಅಲ್ಲಿಯ ಬಲಶಾಲಿ ತಂಡಗಳು ಸೆಮಿಫೈನಲ್‌ಗೇರುತ್ತವೆ. ಆದರೆ ವಿಂಡೀಸ್ ಮತ್ತು ಭಾರತ ತಲಾ ಒಂದು ಪಂದ್ಯಗಳನ್ನು ಸೋತಿವೆ. ಹೀಗಾಗಿ ಸೆಮೀಸ್ ಟಿಕೆಟ್‌ಗಾಗಿ ನಿರ್ಣಾಯಕ ಪಂದ್ಯವೊಂದು ನಡೆಯಲಿದೆ. ಈ ನಿಟ್ಟಿನಲ್ಲಿ ಮಾದರಿಯ ಭಾಗವಾಗದಿದ್ದರೂ ಇದು ಕ್ವಾರ್ಟರ್ ಫೈನಲ್‌ನಂತೆ ಭಾಸವಾಗುತ್ತಿದೆ. ಟಿ20 ವಿಶ್ವಕಪ್ ಪಂದ್ಯಾವಳಿ ನಿರ್ಣಾಯಕ ಹಂತಕ್ಕೆ ತಲುಪಿದೆ. ಎರಡನೇ ಗುಂಪಿನ ಎರಡು ತಂಡಗಳು ಸೆಮಿಫೈನಲ್‌ಗೇರಿವೆ. ಇನ್ನೊಂದು ಗುಂಪಿನ ಒಂದು ತಂಡ ಈಗಾಗಲೇ ಸೆಮಿಗೇರಿದೆ. ಇನ್ನೊಂದು ತಂಡ ಸೆಮೀಸ್ ಟಿಕೆಟ್ ಪಡೆಯಬೇಕಿದೆ. ಈಡನ್ ಗಾರ್ಡನ್ಸ್‌ನಲ್ಲಿ ಪಂದ್ಯ ನಡೆಯಲಿದೆ.

ಮಾಡು ಇಲ್ಲವೇ ಮಡಿ: ದ.ಆಫ್ರಿಕಾ ಭಾರತಕ್ಕೆ ಮೊದಲ ಪಂದ್ಯದಲ್ಲಿ ಸೋಲಿಸಿ ವಿಲನ್ ಆಗಿತ್ತು. ಹಾಗೇ ಎರಡನೇ ಪಂದ್ಯದಲ್ಲಿ ವಿಂಡೀಸ್ ತಂಡವನ್ನು ಸೋಲಿಸಿ ಭಾರತಕ್ಕೆ ಅನುಕೂಲಮಾಡಿಕೊಟ್ಟಿತ್ತು. ಮೊದಲಪಂದ್ಯದಲ್ಲಿ ಜಿಂಬಾಬ್ವೆ ತಂಡವನ್ನು ವಿಂಡೀಸ್ ಭಾರೀ ಅಂತರದಲ್ಲಿ ಸೋಲಿಸಿ ರನ್ ರೇಟ್ ಬಲಪಡಿಸಿ ಕೊಂಡಿತ್ತು. ಹೀಗಿರುವಾಗಲೇ ಭಾರತ ಸೆಮಿಫೈನಲ್ ಪ್ರವೇಶಿಸಬೇಕಾದರೆ ದ.ಆಫ್ರಿಕಾ ವಿಂಡೀಸ್ ತಂಡವನ್ನು ಸೋಲಿಸಲೇಬೇಕಿತ್ತು. ಇಲ್ಲವಾದರೆ ಭಾರತ ಸೆಮಿ ನಿರ್ಧಾರ ರನ್‌ರೇಟ್ ಮಾಡಬೇಕಾಗಿತ್ತು. ಆದರೆ ಸೋತ ವಿಂಡೀಸ್ ಕೂಡ ಭಾರತ ಮೇಲೆ ಗೆದ್ದರಷ್ಟೇ ಸೆಮಿ ಟಿಕೆಟ್ ಪಡೆಯಲಿದೆ. ಹೀಗಾಗಿ ಭಾನುವಾರದ ಪಂದ್ಯ ಕ್ವಾರ್ಟರ್‌ಫೈನಲ್ ಪಂದ್ಯವಾಗಲಿದೆ. ಇಲ್ಲಿ ರನ್‌ರೇಟ್ ಯಾವುದೇ ಕಾರಣಕ್ಕೂ ಕೆಲಸಕ್ಕೆ ಬಾರದು. ಒಂದು ರನ್ ನಿಂದಲೂ ಗೆಲ್ಲುವ ತಂಡವೇ ಹೆಚ್ಚಿನ ಅಂಕಗಳೊಂದಿಗೆ ಸೆಮಿಗೇರಲಿವೆ.



ಪಿಚ್ ರಿಪೋರ್ಟ್

ಕೋಲ್ಕತ್ತಾದ ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಇಬ್ಬನಿ ನಿರ್ಣಾಯಕ ಪಾತ್ರ ವಹಿಸಲಿದೆ. ಈ ಹಿಂದಿನ ಪಂದ್ಯಗಳಲ್ಲಿ ಉಭಯ ವಿಭಾಗದಿಂದ ಉತ್ತಮ ಪ್ರದರ್ಶನವೇ ಮೂಡಿಬಂದಿದೆ. ಬ್ಯಾಟಿಂಗ್‌ಗೆ ಅಲ್ಪ ಸಹಕಾರಿಯಾಗಿದೆ. ಉದ್ದದ ಬೌಂಡರಿಗಳು ಬೌಲರ್‌ಗಳಿಗೆ ಅಲ್ಪ ಬಲ ನೀಡಬಹುದು.

ಭಾರತ ಬ್ಯಾಟಿಂಗ್ ಬಲವರ್ಧನೆ: ಹಿಂದಿನ ಪಂದ್ಯಗಳಿಗಿಂತಲೂ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಭಾರತೀಯ ಬ್ಯಾಟರು ಮಿಂಚಿದ್ದಾರೆ. ವಿಶ್ವಾಸ ಕಾಯ್ದುಕೊಂಡಿದ್ದಾರೆ. ತಮ್ಮ ಅಸಲು ಆಟ ಪ್ರದರ್ಶಿಸಿದ್ದಾರೆ. ತಂಡದಲ್ಲಿ ಬದಲಾವಣೆಗಳನ್ನು ಮಾಡಲಾಗಿದೆ. ಇಶಾನ್ ಕಿಶನ್ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದು, ಮಧ್ಯಮ ಕ್ರಮಾಂಕದ ಬ್ಯಾಟರ್ ರಿಂಕು ಸಿಂಗ್ ಅವರ ಬದಲಿಗೆ ಸಂಜು ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡಿ ಫಲಿತಾಂಶ ಕಂಡಿದೆ ಭಾರತ. ಇನ್ನೂ ಮಧ್ಯಮ ಕ್ರಮಾಂಕದಲ್ಲಿ ಸೂರ್ಯ, ತಿಲಕ್ ಕೂಡ ಲಯಕ್ಕೆ ಮರಳಿದಂತಿದೆ. ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ವಿಶ್ವಾಸ ಹೆಚ್ಚಿಸಿದ್ದಾರೆ. ಶಿವಂ ದುಬೆ ವಿಶ್ವಕಪ್‌ನಲ್ಲಿ ಸ್ಮರಣೀಯ ಪ್ರದರ್ಶನ ನೀಡಿದ್ದು, ಅಕ್ಷರ್ ಕೂಡ ಬ್ಯಾಟಿಂಗ್ ಮಾಡುವ ಗಟ್ಸ್ ಹೊಂದಿದ್ದಾರೆ.


ದುಬಾರಿಯಾದ ಬೌಲರ್ಸ್, ಭಾರತಕ್ಕೆ ಚಿಂತೆ: ಕಳೆದ ಪಂದ್ಯದಲ್ಲಿ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರು ಕೂಡ ಭಾರತ ಬೌಲಿಂಗ್‌ನಲ್ಲಿ ಅಲ್ಪ ಹಿನ್ನಡೆ ಅನುಭವಿಸಿದೆ ಎನ್ನಬಹುದು. ಬೂಮ್ರಾ, ಅಕ್ಷರ್ ಮತ್ತು ವರುಣ್ ಬಿಟ್ಟರೆ ಇನ್ನುಳಿದ ಬೌಲರ್‌ಗಳು ದುಬಾರಿಯಾಗಿದ್ದಾರೆ. ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ಕೂಡ ಅಲ್ಪ ಹಿನ್ನಡೆ ಅನುಭವಿಸಿದ್ದಾರೆ. ಮುಖ್ಯವಾಗಿ ಬೇಕಾದಾಗ ವಿಕೆಟ್ ಕಿತ್ತಿ ನಿರಾಳ ನೀಡುತ್ತಿದ್ದ ಶಿವಂ ದುಬೆ ಭಾರೀ ದುಬಾರಿಯಾಗಿದ್ದಾರೆ.

ದ.ಆಫ್ರಿಕಾ-ಜಿಂಬಾಬ್ವೆ ಔಪಚಾರಿಕ ಪಂದ್ಯ

ಇನ್ನು ಭಾನುವಾರ ಸೂಪರ್-8ರ ಪಂದ್ಯಗಳ ಕೊನೆಯ ದಿನವಾಗಿದೆ. ಭಾರತ ಪಂದ್ಯಕ್ಕೂ ಮುನ್ನ ಮೊದಲಿಗೆ ದ.ಆಫ್ರಿಕಾ ಹಾಗೂ ಜಿಂಬಾಬ್ವೆ ಔಪಚಾರಿಕ ಪಂದ್ಯದಲ್ಲಿ ಎದುರಾಗಲಿವೆ. ಆಫ್ರಿಕಾ ಸೆಮಿಗೇರಿದೆ, ಜಿಂಬಾಬ್ವೆ ಈಗಾಗಲೇ ಹೊರಬಿದ್ದಿದೆ. ಈ ನಿಟ್ಟಿನಲ್ಲಿ ಈ ಪಂದ್ಯ ಅಂಕಪಟ್ಟಿ ಮೇಲೆ ಯಾವುದೇ ಪರಿಣಾಮವಾಗುವುದಿಲ್ಲ. ಆದಾಗ್ಯೂ ಪಂದ್ಯಾವಳಿಯನ್ನು ಗೆಲುವಿನೊಂದಿಗೆ ಮುಗಿಸಲು ಜಿಂಬಾಬ್ವೆ, ಗೆಲುವಿನೊಂದಿಗೆ ಸೆಮಿಗೇರಿ ಆತ್ಮವಿಶ್ವಾಸ ಹೆಚ್ಚಿಸಿಕೊಳ್ಳುವುದಕ್ಕಾಗಿ ದ.ಆಫ್ರಿಕಾ ಫೈಟ್ ನಡೆಸಲಿದೆ.

ಪಾಕಿಸ್ತಾನ ಹೊರಕ್ಕೆ, ನ್ಯೂಜಿಲೆಂಡ್ ಸೆಮಿಗೆ

• **ಪಲ್ಲೆಕೆಲೆ:** ದಾಖಲೆಯ ಜೊತೆಯಾಟ ನಿರ್ಮಿಸಿದ ಫರ್ಹಾನ್ ಮತ್ತು ಫಕರ್ ಜಮಾನ್ ಪಾಕಿಸ್ತಾನ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದು ಪಂದ್ಯ ಗೆಲ್ಲಿಸಿದರೂ ರನ್‌ರೇಟ್ ವೃದ್ಧಿಯಾಗದ ಕಾರಣದಿಂದ ಪಾಕ್ ತಂಡ ವಿಶ್ವಕಪ್‌ನಿಂದ ಹೊರಬಿದ್ದಿದೆ. ಇದರೊಂದಿಗೆ ಇಂಗ್ಲೆಂಡ್ ವಿರುದ್ಧ ಸೋತಿರುವ ನ್ಯೂಜಿಲೆಂಡ್ ಸೆಮಿಗೇರಿದೆ. ಪಂದ್ಯವನ್ನು ಪಾಕಿಸ್ತಾನ ದೊಡ್ಡ ಅಂತರದಲ್ಲಿ ಗೆಲ್ಲಬೇಕಾದ ಅನಿವಾರ್ಯದಲ್ಲಿತ್ತು. ಮೊದಲು ಬ್ಯಾಟಿಂಗ್ ಮಾಡಿ ಬರೋಬ್ಬರಿ 212 ರನ್ ಚಚ್ಚಿತು. ಫರ್ಹಾನ್ ಶತಕ ಹಾಗೂ ಜಮಾನ್ ಅವರ ಆಟದೊಂದಿಗೆ ದೊಡ್ಡ ಸ್ಕೋರ್ ನಿರ್ಮಿಸಿದ್ದ ಪಾಕಿಸ್ತಾನ ರನ್‌ರೇಟ್ ಹೆಚ್ಚಿಸಿಕೊಳ್ಳುವುದಕ್ಕೆ ಲಂಕಾ ತಂಡವನ್ನು 147ರ ಒಳಗಾಗಿ ತಡೆಯಬೇಕಿತ್ತು. ಆದರೆ ಶನಕ (76) ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ಗುರಿ ಬೆನ್ನತ್ತುವಾಗ ಶ್ರೀಲಂಕಾ 6 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಿ 5 ರನ್ ನಿಂದ ಸೋಲೊಪ್ಪಿಕೊಂಡಿತು.



▸▸ ಶನಕ ಪರಾಕ್ರಮಕ್ಕೆ ಒಲಿಯದ ಜಯ
▸▸ ಗೆದ್ದರೂ ಹೊರಬಿದ್ದ ಪಾಕ್

ಜಮಾನ್-ಫರ್ಹಾನ್ ಮಿಂಚಿನಾಟ: ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನಕ್ಕೆ ಹಿಂದೆಂದೂ ಸಿಗದ ಭರ್ಜರಿ ಆರಂಭ ಸಿಕ್ಕಿತು. ಫರ್ಹಾನ್ ವಿಶ್ವಕಪ್‌ನಲ್ಲಿ ಎರಡನೇ ಶತಕ ಬಾರಿಸಿದ್ದು ವಿಶ್ವದಾಖಲೆಯೊಂದನ್ನು ಮಾಡಿದರು. ಸ್ಯಾಮ್ ಅಯೂಬ್ ಹಾಗೂ ಬಾಬರ್ ಆಜಂ ಅವರನ್ನು ಹೊರಕೂಡಿಸಿದ ನಂತರ ಆರಂಭಿಕರಾಗಿ ಕಣಕ್ಕಿಳಿದ ಫಕರ್ ಜಮಾನ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಆರಂಭದಿಂದಲೂ ಪರಾಕ್ರಮ ಮೆರೆದ ಈ ಜೋಡಿ ದಾಖಲೆಯ 176 ರನ್‌ಗಳಿಸಿತು. ಜಮಾನ್ 84 ಕ್ಕೆ ವಿಕೆಟ್ ಒಪ್ಪಿಸಿದರು. ಫರ್ಹಾನ್ ವಿಶ್ವಕಪ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎಂಬ ವಿರಾಟ್ ಕೊಹ್ಲಿ ದಾಖಲೆ ಅಳಿಸಿದರು. ಇದಲ್ಲದೆ, 59 ಬಾಲ್‌ಗಳಲ್ಲಿ ಶತಕ ಪೂರೈಸಿ ಪಂದ್ಯಾವಳಿಯಲ್ಲಿ ಎರಡು ಶತಕ ಬಾರಿಸಿದ 2ನೇ ಆಟಗಾರ ಎನಿಸಿದರು. 179 ರನ್‌ಗಳಿಗೆ ಎರಡನೇ ವಿಕೆಟ್ ಕಳೆದುಕೊಂಡ ಪಾಕಿಸ್ತಾನ ಭಾರೀ ಕುಸಿತ ಅನುಭವಿಸಿತು. ಮುಂದಿನ ಬ್ಯಾಟರ್‌ಗಳು ಬರುತ್ತಲೇ ಪೆವಿಲಿಯನ್ ಹೊರಟತೊಡಗಿದರು. ಕೊನೆಯ ಮೂರೂವರೆ ಓವರುಗಳಲ್ಲಿ ಪಾಕಿಸ್ತಾನ 6 ವಿಕೆಟ್‌ಗಳನ್ನು ಕಳೆದುಕೊಂಡಿತು.

ಮೇನಲ್ಲಿ ಬೆಂಗಳೂರಲ್ಲಿ ಎರಡು ಎಟಿಪಿ ಕೂಟ

• **ಬೆಂಗಳೂರು:** ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಮೇ ತಿಂಗಳಲ್ಲಿ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ಮೇ 11ರಿಂದ 17ರವರೆಗೆ ಮತ್ತು ಮೇ 18ರಿಂದ 24ರವರೆಗೆ ನಿರಂತರವಾಗಿ ಎರಡು ಎಟಿಪಿ ಚಾಲೆಂಜರ್ ಟೂರ್ನಿಗಳನ್ನು ಆಯೋಜಿಸಲು ಸಜ್ಜಾಗಿದೆ.

ಈ ಎರಡು ವಾರಗಳ ಸ್ಪರ್ಧೆಗಳು ಪುರುಷರ ವೃತ್ತಿಪರ ಟೆನಿಸ್‌ನಲ್ಲಿ ಬೆಂಗಳೂರನ್ನು ದೇಶದ ಕೇಂದ್ರಬಿಂದುವಾಗಿಸಲಿದೆ. ಆಟಗಾರರಿಗೆ ಸ್ವದೇಶದಲ್ಲೇ ನಿರಂತರವಾಗಿ ಅಂಕಗಳನ್ನು ಗಳಿಸುವ ಅವಕಾಶದೊರೆಯಲಿದೆ. ಅಂತಾರಾಷ್ಟ್ರೀಯ ಟೆನಿಸ್ ಫೆಡರೇಶನ್ ಸ್ಪರ್ಧೆಗಳ ಮತ್ತು ಎಟಿಪಿ ಟೂರ್ ನಡುವಿನ ಸೇತುವೆಯಾಗಿ ಇರುವ ಚಾಲೆಂಜರ್ ಸ್ಪರ್ಧೆಗಳು ಉದಯೋನ್ಮುಖ ಆಟಗಾರರ ಬೆಳವಣಿಗೆಗೆ ಮಹತ್ವದ ಪಾತ್ರವಹಿಸುತ್ತವೆ.

ಇತ್ತೀಚೆಗೆ ನಡೆದ ಬೆಂಗಳೂರು ಓಪನ್ 125ರ ಯಶಸ್ವಿ 10ನೇ ಆವೃತ್ತಿ ಹಾಗೂ ಈ ತಿಂಗಳ ಆರಂಭದಲ್ಲಿ ನೆದರ್ಲ್ಯಾಂಡ್ಸ್ ವಿರುದ್ಧ ಭಾರತ ಸಾಧಿಸಿದ 3-2 ಡೇವಿಸ್ ಕಪ್ ಜಯದ ಬಳಿಕ ಈ ಘೋಷಣೆ ಬಂದಿದೆ. ಇದು ಕೆಎಸ್‌ಎಲ್‌ಟಿಎಯ ದೀರ್ಘಕಾಲೀನ ಯೋಜನೆಯ ಭಾಗವಾಗಿದೆ. ನಿರಂತರವಾಗಿ ಎರಡು ಚಾಲೆಂಜರ್ 50 ಟೂರ್ನಿಗಳನ್ನು ಪಡೆಯುವುದು ಬೆಂಗಳೂರನ್ನು ಉನ್ನತ ಮಟ್ಟದ ಟೆನಿಸ್ ಕೇಂದ್ರವಾಗಿ ರೂಪಿಸುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ.




ದೇಶದಲ್ಲೇ ಬಲಿಷ್ಠ ಅಂತಾರಾಷ್ಟ್ರೀಯ ಕ್ಯಾಲೆಂಡರ್ ನಿರ್ಮಾಣವಾದರೆ ಆಟಗಾರರು, ತರಬೇತುದಾರರು, ಅಧಿಕಾರಿಗಳು ಹಾಗೂ ಕ್ರೀಡಾಂಗಣದಲ್ಲಿ ಕುಳಿತು ನೋಡುವ ಯುವ ಪ್ರತಿಭೆಗಳಿಗೂ ಲಾಭವಾಗುತ್ತದೆ. ಈ ಸಾಧನೆ ಸಾಧ್ಯವಾಗಲು ಸಹಕರಿಸಿದ ಕ್ರೀಡಾ ಪ್ರಾಧಿಕಾರ, ಕರ್ನಾಟಕ ಸರ್ಕಾರ ಹಾಗೂ ನಮ್ಮ ಪ್ರಾಯೋಜಕರಿಗೆ ಕೃತಜ್ಞತೆಗಳು, ಎಂದು ಮಹೇಶ್ವರ ರಾವ್ (ಐಎಎಸ್), ಮಹಾನಗರ ಆಯುಕ್ತರು ಹಾಗೂ ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಹೇಳಿದರು.

ಇದಕ್ಕೂ ಮುನ್ನ ಬೆಂಗಳೂರು ನಗರದಲ್ಲಿ ಡೇವಿಸ್ ಕಪ್, ಬೆಂಗಳೂರು ಓಪನ್ (ಚಾಲೆಂಜರ್ 125) ಸೇರಿದಂತೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳು ಯಶಸ್ವಿಯಾಗಿ ನಡೆದಿವೆ. ಸುಮಿತ್ ನಾಗಲ್, ಪ್ರಜ್ನೇಶ್ ಗುನ್ನೇಶ್ವರನ್ ಅವರ ವೃತ್ತಿಜೀವನಕ್ಕೆ ಇಲ್ಲಿ ನಡೆದ ಸ್ಪರ್ಧೆಗಳು ಮಹತ್ವದ ವೇದಿಕೆ ಒದಗಿಸಿವೆ. ಇತ್ತೀಚೆಗೆ ವೈಷ್ಣವಿ ಅಡ್ಕರ್ ಸಾಧಿಸಿದ ಮಹತ್ವದ ಪ್ರಶಸ್ತಿ ಜಯವೂ ಬೆಂಗಳೂರಿನ ಬೆಳವಣಿಗೆಗೆ ಸಾಕ್ಷಿಯಾಗಿದೆ.

ಪದಬಂಧ

▸▸ ರಾಜಾ ಸಂಗಮೇಶ ಹಿರೇಮಠ



5910


5909 ಉತ್ತರ

ಎಡದಿಂದ ಬಲಕ್ಕೆ:
1.ಭುವನಮನೋಹರಿ
3.ಶಿವ 4.ಕಚ್ಚಿ 5.ಬೀಜಾಣು
7.ಮಜಕೂರು 9.ಪಾಕ್ರೃತ
11.ಮಂದಲಿಗೆ
13.ಮಣಿಭಾರ
15.ಕಿಲಬಿಲ 16.ತಿಲಗಾತ್ರ

ಮೇಲಿನಿಂದ ಕೆಳಕ್ಕೆ :
1.ಭುವನಜ 2.ಕೈಪಾಕರಿ
5.ಬೀರು 6.ಅಣು
8.ಕೂಡಲಿ 10.ಪಾಷಾಣ
11.ಮಂದಾನಿಲ
12.ಗೆಜ್ಜೆಟೀಕೆ
13.ಮಧುಮತಿ
14.ರಸಪಕ್ವ

ಎಡದಿಂದ ಬಲಕ್ಕೆ
1.ಕರ್ನಾಟಕವನ್ನಾಳಿದ ಪ್ರಾಚೀನ ರಾಜವಂಶ (3)
3.ವಿಶ್ವವನ್ನಾಳುವವನು-ಲೋಕನಾಯಕ (4)
5.ಕರುಣಾಸ್ವರೂಪಿ (4)
6.ಅಪಾರಪ್ರಮಾಣವನ್ನು ಸೂಚಿಸುವ ಪದ (4)
8.ಸಮಾಜದ ಒಟ್ಟು ಕಲ್ಯಾಣವನ್ನು ಹೀಗನ್ನುತ್ತೇವೆ (4)
11.ಅಡುಗೆ ಎಂಬ ಹೆಸರಿನ ರಾಕ್ಷಸನ ಶತ್ರು-ಇಂದ್ರ (4)
14.ಸೊಗಸು ಹೆಚ್ಚಾಗು-ಬಣ್ಣವೇರು (4)
15.ಕರ್ನಾಟಕದ ಭಾಷೆ ಮಾತನಾಡುವ ವ್ಯಕ್ತಿ (4)
16.ಬಂಧಮುಕ್ತಗೊಳಿಸು (4)
17.ತೂಕ ಅಳೆಯುವ ಸಾಧನವಿಲ್ಲಿ ತಿರುಗಿದೆ (3)

ಮೇಲಿನಿಂದ ಕೆಳಕ್ಕೆ
1.ಕೊಡದಲ್ಲಿ ಹುಟ್ಟಿದವನು-ಅಗಸ್ತ್ಯ (4)
2.ಪರಿವರ್ತಿಸು-ತಿರುವು ಮಾಡು (4)
3.ಈಕೆ ಗೆಲುವಿನ ಅಧಿದೇವತೆ (4)
4.ರಾಮಭಕ್ತ ಈ ಕುಲದ ಮಹಿಳೆ (3)
7.ಸಸ್ಯಗಳಿಂದ ದೊರಕುವ ಆಹಾರ ಪದಾರ್ಥ (4)
9.ಇತ್ತೀಚೆಗೆ ಬೆಳೆದ ಹೊಸ ಪೈರು (4)
10.ಆಶ್ಚರ್ಯಪಡು ಎಂಬರ್ಥದ ನುಡಿಗಟ್ಟು (4)
12.ಕಡಿಯು ನಡುವೆ ಕರಬೂಜ ಜಾತಿಯ ಹಣ್ಣು ಇದೆ (4)
13.ಸಾಧನೆಗಾಗಿ ಮಾನ್ಯತೆ ಪಡೆದವನು (4)
14.ಲಾಕ್ಷಣಿಕವಾಗಿ ಸಂಪತ್ತು-ಧನ (3)



ಸದ್ಯದಲ್ಲೇ ಸಸ್ಪೆನ್ಸ್ ಥ್ರಿಲ್ಲರ್ ಅಭೇದ್ಯಂ

ಯಾವುದೇ ವಸ್ತುವನ್ನು ಭೇದಿಸಲಾಗದೆ ಹೋದಾಗ ಅದನ್ನು ಅಭೇದ್ಯಂ ಎನ್ನುತ್ತಾರೆ. ಇಂಥದೇ ಕಂಟೆಂಟ್ ಇಟ್ಟುಕೊಂಡು ಮಾಡಿದ ಚಿತ್ರವಿದು, ಕಾಮಿಡಿ ಜತೆಗೆ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿರುವ ಚಲನಚಿತ್ರ ಇದಾಗಿದೆ. ಈಗಾಗಲೇ ಅಭೇದ್ಯಂ ಚಿತ್ರಕ್ಕೆ ಬೆಂಗಳೂರು, ಮಂಗಳೂರು ಸೇರಿದಂತೆ ಮುಂತಾದ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.





ದಕ್ಷಿಣ ಕನ್ನಡದ ಸಾಂಪ್ರದಾಯಿಕ ಕ್ರೀಡೆಯಾದ ವೀರಕಂಬಳ ಚಿತ್ರದ ರಾಷ್ಟ್ರಪ್ರಶಸ್ತಿ ವಿಜೇತ ನಿರ್ಮಾಪಕ ಅರುಣ್ ರೈ ತೋಡಾರು ಅವರು ಸದ್ದಿಲ್ಲದೆ ಮತ್ತೊಂದು ಚಿತ್ರವನ್ನು ನಿರ್ಮಾಣ ಮಾಡಿದ್ದು ಆ ಚಿತ್ರವೀಗ ಬಿಡುಗಡೆಗೆ ಸಿದ್ಧವಾಗಿದೆ, ಆ ಚಿತ್ರದ ಹೆಸರು ಅಭೇದ್ಯಂ. ಇತ್ತೀಚೆಗಷ್ಟೇ ಸೆಕೆಂಡ್ ಕೇಸ್ ಆಫ್ ಸೀತಾರಾಮ್ ಚಿತ್ರದಲ್ಲಿ ನಟಿಸಿದ್ದ ಚಿನ್ನಾರಿಮುತ್ತ ವಿಜಯ ರಾಘವೇಂದ್ರ ಅವರು ನಾಯಕರಾಗಿ ನಟಿಸಿರುವ ಈ ಚಿತ್ರಕ್ಕೆ ಸಂದೀಪ್ ಬಾರಾಡಿ ಕಥಾಹಂದರ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಕಾಮಿಡಿ ಕಿಲಾಡಿಗಳು ಖ್ಯಾತಿಯ ಯುವಾ ಶೆಟ್ಟಿ ಅವರು ಚಿತ್ರಕಥೆ ಬರೆದು ಕಾಸ್ಟಿಂಗ್ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸಿದ್ದಾರೆ, ಜೊತೆಗೆ ಪ್ರಮುಖವಾದ ಪಾತ್ರದಲ್ಲೂ ಸಹ ಕಾಣಿಸಿಕೊಂಡಿದ್ದಾರೆ. ಯುವಾ ಶೆಟ್ಟಿ ಹಾಗೂ ಡಿಬಿಸಿ ಶೇಖರ್ ಅಭೇದ್ಯಂ ಚಿತ್ರದ ಸಂಭಾಷಣೆಗಳನ್ನು ರಚಿಸಿದ್ದಾರೆ.

ಯಾವುದೇ ವಸ್ತುವನ್ನು ಭೇದಿಸಲಾಗದೆ ಹೋದಾಗ ಅದನ್ನು ಅಭೇದ್ಯಂ ಎನ್ನುತ್ತಾರೆ. ಇಂಥದೇ ಕಂಟೆಂಟ್ ಇಟ್ಟುಕೊಂಡು ಮಾಡಿದ ಚಿತ್ರವಿದು, ಕಾಮಿಡಿ ಜತೆಗೆ ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿರುವ ಚಲನಚಿತ್ರ ಇದಾಗಿದೆ. ಈಗಾಗಲೇ ಅಭೇದ್ಯಂ ಚಿತ್ರಕ್ಕೆ ಬೆಂಗಳೂರು, ಮಂಗಳೂರು ಸೇರಿದಂತೆ ಮುಂತಾದ ಲೊಕೇಶನ್‌ಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಈ ಗಾಗಲೇ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಕೂಡ ಮುಕ್ತಾಯಗೊಂಡು ಚಿತ್ರದ ಸೆನ್ಸಾರ್ ಪ್ರಕ್ರಿಯೆ ನಡೆದಿದೆ. ಸದ್ಯದಲ್ಲೇ ಅಭೇದ್ಯಂ ಚಿತ್ರವನ್ನು ರಾಜ್ಯಾದ್ಯಂತ ತೆರೆಗೆ ತರಲು ನಿರ್ಮಾಪಕರು ಸಿದ್ಧತೆ ನಡೆಸಿದ್ದಾರೆ.

ವರುಣ್ ಉನ್ನಿ ಕೊಚ್ಚಿನ್, ಕಿಶೋರ್, ಕುಮಾರ್ ಶೆಟ್ಟಿ ಅವರುಗಳು ಸಂಗೀತ ಸಂಯೋಜಿಸಿರುವ ಈ ಚಿತ್ರಕ್ಕೆ ಮಯೂರ್ ಆರ್. ಶೆಟ್ಟಿ ಅವರ ಛಾಯಾಗ್ರಹಣ, ಗಣೇಶ್ ನೀರ್ಚಾಲ್ ಅವರ ಸಂಕಲನ, ಮಾಸ ಮಾದ ಅವರ ಸಾಹಸ ನಿರ್ದೇಶನ, ಮಹೇಶ್ ಎಣ್ಣೂರ್ ಅವರ ಕಲಾ ನಿರ್ದೇಶನ ಹಾಗೂ ಸೂರಜ್(ಕಾಮಿಡಿ ಕಿಲಾಡಿಗಳು), ತರುಣ್ ರಾಜ್ ಅವರ ನೃತ್ಯನಿರ್ದೇಶನವಿದೆ. ಪ್ರಜ್ನೇಶ್ ಶೆಟ್ಟಿ ಅವರ ನಿರ್ಮಾಣ ನಿರ್ವಹಣೆಯಿರುವ ಅಭೇದ್ಯಂ ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿ ರಾಜೇಶ್ ಕುಡ್ಲ ಅವರು ಸಾಥ್ ನೀಡಿದ್ದಾರೆ.

ನಟ ವಿಜಯ ರಾಘವೇಂದ್ರ, ನಾಯಕರಾಗಿ ನಟಿಸಿರುವ ಅಭೇದ್ಯಂ ಚಿತ್ರದ ಉಳಿದ ತಾರಾಬಳಗದಲ್ಲಿ ರೋಶನ್ ವೇಗಸ್, ಸಿಂಚನ ಪಿ. ರಾವ್, ಸುಂದರ್ ವೀಣಾ, ಪ್ರಕಾಶ್ ತುಮ್ಮಿನಾಡು, ದೀಪಕ್ ರೈ ಪಾಣಾಜೆ, ಮೋಹನ್ ಶೇಣಿ, ಯುವಾ ಶೆಟ್ಟಿ ಹಾಗೂ ಕಾಮಿಡಿ ಕಿಲಾಡಿಗಳು ಖ್ಯಾತಿಯ ರಾಕೇಶ್ ಪೂಜಾರಿ, ಪ್ರವೀಣ್ ಜೈನ್, ಸೂರಜ್ ಪಾಂಡೇಶ್ವರ್, ಸೂರ್ಯ ಕುಂದಾಪುರ, ರಾದೇಶ್ ಶೆಣೈ ಮುಂತಾದವರು ನಟಿಸಿದ್ದಾರೆ.

ಹಯಗ್ರೀವ ವಿಚಿತ್ರ ಶವಗಳ ಹಿಂದಿನ ರಹಸ್ಯ

ಚಿತ್ರ ವಿಮರ್ಶೆ



▸ ಸತ್ಯಮೂರ್ತಿ

ಹಯಗ್ರೀವ ಮಹಾವಿಷ್ಣುವಿನ ಹತ್ತು ಅವತಾರಗಳಲ್ಲಿ ಒಂದು. ಈ ಪುರಾಣದ ಕಥೆಗೂ ಹಯಗ್ರೀವ ಚಿತ್ರಕ್ಕೂ ಏನೋ ಒಂದು ಸಂಬಂಧವಿದೆ, ಅದೇ ಆ ಚಿತ್ರದ ಕಂಟೆಂಟ್ ಕೂಡ, ಕಸದ ರಾಶಿಯಲ್ಲಿ ಮನುಷ್ಯನ ದೇಹಕ್ಕೆ ಪ್ರಾಣಿಯ ಮುಖವನ್ನು ಸ್ಟಿಚ್ ಮಾಡಲಾಗಿರುವ ಶವ ಸಿಗುತ್ತದೆ, ಅಲ್ಲಿ ಸತ್ತಿರೋರು ಯಾರು ಅಂತ ಗುರುತಿಸುವುದಕ್ಕೇ ಆಗದಂತೆ ಶವದ ಬೆರಳುಗಳನ್ನು ಸಹ ಕಟ್ ಮಾಡಲಾಗಿರುತ್ತೆ, ಹೀಗೆ ಒಂದರ ಮೇಲೊಂದರಂತೆ ಶವಗಳು ಸಿಕ್ಕಾಗ, ಹೀಗೆ ಕೊಲೆ ಮಾಡುತ್ತಿರುವವರು ಯಾರು? ಅನ್ನೋದನ್ನು ಕಂಡುಹಿಡಿಯುವುದೇ ಪೊಲೀಸರಿಗೆ ಸವಾಲಾಗತ್ತದೆ, ಅರ್ಜುನ್ ಹಯಗ್ರೀವ(ಧನ್ವೀರ್‌ಗೌಡ) ಕ್ರೈಂ ಬ್ರಾಂಚ್‌ನ ದಿಟ್ಟ ಪೊಲೀಸ್ ಆಫೀಸರ್, ನಗರದಲ್ಲಿ ಪತ್ತೆಯಾಗುವ ವಿಚಿತ್ರ ಶವಗಳ ಕೇಸ್ ಮಾಧ್ಯಮಗಳಲ್ಲಿ ದೊಡ್ಡ ಸುದ್ದಿಯಾಗುತ್ತದೆ.

ಪತ್ತೆಯಾಗುವ ಎಲ್ಲಾ ಶವಗಳ ತಲೆಗೆ ಬದಲಾಗಿ ಕುದುರೆ, ಕತ್ತೆ, ಕುದುರೆ ಹೀಗೆ ಪ್ರಾಣಿಗಳ ತಲೆಯನ್ನು ಜೋಡಿಸಿ ಹೊಲಿಗೆ ಹಾಕಲಾಗಿರುತ್ತದೆ. ಅಲ್ಲದೆ ಶವದ ಕೈ ಬೆರಳುಗಳನ್ನು ಸಹ ಕಟ್ ಮಾಡಲಾಗಿರುತ್ತದೆ. ಹಾಗಾಗಿ ಪೊಲೀಸರಿಗೆ ಆ ಶವಗಳ ಗುರುತು ಪತ್ತೆಹಚ್ಚುವುದೇ ಕಷ್ಟಸಾಧ್ಯವಾಗುತ್ತದೆ. ಈ ಕೇಸ್ ತನಿಖೆಗೆ ಕ್ರೈಂ ಬ್ರಾಂಚ್ ಇನ್ಸ್‌ಪೆಕ್ಟರ್ ಹಯಗ್ರೀವನೇ ಸೂಕ್ತ ಎಂದು ಕಮೀಷನರ್(ಅಶ್ವಿನಿಗೌಡ) ಆತನನ್ನು ಕರೆಸಿ ಈ ಪ್ರಕರಣದ ತನಿಖೆಗೆ ನೇಮಿಸುತ್ತಾರೆ. ಅರ್ಜುನ್ ಮುಷ್ಟಿಯಲ್ಲಿರುವ ಪೊಲೀಸ್ ಅಧಿಕಾರಿ, ಈ ತನಿಖೆಯ ಹಾದಿಯಲ್ಲಿ ಬಯಲಾಗುವ ಕೌತುಕಗಳೇ ಚಿತ್ರದ ಕಂಟೆಂಟ್. ಕಂಪ್ಲೀಟ್ ಮಿಸ್ಟರಿ, ಥ್ರಿಲ್ಲಿಂಗ್, ಸಸ್ಪೆನ್ಸ್ ಕಥಾಹಂದರ ಒಳಗೊಂಡ ಈ ಚಿತ್ರದ ಕೆಲವು ಪಾತ್ರಗಳು ಕರೆಮೇಲ್ ಇಷ್ಟ ಆಗುತ್ತವೆ. ಚೇತನ್‌ಸಿದ್ ಕಥೆ ಹೇಳಿರುವ ರೀತಿ ಚೆನ್ನಾಗಿದೆ, ಆರಂಭದಲ್ಲಿ ಹೇಗೆ ನೋಡಿದರೂ ಯಾವುದೇ ಸಿಳಿವು ಸಿಗದೆ ಹೋದಾಗ ಹಯಗ್ರೀವ ಎಲ್ಲಾ ಆ್ಯಂಗಲ್ ನಲ್ಲೂ ತನಿಖೆ ಮಾಡುತ್ತಾನೆ. ಆ ಕೊಲೆಗಾರ ಹಣ, ಒಡವೆಯಂಥ ಯಾವುದೇ ಆಸೆ ಇಲ್ಲದೆ ಏನಕ್ಕೆ ಇದೆಲ್ಲ ಮಾಡಿರಬಹುದು ಎಂದು ಶವಗಳ ಮೂಲ ಹುಡುಕುತ್ತ ಹೋದಂತೆ ಒಂದೊಂದಾಗಿ ಸತ್ಯಗಳು ಹೊರಬರುತ್ತೆ, ಆ ಸೀಕ್ರೇಟ್ ಏನು, ಮರ್ಡರರ್ ಯಾರು, ಆತನ ಉದ್ದೇಶವಾದರೂ ಏನು ಎನ್ನುವುದು ಚಿತ್ರದ ಕ್ಲೈಮ್ಯಾಕ್ಸ್ ಭಾಗದಲ್ಲಿ ಬಹಿರಂಗವಾಗುತ್ತೆ. ನಿರ್ದೇಶಕ ರಘುಕುಮಾರ್ ಇಡೀ ಚಿತ್ರದ ಕಥೆಯನ್ನು ಎಲ್ಲೂ ಬೋರ್ ಆಗದಂತೆ ತೆಗೆದುಕೊಂಡು ಹೋಗಿದ್ದಾರೆ. ಚಿತ್ರದ ಕ್ಯಾಮೆರಾ ವರ್ಕ್, ಸಂಗೀತ ಎಲ್ಲವೂ ಕಥೆಗೆ ಪೂರಕವಾಗಿ ಮೂಡಿಬಂದಿದೆ, ಅಚ್ಚರಿದಾಯಕ ಎಂಟ್ರಿ ಕೊಡುವ ಎಕ್ಸ್‌ಕ್ಯೂಸ್‌ಮಿ ಸುನಿಲ್‌ರಾವ್ ಅವರ ನೆಗೆಟಿವ್ ಪಾತ್ರ ಇಡೀ ಚಿತ್ರದಲ್ಲಿ ಸರ್‌ಪ್ರೈಸ್ ಆಗಿದೆ. ಎಕ್ಸ್‌ಕ್ಯೂಸ್ ಮಿ ಚಿತ್ರದ ನೆಗೆಟಿವ್ ರೋಲನ್ನು ನೆನಪಿಸುತ್ತದೆ. ಇವರದು ಡಾ.ಭಾಸ್ಕರ್ ಎಂಬ ಸೈಕೋ ಥರದ ಪಾತ್ರ, ನಾಯಕಿ ಸಂಜನಾ ಆನಂದ್ ಹಯಗ್ರೀವನ ಪತ್ನಿ ಡಾ.ಐಶ್ವರ್ಯ ಆಗಿ ಸಿಕ್ಕ ಅವಕಾಶದಲ್ಲಿ ಉತ್ತಮ ಅಭಿನಯ ನೀಡಿದ್ದಾರೆ. ಸ್ನೇಹಿತನಾಗಿ ನಟಿಸಿರುವ ಗಿಲ್ಲಿ ನಟ, ಚಿಕ್ಕಣ್ಣನ ಸ್ಥಾನ ತುಂಬಿದ್ದಾರೆ. ಈ ಥರದ ಮೆಡಿಕಲ್, ಥ್ರಿಲ್ಲರ್ ಕಾನ್ಸೆಪ್ಟ್ ಕನ್ನಡ ಚಿತ್ರರಂಗಕ್ಕೆ ಹೊಸದು. ಪ್ರತಿ ಸೀನ್ ಕುತೂಹಲ ಕೆರಳಿಸುತ್ತ ಸಾಗುವ ಮೂಲಕ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಗಿಲ್ಲಿಗೆ ಚಿತ್ರದಲ್ಲಿ ದೊಡ್ಡ ಪಾತ್ರವಿಲ್ಲ, ಇನ್ನು ಕೆಲವು ಪಾತ್ರಗಳು ಹೀಗೆ ಬಂದು ಹಾಗೆ ಹೋಗುತ್ತವೆ. ಅದು ಬಿಟ್ಟರೆ, ಕ್ರೈಂ ಸಸ್ಪೆನ್ಸ್ ಇಷ್ಟ ಪಡೋರಿಗೆ ಈ ಸಿನಿಮಾ ರುಚಿಸುತ್ತದೆ,



ಅಬ್ದುಲ್‌ಕಲಾಂರ ಕಾರುಚಾಲಕ ಒರಿಯೋ ಚಿತ್ರದ ನಿರ್ದೇಶಕ



ಮಾಜಿ ರಾಷ್ಟ್ರಪತಿ ದಿ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಕಾರು ಚಾಲಕನಾಗಿ ಕೆಲಸ ಮಾಡಿದ್ದ ನಂದನ್ ಪ್ರಭು ಅವರು ಇದೀಗ ಅವರ ಮಾತುಗಳ ಸ್ಫೂರ್ತಿಯಿಂದಲೇ ಒರಿಯೋ ಎಂಬ ಚಿತ್ರವನ್ನು ನಿರ್ದೇಶಿಸಿದ್ದಾರೆ, ಬಿಎಂಟಿಸಿ ಕಂಡಕ್ಟರ್ ಕೂಡ ಆಗಿದ್ದ ನಂದನ್ ಪ್ರಭು ಅವರು ಈ ಹಿಂದೆ ಪ್ರೀತಿಯಲೋಕ ಹಾಗೂ ಲವ್ ಈಸ್ ಪಾಯಸನ್ ಎಂಬ ಎರಡು ಚಿತ್ರಗಳನ್ನು ನಿರ್ದೇಶಿಸಿದ್ದರು. ನಂದನ್ ಪ್ರಭು ಅವರ ನಿರ್ದೇಶನದ ಮತ್ತೊಂದು ಚಿತ್ರ ಒರಿಯೋ ಇದೀಗ ಬಿಡುಗಡೆಗೆ ಸಿದ್ಧವಾಗಿದೆ. ಇದೇ ತಿಂಗಳ 6ರಂದು ಒರಿಯೋ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಕಾಣಲಿದೆ,

ಒರಿಯೋ ಚಿತ್ರದ ಕುರಿತಂತೆ ಮಾತನಾಡಿದ ನಿರ್ದೇಶಕ ನಂದನಪ್ರಭು, ಒರಿಯೋ ಒಂದು ಪಕ್ಕಾ ಕಮರ್ಷಿಯಲ್ ಚಿತ್ರ, ಇದರ ಚಿತ್ರಕಥೆಯೇ ವಿಶೇಷವಾಗಿದೆ, ಒರಿಯೋ ಎಂಬ ಪದಕ್ಕೆ ಒಂದೊಂದು ದೇಶದಲ್ಲಿ ಒಂದೊಂದು ಅರ್ಥವಿದೆ. ನಮ್ಮ ಚಿತ್ರಕ್ಕೆ ಇದೇ ಶೀರ್ಷಿಕೆ ಇಟ್ಟಿರುವ ಕಾರಣ ಚಿತ್ರ ನೋಡಿದಾಗ ಖಂಡಿತ ಗೊತ್ತಾಗುತ್ತದೆ. ಚಿತ್ರದಲ್ಲಿ ಎಲ್ಲರಿಗೂ ಅನ್ವಯವಾಗುವಂಥ ಒಂದು ಸಂದೇಶವಿದೆ, ನಮ್ಮ ಚಿತ್ರಕ್ಕೆ ಸಕಲೇಶಪುರ, ಮಡಿಕೇರಿ ಹಾಗೂ ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ, ತುಂಬಾ ಹಿಂದೆ ನಾನು ಎಪಿಜೆ ಅಬ್ದುಲ್ ಕಲಾಂ(ರಾಷ್ಟ್ರಪತಿ ಆಗುವುದಕ್ಕಿಂತ ಮುಂಚೆ) ಅವರ ಕಾರು ಚಾಲಕನಾಗಿದ್ದೆ. ಅವರು ನನ್ನೊಂದಿಗೆ ಮಾತಾಡುವಾಗ ಒಂದಷ್ಟು ಗಹನವಾದ ವಿಷಯಗಳನ್ನು ಹೇಳುತ್ತಿದ್ದರು, ಆ ಮಾತುಗಳೇ ನನ್ನ ಈ ಚಿತ್ರದ ಕಥೆಗೆ ಸ್ಫೂರ್ತಿ ಎನ್ನಬಹುದು. ನಾವು ಎಚ್ಚರ ತಪ್ಪಿದರೆ, ಮುಂದೊಂದು ದಿನ ಹೀಗೂ ಆಗಬಹುದು ಎಂಬ ಎಚ್ಚರಿಕೆಯ ಸಂದೇಶವನ್ನು ಇಡೀ ವಿಶ್ವಕ್ಕೆ ನೀಡುವಂಥ ವಿಭಿನ್ನ ಕಥಾಹಂದರ ಒರಿಯೋ ಚಿತ್ರದಲ್ಲಿದೆ. ಹಾರರ್ ಕಂಟೆಂಟ್ ಜೊತೆಗೆ ಪರಿಸರ ಕಾಳಜಿಯನ್ನು ಮೂಡಿಸುವ ಅಂಶವೂ ನಮ್ಮ ಸಿನಿಮಾದಲ್ಲಿದೆ. ಪೋಸ್ಟರಿನಲ್ಲಿ ತೋರಿಸಿರುವ 5 ಹೆಡೆಯ ಹಾವಿಗೂ ಚಿತ್ರಕಥೆಗೂ ಲಿಂಕ್ ಇದೆ ಎಂದು ಹೇಳಿದರು. ಇನ್ನು ಒರಿಯೋ ಚಿತ್ರದಲ್ಲಿ ನಾಯಕನಾಗಿ ನಿತಿನ್‌ಗೌಡ ಕಾಣಿಸಿಕೊಂಡಿದ್ದು, ನಾಯಕಿಯ ಪಾತ್ರದಲ್ಲಿ ನಟಿ ಶುಭಿ ಅವರು ಬಣ್ಣ ಹಚ್ಚಿದ್ದಾರೆ.

ಒರಿಯೋ ಚಿತ್ರದ ಮತ್ತೊಬ್ಬ ನಾಯಕನಾಗಿ ಸುಚಿತ್ ಮಂಜುನಾಥ್ ಅವರು ನಟಿಸಿದ್ದಾರೆ, ರಥಾವರ, ವೈರ ಹಾಗೂ ಪುಟಾಣಿ ಪಂಟ್ರು ಚಿತ್ರಗಳ ನಂತರ ಅಭಿನಯಿಸುತ್ತಿರುವ ಚಿತ್ರವಿದು. ಇದರಲ್ಲಿ ಒಬ್ಬ ಸಾಮಾನ್ಯ ಕ್ಯಾಬ್ ಡ್ರೈವರ್ ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ, ಒಂದು ಸಂದರ್ಭದಲ್ಲಿ ನಾವೆಲ್ಲ ಕಾಡಿಗೆ ಹೋದಾಗ ಅಲ್ಲಿ ಏನೇನಾಗುತ್ತದೆ ಎನ್ನುವುದೇ ಈ ಚಿತ್ರದ ಮುಖ್ಯಕಥೆ, ನಟಿ ಯುಕ್ತ ಅವರು ನನ್ನ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ ಎಂದು ಸುಚಿತ್ ಮಂಜುನಾಥ್ ಹೇಳಿದರು. ಚಕ್ರವರ್ತಿ ಅವರು ಈ ಚಿತ್ರದಲ್ಲಿ ಕಾಮಿಡಿ ಪಾತ್ರವನ್ನು ನಿರ್ವಹಿಸಿದ್ದಾರೆ. ಸಂಗೀತ ನಿರ್ದೇಶಕ ಸಾಯಿಕಿರಣ್ ಚಿತ್ರದ ಬಗ್ಗೆ ಮಾತನಾಡುತ್ತ ಇದು ನನ್ನ ಸಂಗೀತ ನಿರ್ದೇಶನದ ಆರನೇ ಚಿತ್ರ. ಚಿತ್ರದಲ್ಲಿ ಒಂದು ಹಾಡು ಹಾಗೂ 4 ಬಿಟ್‌ಗಳಿವೆ ಎಂದು ಹೇಳಿದರು. ಒರಿಯೋ ಚಿತ್ರಕ್ಕೆ ಕಥೆ, ಚಿತ್ರಕಥೆ. ಸಂಭಾಷಣೆಗಳನ್ನು ನಿರ್ದೇಶಕ ನಂದನ ಪ್ರಭು ಅವರೇ ಬರೆದಿದ್ದಾರೆ. ವಿಜಯಶ್ರೀ ಆರ್. ಎಂ. ಹಾಗೂ ವೈಶಾಲಿ ವೈ.ಜೆ. ಚಿತ್ರದ ನಿರ್ಮಾಪಕರು. ಟಿ.ಕೃಷ್ಣಪ್ಪ ಹಾಗೂ ರೇಣುಕಾ ಪ್ರಭಾಕರ ಚಿತ್ರದ ಸಹ ನಿರ್ಮಾಪಕರು, ಬ್ಯಾಟಪ್ಪ ಗೌಡ, ಪ್ರಭಾಕರ್ ಅವರ ಛಾಯಾಗ್ರಹಣ ಒರಿಯೋ ಚಿತ್ರಕ್ಕಿದೆ.

ರೈಸ್ ಆಫ್ ಅಶೋಕ ಅಮಾಯಕ ಸಿಡಿದು ನಿಂತಾಗ..



ತಲೆಗೂದಲು ತೆಗೆಯುವ ಹಾಗೂ ನಾದಸ್ವರ ನುಡಿಸುವ ಜನರ ಬದುಕು ಬವಣೆ, ಸಮಸ್ಯೆಗಳ ಸುತ್ತ ಹೆಣೆಯಲಾದ ಕಥಾಹಂದರವನ್ನು ಈವಾರ ತೆರೆಕಂಡಿರವ ದ ರೈಸ್ ಆಫ್ ಅಶೋಕ ಚಿತ್ರದಲ್ಲಿ ಹೇಳಲಾಗಿದೆ, ಕೂದಲು ಮಾರಾಟದ ದಂದೆಯ ನಡುವೆ ಸರಕಾರಿ ಕೆಲಸ ಪಡೆಯಲು ಹರಸಾಹಸಪಡುವ ಹುಡುಗ ಬದುಕಿನಲ್ಲಿ ಎದುರಾಗುವ ನೋವು, ಹಿಂಸೆ ಸಹಿಸಿ ಮುಂದೆ ಜ್ವಾಲಾಶಕ್ತಿಯಾಗಿ ಹೋರಾಡುವ ಕಥೆಯಿದು, ಮುಡಿಕೊಡಲು ಬರುವ ಭಕ್ತರ ಕೂದಲು ತೆಗೆಯುವ ಕಾಯಕ ಮಾಡಿಕೊಂಡಿದ್ದ ಗಂಗಣ್ಣ(ಬಿ.ಸುರೇಶ್)ನಿಗೆ ತನ್ನ ಮಗನಿಗೆ ಈಕೆಲಸ ಮಾಡುವುದು ಬೇಡ, ಆತ ಚೆನ್ನಾಗಿ ಓದಿಕೊಂಡು ಸರ್ಕಾರಿ ಕೆಲಸಕ್ಕೆ ಸೇರಬೇಕು ಅನ್ನೋ ಆಸೆ, ಅಪ್ಪನ ಆಸೆಯಂತೆ ಅಶೋಕ (ನೀನಾಸಂ ಸತೀಶ್) ಚೆನ್ನಾಗಿ ಓದಿ ರೆವಿನ್ಯೂ ಅಧಿಕಾರಿ ಹುದ್ದೆಗೆ ಪರೀಕ್ಷೆ ಬರೆಯುತ್ತಾನೆ, ತಾಯಿ ಇಲ್ಲದ ಹುಡುಗಿ ಅಂಬಿಕಾ(ಸಪ್ತಮಿ ಗೌಡ)ಳನ್ನು ಆಕೆಯ ತಂದೆ ಉದ್ಯೋಗದಲ್ಲಿರುವ ವರನಿಗೇ ಕೊಟ್ಟು ಮದುವೆ ಮಾಡಬೇಕೆಂದು ಆಸೆಪಡುತ್ತಾನೆ. ಈ ನಡುವೆ ಕೂದಲ ವ್ಯಾಪಾರವನ್ನು ದಂಧೆಯಾಗಿಸಿಕೊಂಡು ಗ್ರಾಮದ ದೇವಿಯ ದೇವಸ್ಥಾನ ಸೇರಿದಂತೆ ಅಕ್ಕಪಕ್ಕದ ಊರಿನ ಗ್ರಾಮದ ಮುಡಿಕಟ್ಟೆಯ ಟೆಂಡರ್‌ಗಳನ್ನು ತನ್ನ ಕೈವಶದಲ್ಲಿಟ್ಟುಕೊಂಡಿರುವ ಕುಟ್ಟಿ ಬಾಬ್ಬಿ (ಸಂಪತ್ ಮೈತ್ರೇಯಾ) ತನ್ನ ಪುತ್ರ(ಯಶ್ ಶೆಟ್ಟಿ)ನ ರೌಡಿ ಗ್ಯಾಂಗ್ ಮೂಲಕ ಜನರನ್ನು ಎದುರಿಸುತ್ತಾ ಕೂದಲು ಮಾರಾಟ ಮಾಡುತ್ತಿರುತ್ತಾನೆ. ಈ ವೃತ್ತಿಯನ್ನೇ ನಂಬಿ ಬದುಕುವರಿಗೆ ನಾಕಾಣೆ ನೀಡಿ ಉಳಿದ ಹಣವನ್ನು ತನ್ನಲ್ಲೇ ಇಟ್ಟುಕೊಳ್ಳುತ್ತಿರುತ್ತಾನೆ, ತನ್ನ ವಿರುದ್ಧ ಧ್ವನಿ ಎತ್ತಿದವರನ್ನು ಮಟ್ಟ ಹಾಕುವ ಈ ರಾಕ್ಷಸನನ್ನು ಕಂಡರೆ ಜನರೆಲ್ಲ ಭಯಪಡುತ್ತಾರೆ. ಸುತ್ತಮುತ್ತಲಿನ ಜನರ ಸಾವಿಗೆ ಕುಟ್ಟಿ ಬಾಬ್ಬಿಯೇ ಕಾರಣ ಎಂಬುದನ್ನು ಅರಿತ ಅಶೋಕ ಅಲ್ಲಿನ ಜಿಲ್ಲಾಧಿಕಾರಿ (ರವಿಶಂಕರ್)ಗೆ ವಿಷಯ ಮುಟ್ಟಿಸುತ್ತಾನೆ. ವಿದ್ಯಾವಂತನಾದ ಅಶೋಕ ಕೂದಲು ಟೆಂಡರ್ ಪಡೆದು ತನ್ನ ಜನರನ್ನು ಕಾಪಾಡಿಕೊಳ್ಳಲು ಮುಂದಾಗುತ್ತಾನೆ. ಮುಂದೆ ಎದುರಾಗುವ ಘಟನೆಗಳಲ್ಲಿ ಹಿಂದುಳಿದ ಜನಾಂಗದ ಬದುಕಿಗೆ ದೊಡ್ಡ ಸಂಕಷ್ಟ ಎದುರಾಗುತ್ತದೆ, ಅದೇನು. ಹೇಗೆ... ಅಶೋಕ ಸರ್ಕಾರಿ ಕೆಲಸಕ್ಕೆ ಸೇರುತ್ತಾನಾ... ತನ್ನ ಪ್ರೀತಿ ಪಡೆಯುತ್ತಾನಾ... ಸಮುದಾಯದ ಜನರ ಪರ ನಿಲ್ಲುತ್ತಾನಾ ಎಂಬುದಕ್ಕೆ ಉತ್ತರ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿದೆ.

ನೊಂದ ಸಮುದಾಯದ ಜ್ವಾಲೆಯ ಶಕ್ತಿ...

ಒಂದು ಕಾಲದಲ್ಲಿ ಮೇಲ್ವರ್ಗದವರು ಕೆಳವರ್ಗದವರ ಮೇಲೆ ನಡೆಸುತ್ತಿದ್ದ ದಬ್ಬಾಳಿಕೆ, ದೌರ್ಜನ್ಯದ ವಿರುದ್ಧ ಸಿಡಿದೇಳುವ ಸಮುದಾಯದ ಕ್ರಾಂತಿಯ ಜ್ವಾಲೆಯನ್ನ ತೆರೆಯ ಮೇಲೆ ತಂದಿರುವಂತಹ ರೀತಿ ಗಮನ ಸೆಳೆಯುತ್ತದೆ. ಈ ಚಿತ್ರದ ಹಾಡುಗಳು, ಹಿನ್ನೆಲೆ ಸಂಗೀತ ಉತ್ತಮವಾಗಿದೆ. ಅದೇ ರೀತಿ ಚಿತ್ರದ ಕ್ಯಾಮೆರಾ ವರ್ಕ್ ಚೆನ್ನಾಗಿದೆ, ಇಡೀ ಚಿತ್ರವನ್ನು ನಾಯಕನಟ ನೀನಾಸಂ ಸತೀಶ್ ಅವರೇ ಆವರಿಸಿಕೊಂಡಿದ್ದಾರೆ. ಸಮಾಜದಲ್ಲಿ ಉನ್ನತ ಸ್ಥಾನಮಾನ ಪಡೆಯಬೇಕೆಂದು ಆಸೆ ಪಡೆಯುವ ಹಿಂದುಳಿದ ವರ್ಗದ ಹುಡುಗನ ಪಾತ್ರಕ್ಕೆ ಜೀವ ತುಂಬಿ ಅಭಿನಯಿಸಿದ್ದಾರೆ. ನಾಯಕಿ ಸಪ್ತಮಿ ಗೌಡ ಕೂಡ ಲವಲವಿಕೆಯಿಂದ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ನಾಯಕನ ತಂದೆಯಾಗಿ ಬಿ. ಸುರೇಶ್ ಅಮಾಯಕ ವ್ಯಕ್ತಿಯ ಪಾತ್ರಕ್ಕೆ ಜೀವ ತುಂಬಿ ನಟಿಸಿದ್ದಾರೆ,

ಕುಟ್ಟಿ ಬಾಬ್ಬಿ ಪಾತ್ರದಲ್ಲಿ ಸಂಪತ್ ಮೈತ್ರೇಯಾ ಸಿಕ್ಕ ಅವಕಾಶವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಸಿಂಹಪುರಿಯ ಸಿಂಹ ಟ್ರೈಲರ್ ಬಿಡುಗಡೆ





ಇತ್ತೀಚೆಗೆ ಟೀಸರ್ ಹಾಗೂ ಒಂದು ಸಾಂಗ್ ಬಿಡುಗಡೆ ಮಾಡಿ ಕುತೂಹಲ ಮೂಡಿಸಿದ ಚಿತ್ರ ಸಿಂಹಪುರಿಯ ಸಿಂಹ ಒಂದು ರಹಸ್ಯ ಕಥೆಯೊಂದಿಗೆ ಬಿಡುಗಡೆ ಸಜ್ಜಾಗಿದೆ ಸಿಂಹಪುರಿಯ ಚಿತ್ರತಂಡ. ಚಿತ್ರದ ನಾಯಕನಾಗಿ ಕೆ.ವೈ. ಮೂರ್ತಿ ಅಭಿನಯಿಸಿದ್ದು, ನಾಯಕಿಯಾಗಿ ನಟಿ ಸೌಜನ್ಯ ಅಭಿನಯಿಸಿದ್ದಾರೆ. ಇನ್ನ ಈ ಚಿತ್ರದ ವಿಲನ್‌ಗಳಾಗಿ ಸುಧೀನ್ ಕುಮ್ಟ ನಿಲೇಶ್‌ಗೌಡ ಅಭಿನಯಿಸಿದ್ದಾರೆ. ಸಹಕಲಾವಿದರಾಗಿ ಶಂಕರ್‌ಭಟ್, ಉಮೇಶ್, ಬ್ಯಾಂಕ್ ಜನಾರ್ಧನ್, ಜೂನಿಯರ್ ದ್ವಾರಕೀಶ್, ಪದ್ಮ ವಸಂತಿ, ರೇಖಾದಾಸ್, ಪ್ರಸನ್ನ ಹಾಗೂ ಮುತ್ತುರಾಜ್ ಸೇರಿದಂತೆ ಹಲವು ಕಲಾವಿದರು ಅಭಿನಯಿಸಿದ್ದಾರೆ. ಸಿಂಹಪುರಿಯ ಸಿಂಹ ಚಿತ್ರದ ಆಡಿಯೋ ಬಿಡುಗಡೆ ಕಾರ್ಯಕ್ರಮಕ್ಕೆ ಕೋಡಿಮಠದ ಸ್ವಾಮಿಗಳು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು,

ಸಿಂಹಪುರಿಯ ಸಿಂಹ ಚಿತ್ರದ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿರುವವರು ಕೆ.ವೈ. ಮೂರ್ತಿ. ಚಿತ್ರದ ನಿರ್ಮಾಪಕರು ಸಹ ಅವರೇ. ಚಿತ್ರದ ಛಾಯಾಗ್ರಹಣ ಗುರುದತ್ ಮುಸುರಿ, ಮನೋಹರ್, ಸಿ.ಎಸ್. ಸತೀಶ್, ಸಂಗೀತ ಕೃಪಾಕರ್, ಸಂಕಲನ ಅರುಣ್ ಬೆಂಗಳೂರು ಮೂವೀಸ್, ಸಾಹಸ ದೃಶ್ಯ ಅಲ್ಟಿಮೇಟ್ ಶಿವು, ಜಾನಿ ಮಾಸ್ಟರ್, ಸಂಭಾಷಣೆ ಸುದರ್ಶನ್ ಅವರದು. ಈ ಚಿತ್ರಕ್ಕೆ ಸಂಗೀತ ಸಂಯೋಜನೆ, ಗಾಯಕರು ರಾಜೇಶ್ ಕೃಷ್ಣನ್, ಹೇಮಂತ್, ಅನುರಾಧ ಭಟ್, ಪ್ರಿಯಾ ಯಾದವ್, ಸ್ನೇಹಪ್ರಿಯ ನಾಗರಾಜ್ ಹಾಗೂ ನೃತ್ಯ ಸಂಯೋಜಕರಾಗಿ (ಸಂಧ್ಯಾರಾಜ್) ರಾಜದೇವ್ ಕಾರ್ಯನಿರ್ವಹಿಸಿದ್ದಾರೆ. ಚಿತ್ರ ಏಪ್ರಿಲ್ ತಿಂಗಳಲ್ಲಿ ಬಿಡುಗಡೆಯಾಗಲಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26